ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 40 ಪುಟ 16 | ಅಕ್ಟೋಬರ್ 2,2016 | ರೂ. 10/-

web: www.janashakthi.co.in e-mail : js_weekly@yahoo.com



ಗುಜರಾತ್ ಮಾದರಿಗೆ ಸವಾಲಾದ ಜಿಗ್ನೇಶ್ ಮೆವಾನಿ



CITU 13 ರಾಜ್ಯ ಸಮ್ಮೇಳನ

ಕೆಂಪಾಯಿತು ಶರಣ ನಾಡು

ಉರಿ ಭಯೋತ್ಪಾದನೆ : ಹಾರಾಟ ಸಾಕು ಸಮಚಿತ್ತದ ಪ್ರತಿಕ್ರಿಯೆ ಬೇಕು



ಸ್ವಾಭಿಮಾನ ಸಂಘರ್ಷ ರ್‍ಯಾಲಿ

ಕಾವೇರಿ: ಮೋದಿ ಮಧ್ಯಪ್ರವೇಶಕ್ಕೆ ಹಿಂಜರಿಕೆ ಯಾಕೆ?



ಬಡವರಿಗೆ ಮುಳುವಾಗುತ್ತಿರುವ ಆಧಾರ್: ಸಿಪಿಐ(ಎಂ)

ರೈಲು ಬಜೆಟ್ ಸಾಮಾನ್ಯ ಬಜೆಟಿನೊಂದಿಗೆ ವಿಲೀನ ಭಾರತೀಯ ರೈಲ್ವೆಯ ಖಾಸಗೀಕರಣ, ವ್ಯಾಪಾರೀಕರಣದತ್ತ ಒಂದು ಕ್ರಮ–ಸಿಪಿಐ(ಎಂ) ಟೀಕೆ

ಪ್ರತಿ ವರ್ಷ ರೈಲು ಮಂತ್ರಿಗಳು ಪ್ರತ್ಯೇಕ ರೈಲು ಬಜೆಟನ್ನು ಸಂಸತ್ತಿನಲ್ಲಿ ಮಂಡಿಸುವ ವಾಡಿಕೆಯನ್ನು ಕೈಬಿಟ್ಟು ಅದನ್ನು ಹಣಕಾಸು ಮಂತ್ರಿಗಳು ಮಂಡಿಸುವ ಸಾಮಾನ್ಯ ಬಜೆಟಿನೊಂದಿಗೆ ಸೇರಿಸಲು ಕೇಂದ್ರ ಸಂಪುಟ ನಿರ್ಧರಿಸಿದೆ.

ಇದೊಂದು ಸಂಸತ್ತಿನಲ್ಲಿ ಚರ್ಚೆ ಮಾಡದೆ ಸರಕಾರ ಕೈಗೊಂಡಿರುವ ಏಕಪಕ್ಷೀಯ ನಿರ್ಧಾರ. ರೈಲ್ವೆ ಹಣಕಾಸಿನ ಮತ್ತು ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡುವ ಅಧಿಕಾರ ಸಂಸತ್ತಿನದ್ದು. ವಾಸ್ತವವಾಗಿ ಪ್ರತ್ಯೇಕ ರೈಲು ಬಜೆಟನ್ನು ರದ್ದು ಮಾಡಿರುವುದು ಭಾರತೀಯ ರೈಲ್ವೆಯ ವ್ಯಾಪಾರೀಕರಣ ಮತ್ತು ಖಾಸಗೀಕರಣದತ್ತ ಒಂದು ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಭಾರತೀಯ ರೈಲ್ವೆ ದೇಶದಲ್ಲಿ ಅತಿ ದೊಡ್ಡ ಸಾರ್ವಜನಿಕ ಸಾರಿಗೆ ವ್ಯವಸ್ಥೆ. ಕೋಟ್ಯಂತರ ಸಾಮಾನ್ಯ ಜನರು ಅದನ್ನು ಬಳಸುತ್ತಾರೆ. ಈ ಸಾರ್ವಜನಿಕ ಸಾರಿಗೆ ಸೇವಾ ವ್ಯವಸ್ಥೆಯನ್ನು ಕೇವಲ ವ್ಯಾಪಾರದ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ.

ಸಂಸತ್ತಿನಲ್ಲಿ ಮಂಡಿಸುವ ರೈಲು ಬಜೆಟ್ ಅದರ ಹಣಕಾಸು ಮತ್ತು ಖರ್ಚುಗಳನ್ನು ಪರೀಕ್ಷಿಸಲು ಜನರ ಚುನಾಯಿತ ಪ್ರತಿನಿಧಿಗಳಿಗೆ ಒಂದು ಅವಕಾಶ ಒದಗಿಸುತ್ತಿತ್ತು. ರೈಲ್ವೆ ವ್ಯವಸ್ಥೆಯ ವಿಸ್ತರಣೆಯ ಕುರಿತು ಚರ್ಚೆ ನಡೆಸಲು ಅವಕಾಶ ಕೊಡುತ್ತಿತ್ತು. ರೈಲು ಬಜೆಟ್ ರದ್ಧತಿಯೊಂದಿಗೆ ಇವೆಲ್ಲ ಕಡಿತಗೊಳ್ಳುತ್ತವೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಸರಕಾರದ ಈ ನಿರ್ಧಾರ ಭಾರತೀಯ ರೈಲ್ವೆಯ ವ್ಯಾಪಾರೀಕರಣ ಮತ್ತು ಖಾಸಗೀಕರಣದ ನೀಲನಕ್ಷೆಯನ್ನು ತಯಾರಿಸಿರುವ ಬಿಬೇಕ್ ದೇಬ್‌ರಾಯ್ ಸಮಿತಿಯ ಶಿಫಾರಸಿಗೆ ಅನುಗುಣ ವಾಗಿರುವಂತದ್ದು.

ಜನತೆಯ ಮಟ್ಟಿಗೆ ಇದು ರೈಲ್ವೆ ದರಗಳಲ್ಲಿ ತೀವ್ರ ಹೆಚ್ಚಳದ ಮತ್ತು ಶ್ರೀಮಂತ ಪ್ರಯಾಣಿಕರು ಮತ್ತು ಬಡ ಪ್ರಯಾಣಿಕರಿಗೆ ದೊರೆಯುವ ಸೇವೆಗಳಲ್ಲಿ ಕಂದರ ಹೆಚ್ಚುವ ಮುನ್ಸೂಚನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಸಿದೆ.

ಗಂಭೀರ ಪ್ರಶ್ನೆಗಳನ್ನು ಎತ್ತಿದೆ, ದೊಡ್ಡ ಆಪತ್ತಿನ ಮುನ್ಸೂಚನೆ–ಯೆಚೂರಿ

ಸಂಸತ್ತಿಗೆ ರೈಲು ಬಜೆಟನ್ನು ಸಲ್ಲಿಸುವುದನ್ನು ತರಾತುರಿಯಿಂದ ರದ್ದು ಮಾಡಿರುವುದು ಗಂಭೀರ ಪ್ರಶ್ನೆಗಳನ್ನು ಎತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹೇಳಿದ್ದಾರೆ.

ಕಳೆದ ವರ್ಷ ರೈಲು ಬಜೆಟ್ ಮಂಡಿಸುತ್ತ ರೈಲು ಮಂತ್ರಿಗಳು ರೈಲ್ವೆ ನಿರ್ವಹಣೆಯ ಅನುಪಾತ 0.92 ಮೀರುವುದಿಲ್ಲ ಎಂದು ಭರವಸೆ ಕೊಟ್ಟಿದ್ದರು. ಅಂದರೆ ಖರ್ಚು ಆದಾಯವನ್ನು ಮೀರುವುದಿಲ್ಲ, ಪ್ರತಿ 1ರೂ. ಆದಾಯದಲ್ಲಿ 92ಪೈಸೆ ಖರ್ಚು ಮಾಡಲಾಗುವುದು ಎಂದು. ಆದರೆ ಈ ಬಾರಿ ರೈಲ್ವೆ ಸಾಗಣೆ ಪ್ರಮಾಣ ಮತ್ತು ಆದಾಯ ಎರಡೂ ತೀವ್ರವಾಗಿ ಕುಗ್ಗಿರುವುದರಿಂದ ನಿರ್ವಹಣೆಯ ಅನುಪಾತವನ್ನು ದಾಟುವ ಸಂಭವವಿದೆ, ಅಂದರೆ ಆದಾಯಕ್ಕಿಂತ ಹೆಚ್ಚು ಖರ್ಚು ಆಗುವ ಸಾಧ್ಯತೆಯಿದೆ ಎಂದು ಪರಿಣತರು ಹೇಳುತ್ತಿದ್ದಾರೆ. ಬಜೆಟ್ ಮಂಡಿಸದಿದ್ದರೆ ಇದು ಸಾರ್ವಜನಿಕ ಗಮನಕ್ಕೇ ಬರುವುದಿಲ್ಲ ಎಂದು ಯೆಚೂರಿಯವರು ಈ ಕ್ರಮದ ಹಿಂದಿರುವ ಹುನ್ನಾರದತ್ತ ಬೊಟ್ಟು ಮಾಡಿದ್ದಾರೆ.

ರೈಲ್ವೆಯನ್ನು ಸಂಸತ್ತಿನ ಮೂಲಕ ಸಾರ್ವಜನಿಕ ಪರೀಕ್ಷಣೆಯ ವ್ಯಾಪ್ತಿಯಿಂದ ಹೊರಗಿಡುವ ಮೂಲಕ ಅದರ ಖಾಸಗೀಕರಣಕ್ಕೆ ತಯಾರಿ ನಡೆದಿದೆಯೇ ಎಂದು ಯೆಚೂರಿ ಪ್ರಶ್ನಿಸಿದ್ದಾರೆ.

ರೈಲ್ವೆ ಇಲಾಖೆಯ ಒಡೆತನದಲ್ಲಿ ಅಪಾರ ಭೂಮಿಯಿದೆ. ರಿಯಲ್ ಎಸ್ಟೇಟ್ ಕುಳಗಳ ಕಣ್ಣು ಇದರ ಮೇಲಿದೆ. ಕಳ್ಳನದಿಂದ ಖಾಸಗೀಕರಣ ನಡೆಸುವ ಯಾವುದೇ ಪ್ರಯತ್ನ ಈ ಭೂಮಿಯ ಒಡೆತನದ ಮೇಲೆ ಪರಿಣಾಮ ಬೀರುತ್ತದೆ. ಪ್ರತ್ಯೇಕ ರೈಲು ಬಜೆಟ್ ಇಲ್ಲದಿದ್ದರೆ ಇದನ್ನು ಪರೀಕ್ಷಿಸುವುದು ಬಹಳ ಕಷ್ಟವಾಗುತ್ತದೆ ಎಂಬ ಸಂಗತಿಯತ್ತ ಗಮನ ಸೆಳೆದಿರುವ ಸೀತಾರಾಮ್ ಯೆಚೂರಿಯವರು, ಈಗಲೂ 95ಶೇ. ಮಂದಿ ರಿಸರ್ವೇಶನ್ ಮಾಡದೆಯೇ ಪ್ರಯಾಣಿಸುತ್ತಿದ್ದಾರೆ, ಅವರಿಗೆ ಈ ಸಾರ್ವಜನಿಕ ಸೇವೆಯ ಅಗತ್ಯವಿದೆ ಎಂದು ನೆನಪಿಸುತ್ತಾರೆ. ಆದರೆ ಇನ್ನು ಮುಂದೆ ಸಾರ್ವಜನಿಕ ವಲಯದ ಸಾಮಾಜಿಕ ಜವಾಬ್ದಾರಿ ಇಲ್ಲದ ರೈಲ್ವೆ ಇಲಾಖೆ ಅವರ ಅಗತ್ಯಗಳತ್ತ ಗಮನ ಕೊಡದೆ ಕೇವಲ ಅತಿವೇಗದ ಬುಲೆಟ್ ರೈಲುಗಳಂತಹ ಗಿಮಿಕ್‌ಗಳಿಗೆ ಗಮನ ಕೇಂದ್ರೀಕರಿಸುವುದು ಸುಲಭವಾಗುತ್ತದೆ.

ಭಾರತದಂತಹ ದೇಶದಲ್ಲಿ ಶಿಕ್ಷಣ, ಆರೋಗ್ಯದಂತೆ ರೈಲು ಸಾರಿಗೆಯಲ್ಲೂ ಸರಕಾರ ದಪಾತ್ರ ಬಹಳ ಮಹತ್ವದ್ದು. ಈ ಹಿನ್ನೆಲೆಯಲ್ಲಿ ರೈಲು ಬಜೆಟ್ ರದ್ದು ಮಾಡಿರುವುದು ಒಂದು ದೊಡ್ಡ ಆಪತ್ತಿನ ಮುನ್ಸೂಚನೆ ದೇಶ ಭಾರೀ ದುಷ್ಪರಿಣಾಮಗಳನ್ನು ಎದುರಿಸ ಬೇಕಾಗಬಹುದು ಎಂದು ಸೀತಾರಾಮ್ ಯೆಚೂರಿ ಎಚ್ಚರಿಸಿದ್ದಾರೆ.



ಸಂಸದ್ ಮಾರ್ಗದಲ್ಲಿ ಮೊಳಗಿತು ಜೈಭೀಮ್-ಲಾಲ್ ಸಲಾಮ್-ಇಂಕ್‌ಲಾಬ್ ಜಿಂದಾಬಾದ್

ಸಪ್ಟಂಬರ್16 ರಂದು ದಿಲ್ಲಿಯ ಸಂಸತ್ ಮಾರ್ಗದಲ್ಲಿ 'ಜೈಭೀಮ್–ಲಾಲ್ ಸಲಾಮ್' ಘೋಷಣೆ ಮೊಳಗಿತು ಎಂದು ನ್ಯೂಸ್‌ಕ್ಲಿಕ್ ವರದಿ ಮಾಡಿದೆ. ಅಂದು ಒಂದು ಬೃಹತ್ 'ದಲಿತ ಸ್ವಾಭಿಮಾನ ಸಂಘರ್ಷ' ರ‍್ಯಾಲಿ ನಡೆಯಿತು. ದೇಶದಲ್ಲಿ ದಲಿತರ ಮೇಲೆ ಎಡೆಬಿಡದೆ ನಡೆಯುತ್ತಿರುವ ಅತ್ಯಾಚಾರಗಳನ್ನು ಪ್ರತಿಭಟಿಸಿ ಈ ರ‍್ಯಾಲಿಯನ್ನು ಸಂಘಟಿಸಲಾಗಿತ್ತು. ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ), ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಆರ್‌ಪಿಐ), ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಭಾರತೀಯ ಖೇತ್ ಮಜ್ದೂರ್ ಯೂನಿಯನ್ ಮತ್ತು ದಲಿತ ಹಾಗೂ ನಾಗರಿಕ ಹಕ್ಕುಗಳ ಸಂಘಟನೆಗಳು ಇದನ್ನು ಸಂಘಟಿಸಿದ್ದರು.

ಅಕ್ಟೋಬರ್ 3ರಂದು 'ರಾಷ್ಟ್ರೀಯ ಪ್ರತಿಭಟನಾ ದಿನ' ಆಚರಿಸಲು ರ‍್ಯಾಲಿ ಕರೆ ನೀಡಿದೆ. ಧರಣಿ, ರ‍್ಯಾಲಿ, ಸಾಮೂಹಿಕ ಮನವಿ ಅರ್ಪಣೆ ಇತ್ಯಾದಿಗಳ ಮೂಲಕ ಈ ರ‍್ಯಾಲಿ ಎತ್ತಿರುವ 13 ಬೇಡಿಕೆಗಳನ್ನು ಜನರ ನಡುವೆ ಒಯ್ಯಬೇಕು ಎಂದು ಕರೆ ನೀಡಲಾಗಿದೆ.

ಹರಿಯಾಣ, ಮಹಾರಾಷ್ಟ್ರ, ರಾಜಸ್ತಾನ ಮತ್ತಿತರ ಪ್ರದೇಶಗಳಿಂದ ಬಂದ ಕಾರ್ಮಿಕರು, ಹಿಮಾಚಲ ಪ್ರದೇಶದ ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಿದ್ದ ಈ ರ‍್ಯಾಲಿಯನ್ನುದ್ದೇಶಿಸಿ ಆರ್‌ಪಿಐನ ಪ್ರಕಾಶ ಅಂಬೇಡ್ಕರ್, ಸಿಪಿಐ(ಎಂ)ನ ಸೀತಾರಾಮ್ ಯೆಚೂರಿ, ಮತ್ತು ಸುಭಾಷಿಣಿ ಅಲಿ, ಸಿಪಿಐನ ಡಿ.ರಾಜ ಅಲ್ಲದೆ ಗುಜರಾತ್ ದಲಿತ ಆಂದೋಲನದ ಮುಖಂಡ ಜಿಗ್ನೇಶ್ ಮೇವಾಣಿ, ರೋಹಿತ್ ವೇಮುಲ ಅವರ ತಾಯಿ ರಾಧಿಕಾ ವೇಮುಲ, ಈ ಬಾರಿ ಮ್ಯಾಗ್‌ಸೆಸೆ ಪ್ರಶಸ್ತಿ ಪಡೆದ ಬೆಜ್ವಾಡ ವಿಲ್ಸನ್, ದಲಿತ ಹಕ್ಕುಗಳ ಸಮಿತಿಯ ವಿಮಲ ಥೋರಟ್ ಮತ್ತಿತರರು ಮಾತಾಡಿದರು.

ರಾಧಿಕಾ ವೇಮುಲ ಮಾತಾಡುತ್ತ 'ನಾನು ಇಲ್ಲಿ ಕೇವಲ ರೋಹಿತ್ ತಾಯಿಯಾಗಿ ಬಂದಿಲ್ಲ, ನಾನು ಪ್ರತಿಯೊಬ್ಬ ರೋಹಿತ್‌ನ ತಾಯಿ. ಅಲ್ಲಿ ಹೊರಗೆ ಹಲವು ರೋಹಿತ್‌ಗಳು ಇದ್ದಾರೆ" ಎಂದರು.

ಗುಜರಾತಿನಲ್ಲಿ ದಲಿತರು ಬಿಜೆಪಿ –ಆರೆಸ್ಸೆಸ್ ಮಂದಿ ಹಿಡಿದು ತಿರುಗಾಡುತ್ತಿದ್ದ ಹಿಂದುತ್ವದ ದೊಣ್ಣೆಯನ್ನೇ ತಿರುಗಿಸಿ ಅವರಿಗೆ ಬಾರಿಸಿದ್ದಾರೆ ಎಂದ ಜಿಗ್ನೇಶ್ ಮೇವಾಣಿ ಗುಜರಾತ್ ಮಾದರಿಯನ್ನು ಸಂಕ್ಷಿಪ್ತವಾಗಿ ಬಿಚ್ಚಿಟ್ಟರು. ಕೇವಲ ಮನುವಾದ, ಮತ್ತು ಬ್ರಾಹ್ಮಣವಾದದ ವಿರುದ್ಧ ಮಾತ್ರವೇ ಅಲ್ಲ, ಈ ಗುಜರಾತ್ ಮಾದರಿಯ ಮೋಸವನ್ನೂ ಬಯಲಿಗೆಳೆಯುತ್ತೇವೆ ಎಂದು ಸಾರಿದರು.

"ಕೆಂಪು ಮತ್ತು ನೀಲಿ ಮಳೆಬಿಲ್ಲಿನ ಪ್ರಮುಖ ಬಣ್ಣಗಳು. ಅವೆರಡು ಸೇರಿ ಸಮಾಜವನ್ನು ಉತ್ತಮಗೊಳಿಸುವ ಬದಲಾವಣೆಯನ್ನು ತರಬಲ್ಲವು" ಎಂದು ರ‍್ಯಾಲಿಯನ್ನು ಉದ್ದೇಶಿಸಿ ಮಾತಾಡುತ್ತ ಸೀತಾರಾಮ್ ಯೆಚೂರಿ ಹೇಳಿದರು. ಸ್ವಾಭಿಮಾನ ಮತ್ತು ಸಮಾನತೆ ಯಾರ ದಯೆಯೂ ಅಲ್ಲ, ಅದು ಸಂವಿಧಾನ ದಲಿತರಿಗೆ ನೀಡಿರುವ ಹಕ್ಕು, ಅಂಬೇಡ್ಕರ್ ಮತ್ತು ಇತರರು ಅದಕ್ಕಾಗಿ ಹೋರಾಡಿದ್ದಾರೆ. ಇಂಕ್‌ಲಾಬ್ ಜಿಂದಾಬಾದ್ ಎಂಬುದು ಯಾರೂ ಯಾರನ್ನು ದಮನ ಮಾಡಲಾರದ ಒಂದು ಸಮಾನತೆಯ ಸಮಾಜವನ್ನು ಸೂಚಿಸುತ್ತದೆ ಎಂದ ಅವರು 'ಇಂದು ದಿಲ್ಲಿಯಲ್ಲಿ ಜೈಭೀಮ್ ಮತ್ತು ಲಾಲ್ ಸಲಾಮ್ ಇಂಕ್‌ಲಾಬ್ ಜಿಂದಾಬಾದ್‌ನಲ್ಲಿ ವಿಲೀನಗೊಂಡವು" ಎಂದು ತಮ್ಮ ಫೇಸ್‌ಬುಕ್ ಟಿಪ್ಪಣಿಯಲ್ಲಿ ಹೇಳಿದ್ದಾರೆ.

ರಿಯೋ ಪಾರಾಲಿಂಪಿಕ್ಸ್‌ನಲ್ಲಿ ದೇಶದ ಕ್ರೀಡಾಪಟುಗಳ ಅತ್ಯುತ್ತಮ ಸಾಧನೆ

ಇತ್ತೀಚೆಗೆ ಬ್ರೆಝಿಲ್‌ನ ರಿಯೊ ಡಿ ಜನೆರೊದಲ್ಲಿ ಮುಕ್ತಾಯಗೊಂಡ ಪಾರಾಲಿಂಪಿಕ್ಸ್ ಅಂ–ದರೆ ವಿಕಲಚೇತನರ ಒಲಿಂಪಿಕ್ ಮಾದರಿಯ ಅಂತರ್ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಭಾರತದ 19 ಸ್ಪರ್ಧಾಳುಗಳಿದ್ದ ತಂಡದ ನಾಲ್ವರು ಕ್ರೀಡಾ ಪಡುಗಳು ಪದಕಗಳನ್ನು ಗೆದ್ದಿದ್ದಾರೆ. ಇನ್ನು ಮೂವರು ನಾಲ್ಕನೇ ಸ್ಥಾನದ ವರೆಗೆ ಬಂದಿದ್ದಾರೆ.

ಮರಿಯಪ್ಪನ್ ತಂಗವೇಲು ಟಿ–42 ಹೈಜಂಪ್‌ನಲ್ಲಿ 1.89 ಮೀಟರ್ ಜಿಗಿದು ಚಿನ್ನದ ಪದಕ ಗಳಿಸಿದರೆ, ಅದೇ ಸ್ಪರ್ಧೆಯಲ್ಲಿ 1.86 ಮೀಟರ್ ಜಿಗಿದ ವರುಣ್ ಸಿಂಗ್ ಭಟಿ ಕಂಚಿನ ಪದಕ ಗಳಿಸಿದ್ದಾರೆ.

ದೀಪಾ ಮಲಿಕ್ ಎಫ್–53 ಶಾಟ್‌ಪುಟ್ ಎಸೆತದಲ್ಲಿ 4.61 ಮೀಟರ್ ದೂರಎಸೆದು ಬೆಳ್ಳಿ ಪದಕ ಗಳಿಸಿದರು.

ದೇವೇಂದ್ರ ಝುಝರಿಯ ಎಫ್–46 ಜಾವೆಲಿನ್ ಎಸೆತದಲ್ಲಿ ತಾನೇ ಹಿಂದೆ ಮಾಡಿದ್ದ ವಿಶ್ವ ದಾಖಲೆಯನ್ನು ಮುರಿದು ಚಿನ್ನದ ಪದಕ ಗಳಿಸಿದರು. ಈ ಹಿಂದೆ 2004ರ ಅಥೆನ್ಸ್ ಪಾರಾಲಿಂಪಿಕ್ಸ್‌ನಲ್ಲೂ ಇವರು ಚಿನ್ನದ ಪದಕ ಗಳಿಸಿದ್ದರು.


ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಭಾರತದ 19 ಸದಸ್ಯರ ತಂಡವನ್ನು ಈ ಅತ್ಯುತ್ತಮ ಉತ್ತಮ ಸಾಧನೆಗೆ ಅಭಿನಂದಿಸಿದೆ.

ನಮ್ಮ ದೇಶದಲ್ಲಿ ಅಂಗವಿಕಲರ ಕ್ರೀಡೆಗಳ ಶೋಚನೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಕ್ರೀಡಾಪಟುಗಳ ಸಾಧನೆ ಮತ್ತಷ್ಟು ಮಹತ್ವಪೂರ್ಣ ಎಂದು ಎನ್‌ಪಿಆರ್‌ಡಿ ಹೇಳಿದೆ. ಇವರಲ್ಲಿ ಹೆಚ್ಚಿನವರು ಬಹಳ ಸಾಮಾನ್ಯ ಹಿನ್ನೆಲೆಯವರು, ಬಹಳಷ್ಟು ಅಡೆ–ತಡೆಗಳು, ಪಕ್ಷಪಾತಗಳ ವಿರುದ್ಧ ಹೋರಾಟ ಮಾಡಿಕೊಂಡು ಬಂದು ಕೇವಲ ಸ್ವಂತ ಪರಿಶ್ರಮ, ದೃಢ ನಿರ್ಧಾರದಿಂದ ಈ ಸಾಧನೆ ಮಾಡಿದವರು.


ದೇವೇಂದ್ರ ಝುಝರಿಯಾ ಗೆದ್ದ ಜಾವೆಲಿನ್ ಎಸೆತದ ಸ್ಪರ್ಧೆಯಲ್ಲಿ ಭಾಗವಹಿಸಬೇಕಾಗಿದ್ದ ಇನ್ನೊಬ್ಬ ಭಾರತೀಯ ಸ್ಪರ್ಧಾಳು ಸುಂದರ್ ಸಿಂಗ್ ಗುರ್ಜರ್ ಅವರನ್ನು ಕರೆದು ತರುವಾತ(ಎಸ್ಕಾರ್ಟ್) ಸಮಯಕ್ಕೆ ಸರಿಯಾಗಿ ಆತನನ್ನು ಕರೆತರದ್ದರಿಂದ ಸ್ಪರ್ಧಿಸಲಾಗಲಿಲ್ಲ. ಈತನೂ ಒಂದು ಪದಕ ಗೆಲ್ಲುವ ನಿರೀಕ್ಷೆಯಿತ್ತು. ಇಂತಹ ಶಿಥಿಲತೆ ಅಕ್ಷಮ್ಯ ಎಂದಿರುವ ಎನ್‌ಪಿಆರ್‌ಡಿ ಸಂಬಂಧಪಟ್ಟವರ ವಿಚಾರಣೆ ನಡೆಸಬೇಕು ಎಂದಿದೆ.

ರಿಯೊ ಒಲಿಂಪಿಕ್ಸ್‌ನಲ್ಲಿ ಸ್ವತಃ ಕ್ರೀಡಾ ಮಂತ್ರಿಗಳ ಕಡೆಯವರು ಅನಗತ್ಯವಾಗಿ ಹೋದಂತೆ,ಇಲ್ಲಿಯೂ ಕ್ರೀಡಾ ಪಟುಗಳು, ಅವರ ಕೋಚ್‌ಗಳು ಮತ್ತು ಅವರನ್ನು ಕರೆದೊಯ್ಯುವವರರಿಗಿಂತ ಇತರ ಸಂಬಂಧವಿಲ್ಲದ ಅಧಿಕಾರಿಗಳೇ ಹೆಚ್ಚಿದ್ದರು ಎಂಬ ಆಪಾದನೆಗಳಿವೆ. ಇದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಎನ್‌ಪಿಆರ್‌ಡಿ ಆಗ್ರಹಿಸಿದೆ.

ಭಾರತದ ಪಾರಾಲಿಂಪಿಕ್ಸ್ ಸಮಿತಿ ಕೂಡ ಭ್ರಷ್ಟಾಚಾರದ ಕೂಪವಾಗಿದೆ. ಅದನ್ನೂ ಆಮೂಲಾಗ್ರವಾಗಿ ರಿಪೇರಿ ಮಾಡಬೇಕು, ಪ್ರಜಾಪ್ರಭುತ್ವೀಕರಿಸಬೇಕು, ರಿಯೋದಲ್ಲಿ ಮಾಡಿದ ಸಾಧನೆ ವ್ಯರ್ಥವಾಗದಂತೆ ಕ್ರೀಡಾ ಮಂತ್ರಾಲಯ ಮುತುವರ್ಜಿ ವಹಿಸ ಬೇಕು ಎಂದು ಕೂಡ ಎನ್‌ಪಿಆರ್‌ಡಿಆಗ್ರಹಿಸಿದೆ.



ದೀಪಾ ಮಲಿಕ್


ದೇವೇಂದ್ರ ಝುಝರಿಯ



ಮರಿಯಪ್ಪನ್ ತಂಗವೇಲು ಮತ್ತು ವರುಣ್ ಸಿಂಗ್ ಭಟಿ

ನಮ್ಮ ಚುರು-ಟ್ವೀಟ್

(@srivatsayb)

ಇದು ಮೋದಿ ಅವರ ಹುಸಿ ಸಹಕಾರಿ ಒಕ್ಕೂಟವಾದ (ಕೋ–ಒಪರೇಟಿವ್ ಫೆಡಲಿಸಮ್). ಇದಕ್ಕೆ ತಕ್ಕ ಶಾಸ್ತಿ ಆಗದೆ ಇರದು. #ಮೋದಿಮೋಸ #ಕಾವೇರಿ

ಕಾವೇರಿ : ಈಗಲೂ ಪ್ರಧಾನಿ ಮಧ್ಯಪ್ರವೇಶವೇ ಪರಿಹಾರ

ಸಂಪಾದಕೀಯ

ಕಾವೇರಿ ವಿವಾದ ಕಳೆದ ಕೆಲವು ವಾರಗಳಿಂದ ಕಗ್ಗಂಟಾಗಿ ಹೋಗುತ್ತಿದೆ. ಈಗಾಗಲೇ ಈ ಪತ್ರಿಕೆಯ ಸಂಪಾದಕೀಯ ಮತ್ತು ಲೇಖನಗಳಲ್ಲಿ ನಿರೂಪಿಸಿದಂತೆ ನದಿ ನೀರಿನ ಹಂಚಿಕೆ ಕಾನೂನು–ಕೋರ್ಟುಗಳಿಂದ ಪರಿಹಾರವಾಗುವ ಸಮಸ್ಯೆ ಅಲ್ಲ. ಇದು ಮತ್ತೆ ಮತ್ತೆ ರುಜುವಾತಾಗುತ್ತಿದೆ. ಸೆ. 27 ವರೆಗೆ ಪ್ರತಿ ದಿನ 3 ಸಾವಿರ ಕ್ಯುಸೆಕ್ಸ್ ಬಿಡಬೇಕೆಂಬ ಮೇಲುಸ್ತುವಾರಿ ಸಮಿತಿಯ ನಿರ್ಣಯ ನೀಡಿದೆ., ಹಾಗೂ ಸುಪ್ರೀಂ ಕೋರ್ಟು ತನ್ನ ತೀರ್ಪಿನಲ್ಲಿ ಅದನ್ನು 6 ಸಾವಿರ ಕ್ಯುಸೆಕ್ಸ್ ಗೆ ಏರಿಸಿದೆ. ಅಲ್ಲದೆ ಕಾವೇರಿ ನೀರು ನಿರ್ವಹಣಾ ಮಂಡಳಿ ರಚನೆ ಮಾಡಿ ಎಂದೂ ಹೇಳಿದೆ.

ಮೇಲೆ ಹೇಳಿದ ಮೇಲುಸ್ತುವಾರಿ ಸಮಿತಿಯ ನಿರ್ಣಯ, ಹಾಗೂ ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸರ್ವಪಕ್ಷ ಸಭೆ ಕರೆದಿದ್ದು ಅಲ್ಲಿ ಈಗಿನ ಪರಿಸ್ಥಿತಿಯಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ಜಾರಿ ಮಾಡಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಒಮ್ಮತ ಮೂಡಿದ್ದು, ಇದಕ್ಕಾಗಿ ವಿಧಾನ ಮಂಡಲದ ವಿಶೇಷ ಅಧಿವೇಶನ ಕರೆಯಬೇಕೆಂದು ನಿರ್ಧರಿಸಲಾಯಿತು. ಇದರಂತೆ ಸೆ. 23 ರಂದು ವಿಧಾನ ಮಂಡಲದ ಸಭೆ ಕರೆಯಲಾಗಿತ್ತು. ಎರಡೂ ಸದನಗಳಲ್ಲಿ ರಾಜ್ಯದ ಜನರ ಕುಡಿಯುವ ನೀರಿನ ಬೇಡಿಕೆ ಈಡೇರಿಸುವುದರ ಹೊರತಾಗಿ ಬೇರಾವುದೇ ಕಾರಣಗಳಿಗೆ ಕಾವೇರಿ ನೀರನ್ನು ಉಪಯೋಗಿಸಬಾರದು ಎಂಬ ನಿರ್ಣಯ ಮಂಡಿಸಲಾಗಿತ್ತು. ಈ ಪತ್ರಿಕೆ ಪ್ರಿಂಟಿಗೆ ಹೋಗುವ ಹೊತ್ತಿಗೆ (ಸೆ. 23 ಶುಕ್ರವಾರ ಮಧ್ಯಾಹ್ನ) ಕರ್ನಾಟಕ ವಿಧಾನ ಪರಿಷತ್ ಶುಕ್ರವಾರ ಸರ್ವಾನುಮತದ ನಿರ್ಣಯ ಕೈಗೊಂಡಿದೆ. ಈ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಅಲ್ಲೂ ಸರ್ವಾನುಮತದ ನಿರ್ಣಯ ಕೈಗೊಳ್ಳುವ ನಿರೀಕ್ಷೆ ಇದೆ.

ರಾಜ್ಯದ ಹಿತಾಸಕ್ತಿಯನ್ನು ಪರಿಗಣಿಸಿ ಕಾವೇರಿ ಕೊಳ್ಳದ ನಾಲ್ಕೂ ಜಲಾಶಯಗಳಲ್ಲಿ ಈಗ ಇರುವ ಒಟ್ಟೂ ನೀರನ್ನು ಬೆಂಗಳೂರು ಮಹಾನಗರ ಮತ್ತು ಕಾವೇರಿ ಕೊಳ್ಳದ ಜನರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶಕ್ಕಾಗಿ ಸಂಪೂರ್ಣ ಬಳಸಿಕೊಳ್ಳಲು ಮತ್ತು ಬೇರೆ ಯಾವುದೇ ಕಾರಣಕ್ಕೆ ಒದಗಿಸಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ.

ಕಾವೇರಿ ಕೊಳ್ಳದ ಕೃಷ್ಣರಾಜ ಸಾಗರ, ಹೇಮಾವತಿ, ಹಾರಂಗಿ, ಕಬಿನಿ ಜಲಾಶಯಗಳಲ್ಲಿ ನೀರಿನ ಮಟ್ಟ ಅತ್ಯಂತ ಕುಸಿದಿದ್ದು, ಕೇವಲ 27.6 ಟಿಎಂಸಿ ಮಾತ್ರ ಇರುವುದು ಎಂದು ಸದನ ಆತಂಕ ವ್ಯಕ್ತಪಡಿಸಿದೆ. ಇಂಥ ಗಂಭೀರ ಪರಿಸ್ಥಿತಿ ಇರುವ ಕಾರಣ ಬೆಂಗಳೂರು ನಗರ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ಪಟ್ಟಣಗಳು ಮತ್ತು ಹಳ್ಳಿಗಳ ಕುಡಿಯುವ ನೀರಿನ ಅಗತ್ಯಗಳಿಗೆ ಮಾತ್ರ ಇವುಗಳ ಒಟ್ಟು ನೀರನ್ನು ಬಳಸುವುದೆಂದು ಸರಕಾರ ಖಾತರಿಪಡಿಸಬೇಕು ಎಂದು ಸದನ ನಿರ್ಣಯ ಅಂಗೀಕರಿಸಿದೆ. 2016–17ನೇ ಜಲವರ್ಷದಲ್ಲಿ ಸಂಕಷ್ಟ ಗಂಭೀರವಾಗಿದೆ. ನೀರಿನ ಕೊರತೆಯ ಪ್ರಮಾಣವನ್ನು 2017ರ ಜನವರಿ 31ರ ಬಳಿಕವೇ ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗಲಿದೆ ಎಂಬ ಅಂಶವನ್ನೂ ಸದನ ಗಮನಿಸಿದೆ.

ವಿಧಾನ ಮಂಡಲ ಇಡಿಯಾಗಿ ಅಂಗೀಕರಿಸಲಿರುವ ನಿರ್ಣಯ ವಿವಾದವನ್ನು ಇನ್ನಷ್ಟು ಸಂಕೀರ್ಣಗೊಳಿಸಲಿದೆ. ಸುಪ್ರೀಂ ಕೋರ್ಟಿನ ತೀರ್ಪನ್ನು ಉಲ್ಲಂಘಿಸುವ ಸರಕಾರದ/ಶಾಸನ ಸಭೆಯ ನಿರ್ಣಯ ಕೋರ್ಟು ನಿಂದನೆಯಾಗುತ್ತದೋ ಎಂದು ಕಾನೂನು ಮತ್ತು ಸಂವಿಧಾನದ ಪಂಡಿತರೇ ಹೇಳಬೇಕು. ಆದರೆ ಇದು ಒಕ್ಕೂಟ ವ್ಯವಸ್ಥೆಗೆ ಮತ್ತು ಎರಡು ರಾಜ್ಯಗಳ ಜನತೆಯ ಸಹಜ ಸಂಬಂಧಗಳಿಗೆ ತೀವ್ರ ಧಕ್ಕೆ ತರುವಂತಹುದು ಎಂಬುದರ ಬಗ್ಗೆ ಸಂಶಯವಿಲ್ಲ. ಸಾಂವಿಧಾನಿಕ/ರಾಜಕೀಯ ಬಿಕ್ಕಟ್ಟು ಸೃಷ್ಟಿಸುವಂತಹದ್ದು. ಇದು ವಿವಾದದ ಪರಿಹಾರವನ್ನು ಇನ್ನಷ್ಟು ಕಷ್ಟಕರವಾಗಿಸುವಂತಹುದು.

ಇಂತಹ ಪರಿಸ್ಥಿತಿ ಪ್ರಮುಖ ರಾಜಕೀಯ ಪಕ್ಷಗಳ ಬೇಜವಾಬ್ದಾರಿ ರಾಜಕೀಯ ಮೇಲಾಟದ ಫಲ. ಪ್ರಧಾನಿ ಮೋದಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಮಾತುಕತೆ ಮೂಲಕ ಬಗೆಹರಿಸುವ ಪ್ರಯತ್ನವೇ ಮಾಡದ್ದು ಅತ್ಯಂತ ಬೇಜವಾಬ್ದಾರಿತನ. ಪ್ರಧಾನಿಯ ಮೂಲಭೂತ ಕರ್ತವ್ಯಗಳನ್ನು ನಿಭಾಯಿಸದೆ ಹೋದ ಪ್ರಧಾನಿ ಮೋದಿ ಮತ್ತು ಅವರ ಪಕ್ಷ ಮುಂಬರುವ ಅನಾಹುತಗಳ ಮುಖ್ಯ ಜವಾಬ್ದಾರಿ ಹೊರಬೇಕು. ಬಿಜೆಪಿ ಕರ್ನಾಟಕ ಘಟಕ ಏನಕೇನ ಪ್ರಕಾರೇಣ ಕಾಂಗ್ರೆಸ್ ಸರಕಾರ ಉರುಳಿಸಬೇಕೆಂದು ಮಸಲತ್ತು ಮಾಡಿದ್ದು, ಮುಖ್ಯಮಂತ್ರಿಗಳ ಮಧ್ಯಪ್ರವೇಶದ ಮನವಿಗೆ ಕಿವಿಗೊಡದೆ ಇದ್ದುದರ ಹಿಂದಿದ್ದ ಮುಖ್ಯ ಕಾರಣ ಎನ್ನುವುದು ಸ್ಪಷ್ಟ.

ಈಗಲೂ ಪ್ರಧಾನಿ ಮಧ್ಯಪ್ರವೇಶ ಮಾಡಿ ತಮ್ಮ ಸಂವಿಧಾನಿಕ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ. ಮಾತ್ರವಲ್ಲ, ಸಂಕಷ್ಟದ ವರ್ಷಗಳಲ್ಲಿ ನೀರು ಹಂಚಿಕೆಗೆ ಸೂತ್ರವೊಂದು ಹುಡುಕುವ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ. ಇಂತಹ ವಿವಾದಗಳನ್ನು ಉಂಟಾಗದಂತೆ ತಡೆಯಲು ರಾಷ್ಟ್ರೀಯ ಜಲನೀತಿಯನ್ನೂ ರೂಪಿಸಬೇಕಾಗಿದೆ. ಇಲ್ಲದಿದ್ದರೆ ಹಾಗೆ ಮಾಡುವಂತೆ ಜನತೆಯ ಹೋರಾಟ ಅವರ ಮೇಲೆ ಒತ್ತಡ ಹಾಕಬೇಕಾಗಿದೆ.

ನವೋದ್ಯಮದ ರಾಜಧಾನಿ ಬಹುರಾಷ್ಟ್ರೀಯ ಬಂಡವಾಳದ ನೆಚ್ಚಿನ ತಾಣದಲ್ಲಿ ಆಕ್ರಮಣಕಾರಿ ಚಳುವಳಿಗೆ ಪಣ

ಕೆ.ಎನ್. ಉಮೇಶ್

ರಾಜ್ಯವು ರಾಷ್ಟ್ರದ ನವೋದ್ಯಮದ ರಾಜಧಾನಿಯಾಗಿದೆ ಎಂಬ ಹೇಳಿಕೆಯನ್ನು ಮುಖ್ಯಮಂತ್ರಿಗಳು ತಮ್ಮ ಇತ್ತೀಚಿನ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅಂತೆಯೇ ರಾಷ್ಟ್ರದಲ್ಲಿನ ಉತ್ತಮ ಆಡಳಿತದ ರಾಜ್ಯಗಳ ಸಾಲಿನಲ್ಲಿ 3 ನೇ ಸ್ಥಾನದಲ್ಲಿದೆ ಎಂಬ ಹೆಗ್ಗಳಿಕೆಯನ್ನು ಹೊರಹಾಕಿದ್ದಾರೆ. ಅದನ್ನು ಬಲಪಡಿಸಲೆಂದೆ ಬಂಡವಾಳ ಹೂಡಿಕೆಗೆ, ಉದ್ಯೋಗ ಸೃಜಿಸುವ ಹೆಸರಿನಲ್ಲಿ **(Invest Karnataka)** ಇನ್‌ವೆಸ್ಟ್ ಕರ್ನಾಟಕಕ್ಕೆ ಸಾಂಸ್ಥಿಕ ರೂಪ ನೀಡಿ "ಕರ್ನಾಟಕ ರಾಜ್ಯ ಹೂಡಿಕೆ ನಿಗಮ" ವನ್ನು ಸ್ಥಾಪಿಸಿದೆ. 2014–19 ರ ಸಾಲಿನ "ನೂತನ ಕೈಗಾರಿಕಾ ನೀತಿಯನ್ನು" ಪ್ರಕಟಿಸಿದೆ. ಆ ಮೂಲಕ 2019 ರೊಳಗೆ 5 ಲಕ್ಷ ಕೋಟಿ ರೂಗಳ ಬಂಡವಾಳ ಆಕರ್ಷಿಸಲು 15 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದೆ. ಅದ–ಕ್ಕೆ "ವಿಶೇಷ ಹೂಡಿಕೆ ಪ್ರದೇಶ" (SIR) ಗಳನ್ನಾಗಿ ರಾಜ್ಯದ ಧಾರವಾಡ, ಗದಗ, ಹಾವೇರಿ, ಬೆಳಗಾವಿ ಜಿಲ್ಲೆಗಳನ್ನು ಮತ್ತು ಬಾಗಲಕೋಟೆ, ಬಿಜಾಪುರ, ಹಾಸನ, ಕೊಪ್ಪಳ, ಮೈಸೂರು, ಮಂಗಳೂರು ಮತ್ತು ರಾಯಚೂರುಗಳನ್ನು ಗುರುತಿಸಿದೆ. ರಾಜ್ಯದ ಒಳಗೆ 6 ಕೈಗಾರಿಕಾ ಕಾರಿಡಾರ್‌ಗಳ 1)ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ 2)ಚಿತ್ರದುರ್ಗ–ಬಳ್ಳಾರಿ–ಗುಲ್ಬರ್ಗಾ–ಬೀದರ್ 3)ದಾರವಾಡ–ಕೊಪ್ಪಳ–ರಾಯಚೂರು 4)ಬೆಂಗಳೂರು–ಹಾಸನ–ಮೈಸೂರು 5)ತುಮಕೂರು–ಶೀವಮೊಗ್ಗ–ಹೊನ್ನಾವರ 6) ರಾಯಚೂರು–ಬಾಗಲಕೋಟೆ–ಬೆಳಗಾವಿ – ಸ್ಥಾಪನೆಗೆ ಯೋಜಿಸಿದೆ.

ಇದೇ ವೇಳೆ ಇತ್ತೀಚೆಗೆ 2016 ಏಪ್ರಿಲ್‌ನಲ್ಲಿ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟದ ಸ್ಫೋಟ, ಜುಲೈನಲ್ಲಿ ನಡೆದ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಅಭೂತಪೂರ್ವ ಮುಷ್ಕರ ಮತ್ತು ಸೆಪ್ಟೆಂಬರ್ 2'ರ ಸಾರ್ವತ್ರಿಕ ಮುಷ್ಕರ, ರಾಜ್ಯ ಸರ್ಕಾರಿ ನೌಕರರ ಮುಷ್ಕರ, ರಾಜ್ಯ ಪೊಲೀಸರ ಮುಷ್ಕರ ಕರೆಯಂತಹ ಬೆಳವಣಿಗೆಗಳು ನಡೆದಿವೆ. ರಾಜ್ಯದಲ್ಲಿನ ಬಂಡವಾಳ ಹೂಡಿಕೆಯ ಪ್ರತೀಕ ಎಂಬಂತೆ ಅದರ ಪ್ರತಿನಿಧಿಗಳಾಗಿ ಬಯೋಕಾನ್ ಸಂಸ್ಥೆಯ ಕಿರಣ್ ಮಜುಂದಾರ್ ಶಾ, ಇನ್ಫೋಸಿಸ್‌ನ ಮಾಜಿ ಮುಖ್ಯಸ್ಥರಾದ ಮೋಹನ್‌ದಾಸ್ ಪೈ, ರಿಂಗ್‌ರೋಡ್ ಕೈಗಾರಿಕೆಗಳ ಸಂಘದ ಮುಖ್ಯಸ್ಥರು ರಾಜ್ಯದಲ್ಲಿ ಈ ರೀತಿಯ ಹೋರಾಟಗಳು, ಚಳುವಳಿಗಳು ಹೂಡಿಕೆಗೆ ಮಾರಕವಾಗಲಿವೆ. ರಾಜ್ಯ ಸರ್ಕಾರದ ಮೃದು ಭಾವ ಇವುಗಳಿಗೆ ಕಾರಣವಾಗುತ್ತಿವೆ. "ಬ್ರಾಂಡ್ ಬೆಂಗಳೂರಿಗೆ" ಹಾನಿಕಾರಕ ಬೆಳವಣಿಗೆಗಳಾಗಿ ಪರಿಣಿಮಿಸುತ್ತಿವೆ ಎಂದು ಹೇಳಿಕೆ ನೀಡಿದ್ದಾರೆ. ಇದರ ಬೆನ್ನಲ್ಲೇ ನಡೆದ ಕಾವೇರಿ ನೀರಿನ ಹಂಚಿಕೆ ಕುರಿತು ಸುಪ್ರಿಂ ಆದೇಶಕ್ಕೆ ಪ್ರತಿಕ್ರಿಯೆಯಾಗಿ ನಡೆದ ಬೆಂಗಳೂರು ಮುಂತಾದೆಡೆಗಳಲ್ಲಿನ ಹಿಂಸಾತ್ಮಕ ಪ್ರತಿಭಟನೆಗಳು, ಬಂದ್‌ಗಳು ಹಿರಿಯಣ್ಣ ಅಮೇರಿಕಾದ ಅಧ್ಯಕ್ಷರ ಹೇಳಿಕೆಗೂ ಕಾರಣವಾಗಿವೆ.

ಇಂತಹ ಸಂದರ್ಭದಲ್ಲಿ ಕೂಡಲ ಸಂಗಮದಲ್ಲಿ ನಡೆದ ಸಿಐಟಿಯು 13ನೇ ರಾಜ್ಯ ಸಮ್ಮೇಳನವು ರಾಜ್ಯದ ದುಡಿಯುವ ಜನತೆಯ ಸ್ಥಿತಿಗತಿಯನ್ನು, ರಾಜ್ಯದಲ್ಲಿನ ಕೈಗಾರಿಕೆ, ಕೃಷಿ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದೆ. ಕಳೆದ ಮೂರು ಮುಕ್ಕಾಲು ವರ್ಷಗಳಲ್ಲಿ ಚಳುವಳಿಯ ಮಧ್ಯಪ್ರವೇಶ, ಮಿತಿಗಳು, ಸಾಧನೆ ಮುಂತಾದವುಗಳನ್ನು ವಿಮರ್ಶಿಸುತ್ತಾ, ಸಂಘಟನೆ–ಸಂಪರ್ಕದ ವಿಸ್ತರಣೆ–ಕ್ರೋಡಿಕರಣದ ಯತ್ನಗಳನ್ನು ಸ್ವವಿಮರ್ಶೆಗೆ ಹಚ್ಚುತ್ತಾ, ಮುಂದಿನ ದಾರಿಯನ್ನು ಸಮ್ಮೇಳನ ರೂಪಿಸಿದೆ.

ರೈತರು–ಕೃಷಿ ಕೂಲಿಕಾರರ ಸಂಖ್ಯೆ ಇಳಿಕೆ–ಇತರೆ ಕೆಲಸಗಾರರ ಹೆಚ್ಚಳ :

ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮವಾಗಿ ರಾಜ್ಯದಲ್ಲಿ ಒಂದೆಡೆ ಕೃಷಿಕರು, ಕೃಷಿ ಕೂಲಿಕಾರರ ಸಂಖ್ಯೆ ಕಡಿಮೆಯಾಗುತ್ತಿರುವಾಗಲೇ, ಇತರೆ ಕೆಲಸಗಾರರ ಸಂಖ್ಯೆ 7.23 ಶೇಕಡ ಹೆಚ್ಚಾಗಿ, ಒಟ್ಟು ಕೆಲಸಗಾರರಲ್ಲಿ ಇವರ ಪ್ರಮಾಣವು 47.44 ಶೇಕಡದಷ್ಟಾಗಿದೆ. ಪರಿಣಾಮವಾಗಿ ನಗರ ಪ್ರದೇಶಗಳಿಗೆ ವಲಸೆ ಹೆಚ್ಚುತ್ತಿದೆ, ಅಸಂಘಟಿತ ಕಾರ್ಮಿಕರ ಗಾತ್ರವು ಹಿಗ್ಗುತ್ತಿದೆ. ಕೈಗಾರಿಕಾ ಕಾರ್ಮಿಕರ ಸಂಖ್ಯೆಯು ಹೆಚ್ಚಿದರೂ ಸಹಾ ಅದರೊಳಗಿನ ಅಸಂಘಟಿತ ಕಾರ್ಮಿಕರ ಸಂಖ್ಯೆ ಹಿರಿದಾಗುತ್ತಿದೆ. ರಾಜ್ಯದ ಸರಾಸರಿಗಿಂತ ಹೆಚ್ಚು ಇತರೆ ಕೆಲಸಗಾರರ ಸಂಖ್ಯೆ ಬೆಂಗಳೂರು, ಮತ್ತು ಮೈಸೂರು ವಿಭಾಗದಲ್ಲಿದೆ. ಅದಕ್ಕೆ ಈ ಪ್ರದೇಶಗಳಲ್ಲಿ ಉತ್ಪಾದನಾ ವಲಯದ ಕೈಗಾರಿಕೆಗಳು ಹಾಗು ಸೇವಾ ವಲಯದ ಸಂಸ್ಥೆಗಳು ಹೆಚ್ಚುತ್ತಿರುವುದೇ ಪ್ರಮುಖ ಕಾರಣವಾಗಿದೆ. ಇದೇ ವೇಳೆ ರಾಜ್ಯಕ್ಕೆ ಒಂದೆಡೆ ಭೌದ್ಧಿಕ ಶ್ರಮ ಆಧಾರಿತ ವಿದ್ಯಾವಂತ ಯುವಕ ಯುವತಿಯರು ವಲಸೆ ಬರುತ್ತಿರುವಾಗಲೇ ಕಟ್ಟಡ, ಹೋಟೆಲ್ ಮುಂತಾದ ಉದ್ದಿಮೆಗಳಲ್ಲಿ ದೈಹಿಕ ಶ್ರಮ ಕೇಂದ್ರಿತ ಯುವಕ–ಯುವತಿಯರು ದೂರದ ರಾಜ್ಯಗಳಿಂದ ವಲಸೆ ಬಂದು ಬದುಕು ರೂಪಿಸಿಕೊಳ್ಳುತ್ತಿರುವ ಪ್ರವೃತಿ ಹೆಚ್ಚುತ್ತಿರುವುದನ್ನು ಸಮ್ಮೇಳನ ಗುರುತಿಸಿದೆ.

ಆಂತರಿಕ ಉತ್ಪನ್ನ ಹೆಚ್ಚಳ–ಕೃಷಿ ಕೈಗಾರಿಕೆಯ ಪಾಲು ಇಳಿಕೆ :

ರಾಜ್ಯದ ಆಂತರಿಕ ಉತ್ಪನ್ನ ಸಾವಿರಾರು ಕೋಟಿ ರೂಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚಿರುವಾಗಲೇ ಕೃಷಿ ವಲಯದ ಕೊಡೆಗೆಯ ಪ್ರಮಾಣ ಕಡಿಮೆಯಾಗಿರುವಾಗಲೇ, ಕೈಗಾರಿಕಾ ವಲಯದ ಕೊಡುಗೆ ಕುಂಠಿತವಾಗಿದೆ, ಸೇವಾ ವಲಯದ ಕೊಡುಗೆ ಏರಿದೆ ಎಂಬುದನ್ನು ಸಮ್ಮೇಳನ ಗುರುತಿಸಿದೆ. ಇದು ಒಟ್ಟು ಮೌಲ್ಯವರ್ದನೆಯಲ್ಲಿ ನಿರೀಕ್ಷಿತ ನೆಗೆತ ಸಾಧಿಸಲು ಸಾಧ್ಯವಾಗದಿರುವುದರ ಪ್ರತೀಕವಾಗುತ್ತಿರುವ ಪ್ರವೃತ್ತಿಯ ಪ್ರತೀಕವಾಗಿರುವಾಗಲೇ, ಒಟ್ಟಾರೆ ಕೆಲಸಗಾರರಲ್ಲಿ ಸೇವಾ ವಲಯದ ಕೆಲಸಗಾರರ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಅಂತೆಯೆ ಹೂಡಿಕೆ ಹಾಗು ಉದ್ಯೋಗ ಸೃಷ್ಠಿಯ ಅನುಪಾತದಲ್ಲೂ ಸಹಾ ಹೂಡಿಕೆ ಹೆಚ್ಚಿದಷ್ಟು ಉದ್ಯೋಗಗಳ ಸಂಖ್ಯೆ ಹೆಚ್ಚಾಗದಿರುವುದನ್ನು ತೋರಿದೆ. ಪರಿಣಾಮವಾಗಿ ಪ್ರತಿ ಉದ್ಯೋಗ ಸೃಷ್ಟಿಗೆ 2014–15'ರ ಸಾಲಿನ 4.5 ಕೋಟಿ ಬಂಡವಾಳ ಹೂಡಿಕೆಯನ್ನು ವಾಸ್ತವಿಕವಾಗಿ ಬೇಡುತ್ತಿದೆ ಎಂಬ ಅಂಶವನ್ನು ಸಮ್ಮೇಳನ ಉಲ್ಲೇಖಿಸಿದೆ.

ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗ ಇಳಿಕೆ–ಖಾಸಗಿಯಲ್ಲಿ ಹೆಚ್ಚಳ :

ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ 10.43 ಲಕ್ಷ, ಖಾಸಗಿ ವಲಯದಲ್ಲಿ 13.42 ಲಕ್ಷ ಸೇರಿ

ಪುಟ 10 ಕ್ಕೆ

ಕರಾವಳಿ ಕಡೆ

ವರದಿ: **ವಾಸುದೇವ ಉಚ್ಚಿಲ್**

ಹೋರಾಟಗಾರರಿಗೆ ರೌಡಿಪಟ್ಟ: ಜೋಕಟ್ಟೆ ನಾಗರಿಕರ ಪ್ರತಿಭಟನೆ

ಮಂಗಳೂರು ಹೊರವಲಯದ ಎಂಆರ್‌ಪಿಎಲ್ ಪೆಟ್ರೋದ್ಯಮ ಕಾರ್ಖಾನೆಯ ತ್ಯಾಜ್ಯಗಳಿಂದ ಪಕ್ಕದ ಜೋಕಟ್ಟೆ ಗ್ರಾಮಸ್ಥರಿಗೆ ಆಗುತ್ತಿದ್ದ ತೊಂದರೆಗಳ ವಿರುದ್ಧ ಎರಡು ವರ್ಷಕ್ಕೂ ಮೀರಿ ನಡೆಸುತ್ತಿದ್ದ ಪ್ರತಿಭಟನೆಗಳಿಗೆ ಗೆಲುವು ಒದಗುವ ರೀತಿಯಲ್ಲಿ ರಾಜ್ಯ ಸರಕಾರ ಮತ್ತು ಜಿಲ್ಲಾಡಳಿತ ಕೆಲವು ಕ್ರಮಗಳನ್ನು ಕೈಗೊಳ್ಳುವ ಹಂತದಲ್ಲಿತ್ತು. ಇತ್ತೀಚೆಗೆ ಜೋಕಟ್ಟೆ ಸಂತ್ರಸ್ಥ ಗ್ರಾಮಸ್ಥರ ನಿವೇಶನಗಳನ್ನು ಉದ್ಯಮವು ಸ್ವಾಧೀನಪಡಿಸುವ ಪ್ರಕಟಣೆ ನೀಡಿದಾಗ, ಹೋರಾಟದ ಕಾರಣದಿಂದಾಗಿ, ಭೂಮಿ ಮನೆ ಕಳಕೊಳ್ಳುವವರಿಗೆ ಒಳ್ಳೆಯ ನಿವೇಶನ, ಪರಿಹಾರ ಇತ್ಯಾದಿ ಪ್ರಸ್ತಾಪಗಳನ್ನು ಮುಂದಿಟ್ಟಿತ್ತು.

ಇದೆಲ್ಲ ಆಗುತ್ತಿರುವಂತೆಯೇ ಇದೀಗ ವಾರದ ಹಿಂದೆ ಜೋಕಟ್ಟೆ ನಾಗರಿಕ ಹೋರಾಟ ಸಮಿತಿಯು ಅಧ್ಯಕ್ಷರಾದ ಬಿ.ಎಸ್.ಹುಸೈನ್, ಮುಖ್ಯ ಕಾರ್ಯಕರ್ತರಾದ ಅಬೂಬಾಕರ್ ಬಾವಾ, ಮೊಯ್ದಿನ್ ಶರೀಫ್ ಮತ್ತು ವಿಜಯಾನಂದ ರಾವ್ ಅವರನ್ನು ರೌಡಿ ಪಟ್ಟಿಯಲ್ಲಿ ಜಿಲ್ಲಾ ಪೋಲೀಸ್ ಇಲಾಖೆ ಪ್ರಕಟಿಸಿ, ತತ್ಸಂಬಂಧ ಹೇಳಿಕೆ ನೀಡಲು ಅವರುಗಳಿಗೆ ನೋಟೀಸು ನೀಡಿತ್ತು.

ಜನಪರ ಹಾಗೂ ಪರಿಸರ ಹೋರಾಟಗಾರರನ್ನು ರೌಡಿಗಳ ಪಟ್ಟಿಗೆ ಸೇರಿಸುವ ಪೋಲೀಸ್ ಇಲಾಖೆ ಹುನ್ನಾರದ ಹಿಂದೆ ಇಲಾಖೆಯ ಒಳಗಡೆ ಸೇರಿಕೊಂಡಿರುವ ವ್ಯಕ್ತಿಗಳ ಕೋಮುವಾದಿತ್ವದ ವಾಸನೆ ಎಲ್ಲರಿಗೂ ಹೊಡೆಯುವಂತಿದೆ.

ಪೋಲೀಸರ ದುಷ್ಟ ಬುದ್ಧಿಯನ್ನು ವಿರೋಧಿಸಿ ಜೋಕಟ್ಟೆ ನಾಗರಿಕರ ಸಮಿತಿ ಹಾಗೂ ಡಿವೈಎಫ್‌ಐ ನೇತೃತ್ವದಲ್ಲಿ ಸುರತ್ಕಲ್ ಪರಿಸರದ ನಾಗರಿಕರು



ಸಪ್ಟೆಂಬರ್ 19ರಂದು ಕಪ್ಪು ವಸ್ತ್ರ ಪ್ರದರ್ಶಿಸಿ ಸುರತ್ಕಲ್ ಪೇಟೆಯಲ್ಲಿ ಮೌನ ಮೆರವಣಿಗೆ ನಡೆಸಿದರು. ಮಹಿಳೆಯರೂ, ವೃದ್ಧರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನಾಕಾರರ ಮೆರವಣಿಗೆ ಹೆದ್ದಾರಿಯ ಮೇಲುಸೇತುವೆಯಲ್ಲಿ ಸಾಗುತ್ತಿದ್ದಂತೆ ಸುರತ್ಕಲ್ ಪೋಲೀಸ್ ಠಾಣೆಗೆ ಸಾಗುವ ದಾರಿಯಲ್ಲಿ ಪೋಲೀಸರಿಂದ ತಡೆಹಿಡಿಯಲ್ಪಟ್ಟಿತು. ಮೆರವಣಿಗೆಯು ಧರಣಿಯಾಗಿ ಪರಿವರ್ತಿತವಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ "ಠಾಣಾಧಿಕಾರಿ ಚೆಲುವರಾಜು ಹೋರಾಟಗಾರರನ್ನು ರೌಡಿಗಳನ್ನಾಗಿ ರೌಡಿಗಳನ್ನು ಜನನಾಯಕ ರನ್ನಾಗಿ ಪರಿಗಣಿಸುತ್ತಾರೆ. ಸುರತ್ಕಲ್ ಪರಿಸರದ ಎಲ್ಲಾ ಕಾನೂನು ಬಾಹಿತ ವ್ಯವಹಾರಗಳನ್ನು ಹಣದಾಸೆಗಾಗಿ ಪೋಷಿಸುತ್ತಿದ್ದು ಜನ ಸಾಮಾನ್ಯರಿಗೆ ನ್ಯಾಯ ಮರೀಚಿಕೆಯಾಗಿದೆ. ಜನತೆ ಪೋಲೀಸ್ ಠಾಣೆಗೆ ತೆರಳಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಜೋಕಟ್ಟೆ ಹೋರಾಟಗಾರರ ಮೇಲಿನ ರೌಡಿಶೀಟ್ ಮತ್ತು ಚೆಲುವರಾಜುವಿನ ಉದ್ಧಟತನದ ಪರಮಾವಧಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಜನಪರ ಸಂಘಟನೆಗಳ ಆಶ್ರಯದಲ್ಲಿ ತೀವ್ರರೀತಿಯ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಹೋರಾಟ ಸಮಿತಿಯ ಅಧ್ಯಕ್ಷ ಬಿ.ಎಸ್. ಹುಸೈನ್, ಡಿವೈಎಫ್‌ಐ ದ.ಕ.ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಪಣಂಬೂರು ಉಪವಿಭಾಗದ ಎಸಿಪಿಯವರು ಬಂದು ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸುವವರೆಗೂ ಧರಣಿ ನಿರತರು ಸ್ಥಳ ಬಿಟ್ಟು ಕದಲಿಲ್ಲ. ಹೋರಾಟಗಾರರ ಮೇಲೆ ಸುಳ್ಳು ಸುಳ್ಳೇ ಹಾಕಿರುವ ರೌಡಿಪಟ್ಟಿಯನ್ನು ಹಿಂತೆಗೆಯಬೇಕೆಂದು ಮತ್ತು ಇನ್ಸ್‌ಪೆಕ್ಟರ್ ಚಲುವರಾಜು ರವರ ಅಮಾನತ್ತಿಗೆ ಆಗ್ರಹಿಸಲಾಯಿತು.

ಡಿವೈಎಫ್‌ಐ ಜಿಲ್ಲಾ ಮುಖಂಡರಾದ ಸಂತೋಷ್ ಕುಮಾರ್ ಬಜಾಲ್, ಸಾದಿಕ್ ಕಣ್ಣೂರು, ಶ್ರೀನಾಥ್ ಕಾಟಿಪಳ್ಳ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಚರಣ್ ಪಂಜಿಮೊಗರು, ಜೋಕಟ್ಟೆ ನಾಗರಿಕ ಹೋರಾಟ ಸಮಿತಿ ಮುಖಂಡರಾದ ಅಬೂಬಾಕರ್ ಬಾವಾ, ಮೊಯ್ದಿನ್ ಶರೀಫ್, ವಿಜಯಾನಂದ ರಾವ್, ಮಂಗಳೂರು ತಾಲೂಕು ಪಂಚಾಯತ್ ಸದಸ್ಯ ಬಿ.ಎಸ್.ಬಶೀರ್, ಗ್ರಾಮ ಪಂಚಾಯತ್ ಉಪಾಧ್ಯಕ್ಷ ಶಂಶುದ್ದೀನ್, ಜನಪರ ಹೋರಾಟಗಾರರಾದ ವಿದ್ಯಾ ದಿನಕರ್, ನಟೇಶ್ ಉಳ್ಳಾಲ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತೋರಣಗಲ್ಲು : ಕೋಲ್ ಟಾರ್ ಕಾರ್ಖಾನೆಯ ವಿರುದ್ಧ ಪ್ರತಿಭಟನೆ

ಸರಕಾರವನ್ನು ವಂಚಿಸಿ, ಕಾನೂನು ಬಾಹಿರವಾಗಿ ಸಂಡೂರು ತಾಲೂಕಿನ ತೋರಣಗಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಲ್ತಾನಾಪುರ ಹತ್ತಿರ ಎಪ್ಸ್‌ಲಿನ್ ಕಾರ್ಬೈಡ್ ಪ್ರೈವೇಟ್ ಲಿಮಿಟೆಡ್(ಇ.ಸಿ.ಪಿ.ಎಲ್.) ಕೆಮಿಕಲ್ಸ್ ಕಾರ್ಖಾನೆ ಸ್ಥಾಪನೆಗೆ ಭೂಮಿಯನ್ನು ಗುತ್ತಿಗೆ ಪಡೆದಿದೆ. 34.65 ಎಕರೆ ಪ್ರದೇಶದಲ್ಲಿ, 3 ಲಕ್ಷ ಟಿಪಿಎ ಕೋಲ್ ಟಾರ್ ಉತ್ಪಾದಿಸಲು ಅಕ್ರಮವಾಗಿ ಕಟ್ಟಡ ಕಾಮಗಾರಿ ಕೆಲಸ ಭರದಿಂದ ನಡೆದಿದೆ. ಜೀವ ಸಂಕುಲ ನಾಶಕ ಕೆಮಿಕಲ್ಸ್ ಉತ್ಪಾದಿಸುವ ಕೈಗಾರಿಕೆ ಸ್ಥಾಪನೆಗೆ ಸ್ಥಳೀಯ ಸಂಸ್ಥೆಗಳು, ರೈತ–ಕಾರ್ಮಿಕ, ಯುವಜನ ವಿದ್ಯಾರ್ಥಿ ಪ್ರಜಾಸತ್ತಾತ್ಮಕ ಸಂಘ–ಸಂಸ್ಥೆಗಳು ಮತ್ತು ನಾಗರೀಕರ ವಿರೋಧವನ್ನು ವ್ಯಕ್ತಪಡಿಸಿ ಹಲವು ದಿನಗಳಿಂದ ತೀವ್ರವಾದ ಚಳುವಳಿಗಳನ್ನು ನಡೆಸುತ್ತಿವೆ.

ಕಳೆದ ಆರು ತಿಂಗಳಿಂದ ನಿರಂತರ ಜನರ ಅತಂಕ ನಿವಾರಣೆ ಮಾಡಲು ಕ್ರಮ ಕೈಗೊಳ್ಳಲು ಒತ್ತಾಯಿಸಿ ಹೋರಾಟಗಳನ್ನು ನಡೆಸುತ್ತಿದ್ದರೂ ಉದ್ಯಮಿಗಳಾಗಲಿ, ಸರ್ಕಾರದ ಇಲಾಖೆ ಅಥವಾ ಜಿಲ್ಲಾಡಳಿತವಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಬದಲಾಗಿ ಸ್ಥಳೀಯ ಕಾರ್ಮಿಕರನ್ನು ಮತ್ತು ನಾಗರಿಕರ ಮತ್ತು ಹೋರಾಟಗಾರರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡುವ ಮತ್ತು ಅಪಹರಣ, ಬೆದರಿಕೆ, ಹಲ್ಲೆ ನಡೆಸುವ ಭಯದ ವಾತಾವರಣ ಸೃಷ್ಟಿಯಾಗಿದೆ. ಜೀವಸಂಕುಲ ನಾಶಕ ಇ.ಸಿ.ಪಿ.ಎಲ್. 3 ಲಕ್ಷ ಟಿಪಿಎ ಕೋಲ್ ಟಾರ್ ಕೆಮಿಕಲ್ಸ್ ಕಾರ್ಖಾನೆಯ ಡಿಸ್ಟಿಲೇಶನ್ ಪ್ಲ್ಯಾಂಟ್ ಕಾಮಗಾರಿ ಕೆಲಸ ತಡೆಯಲು ಒತ್ತಾಯಿಸಿ ಮತ್ತೊಮ್ಮೆ ಪ್ರತಿಭಟನೆ ನಡೆಸಲಾಗಿದೆ. ಜಿಲ್ಲಾಡಳಿತ ಮತ್ತು ಸಂಬಂಧಿಸಿದ ಇಲಾಖೆಗಳಿಗೆ ಅಕ್ರಮವಾಗಿ ಸ್ಥಾಪನೆಯಾಗುವ ಕೈಗಾರಿಕೆಯನ್ನು ತಡೆಯಲು ಒತ್ತಾಯಿಸಲಾಗಿದೆ.

ಸೆಪ್ಟಂಬರ್ 20ರಂದು ಬೃಹತ್ ಪ್ರತಿಭಟನೆ ನಡೆಸಿ ಕಾರ್ಖಾನೆಯ ಗೇಟ್ ಬಳಿ ಸೇರಿದ ಸಾವಿರಾರು ಗ್ರಾಮಸ್ಥರು ಕಾರ್ಖಾನೆ ಸ್ಥಾಪನೆ ವಿರುದ್ಧ ಘೋಷಣೆ ಕೂಗಿದರು. ವಿಠ್ಠಲ್‌ಪುರ, ತೋರಣಗಲ್‌ನ ಜನತೆ ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದು ಹೋರಾಟದ ಬಲವನ್ನು ಹೆಚ್ಚಿಸಿತು. ಹೋರಾಟದ ತೀವ್ರತೆಯನ್ನು ಮನಗಂಡು ತಹಶೀಲ್ದಾರ್‌ರವರು ಕಾರ್ಖಾನೆ ಮುಚ್ಚಿಸುವುದಾಗಿ ಭರವಸೆ ನೀಡಿದ್ದಾರೆ.

ಪ್ರತಿಭಟನೆಯಲ್ಲಿ ಜೆ.ಎಂ.ಚನ್ನಬಸಯ್ಯ, ಎ.ಸ್ವಾಮಿ, ವಿ.ದೇವಣ್ಣ ಕುರಿಕುಪ್ಪ, ಎಂ.ತಾತಪ್ಪ, ಸೈಯದ್ ಸಿಕಂದರ್, ಯು.ಕೋನಪ್ಪ, ಯು. ತಿಪ್ಪೇಶ್ವಾಮಿ, ಗೋವಿಂದ ರೆಡ್ಡಿ, ಅರ್ಜುನ್, ಪರೀಫ್ ಈರಣ್ಣ, ಶಫೀ, ಹೆಚ್.ಸ್ವಾಮಿ ಮುಖಂಡರು ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು), ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ), ಗ್ರೀನ್ ಫೌಂಡೇಷನ್, ಕರ್ನಾಟಕ ರಕ್ಷಣಾ ವೇದಿಕೆ, ಕನಕದಾಸ ಯುವಕ ಸಂಘ, ಸ್ವಾಮಿ ವಿವೇಕಾನಂದ ಯೂತ್ ಅಸೋಸಿಯೇಷನ್, ಎಸ್.ಎಸ್.ಎ., ಅಂಬೇಡ್ಕರ್ ಸಂಘ, ಕುವೆಂಪು ಸಂಘ ಹಾಗೂ ಊರಿನ ಎಲ್ಲಾ ಸಂಘಟನೆಗಳು ಮತ್ತು ಇ.ಸಿ.ಪಿ.ಎಲ್. ಜೀವ ಸಂಕುಲ ನಾಶಕ ವಿರೋಧಿ ಸಮಿತಿ, ಕುಡಿತಿನಿಯಿಂದ ಭಾಗವಹಿಸಿದ್ದರು. ●



ಜಿಗ್ನೇಶ್ ಮೆವಾನಿ ಬಂಧನ ಖಂಡಿಸಿ ಪ್ರತಿಭಟನೆ

ದಲಿತರು ಮತ್ತು ಮುಸ್ಲಿಮರ ಮೇಲೆ ಮುಂದುವರಿದಿರುವ ನಕಲಿ ಗೋ ರಕ್ಷಕರ ದೌರ್ಜನ್ಯಗಳಿಗೆ ಖಂಡನೆ



ದೆಹಲಿಯಲ್ಲಿ ಸೆಪ್ಟೆಂಬರ್ 16ರಂದು ಜಂಟಿ–ಯಾಗಿ ಸಂಘಟಿಸಿದ್ದ ದಲಿತ ಸ್ವಾಭಿಮಾನ ರ್‍ಯಾಲಿಯಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದ ಉನಾ ಚಳುವಳಿ ಖ್ಯಾತಿಯ ಗುಜರಾತಿನ ದಲಿತ ನಾಯಕ ಜಿಗ್ನೇಶ್ ಮೆವಾನಿಯವರನ್ನು ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬಂಧಿಸಿ ಅಜ್ಞಾತ ಸ್ಥಳಕ್ಕೆ ಒಯ್ಯಲಾಗಿತ್ತು. ಮರು ದಿನ ಬಿಡುಗಡೆ ಆಗುವವರೆಗೆ ಅವರು ಎಲ್ಲಿದ್ದಾರೆ. ಎಂಬ ಬಗ್ಗೆ ಮಾಹಿತಿಯೇ ಇರಲಿಲ್ಲ. ಅಹಮದಾಬಾದ್ ಪೋಲಿಸ್ ಕಮಿಷನರ್ ಕಚೇರಿಯ ಮುಂದೆ ತೀವ್ರ ಪ್ರತಿಭಟನೆಗಳ ನಂತರ ಅವರನ್ನು ಬಿಡುಗಡೆ ಮಾಡಲಾಗಿದೆ. ಪ್ರಧಾನಿ ನರೇಂದ್ರಮೋದಿ ತಮ್ಮ ಹುಟ್ಟುಹಬ್ಬ ದಿನಾಚರಣೆಗೆ ಗುಜರಾತಿಗೆ ಎರಡು ದಿನಗಳ ಭೇಟಿ ಸಂದರ್ಭದಲ್ಲಿ ಮೆವಾನಿ ನಾಯಕತ್ವದಲ್ಲಿ ಪ್ರತಿಭಟನೆಗಳು ನಡೆಯಬಹುದೆಂದು ಬಂಧನ ಮಾಡಲಾಗಿದೆ ಎಂದು ಊಹಿಸಲಾಗಿದೆ.

ಜಿಗ್ನೇಶ್ ಮೆವಾನಿ ಬಂಧನವನ್ನು ಖಂಡಿಸಿ ಸೆಪ್ಟಂಬರ್ 17ರಂದು ಬೆಂಗಳೂರಿನ ಟೌನ್‌ಹಾಲ್ ಮುಂಭಾಗ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ದಲಿತ ಹಕ್ಕುಗಳ ಸಮಿತಿ, ಕರ್ನಾಟಕ (ಡಿಹೆಚ್‌ಎಸ್), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್), ಸಮುದಾಯ ಕರ್ನಾಟಕ ಮತ್ತು ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

“ಮೇವಾನಿ ಉನಾ ಚಳುವಳಿಯ ಒತ್ತಾಯಗಳನ್ನು ದೇಶವ್ಯಾಪಿ ಎಲ್ಲಾ ಎಡ ಮತ್ತು ದಲಿತ ಶಕ್ತಿಗಳ ಐಕ್ಯ ಚಳುವಳಿಯಾಗಿ ದಲಿತ ಸ್ವಾಭಿಮಾನ ರ್‍ಯಾಲಿ ದೆಹಲಿಯಲ್ಲಿ ಯಶಸ್ವಿಯಾಗಿ ನಡೆದಿರುವುದೂ, ಮೋದಿ ಸರಕಾರದ ನಿದ್ದೆಗೆಡಿಸಿದೆ. ಒಂದು ಕಡೆ ದಲಿತರ ಮುಸ್ಲಿಮರ ಮೇಲೆ ಸಂಘ ಪರಿವಾರದ ‘ನಕಲಿ ಗೋರಕ್ಷಕರ’ ದಾಳಿಗಳು, ಇನ್ನೊಂದು ಕಡೆ ಅದಕ್ಕೆ ಪ್ರತಿರೋಧವಾಗಿ ಬೆಳೆಯುತ್ತಿರುವ ದಲಿತ–ಮುಸ್ಲಿಮ್ ಐಕ್ಯ ಚಳುವಳಿಗೆ ಆಳುವವರ ಬೆದರಿಕೆಯನ್ನು ಹಿಮ್ಮೆಟ್ಟಿಸಲು ಪಣತೊಡಬೇಕಾಗಿದೆ.” ಎಂದು ಈ ಪ್ರತಿಭಟನೆಗೆ ಹೊರಡಿಸಲಾದ ಕರಪತ್ರದಲ್ಲಿ ಹೇಳಲಾಗಿದೆ.

ಪ್ರತಿಭಟನಾ ನಿರತರನ್ನು ಬಂಧಿಸಿದ ಪೋಲೀಸರು ನಂತರ ಬಿಡುಗಡೆಗೊಳಿಸಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಮುಖಂಡರಾದ ವೆಂಕಟೇಶ್, ಶೃತಿ, ಹನುಮಂತ್, ದಿಲೀಪ್, ಡಿವೈಎಫ್‌ಐ ಸಂಘಟನೆ ಮುಖಂಡರಾದ ನರೇಂದ್ರ, ಶಿವು, ಜೆಎಂಎಸ್ ಸಂಘಟನೆ ಮುಖಂಡರಾದ ಶಾರದಾ ಕೆ.ಎಸ್., ಸುನಂದಾ, ಬಿಜಿವಿಎಸ್‌ನ ಆರ್.ರಾಮಕೃಷ್ಣ, ಎಸ್. ಎಸ್.ಜೆ.ನ ಶ್ರೀಪಾದ್ ಭಟ್ ಸೇರಿದಂತೆ 20ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದರು.

ಇಂತಹ ಪ್ರತಿಭಟನೆಗಳು ಹಾಸನ ಮತ್ತಿತರ ಕಡೆ ನಡೆದಿರುವ ವರದಿಗಳು ಬಂದಿವೆ.

ನಾಡ : ಹಕ್ಕುಪತ್ರ ವಿತರಣೆಗೆ ಒತ್ತಾಯಿಸಿ ಪ್ರತಿಭಟನೆ ಪಂಚಾಯತ್ ಅಧಿಕಾರಿ ಜತೆ ನಿವೇಶನ ರಹಿತರ ವಾಗ್ವಾದ

ಉಡುಪಿ ಜಿಲ್ಲೆಯ ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ನಾಡ ಗ್ರಾಮ ಪಂಚಾಯತ್ ಕಛೇರಿ ಎದುರು ಸೆಪ್ಟಂಬರ್ 22ರಂದು ಭೂಮಿ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಮುಖ್ಯ ಬೀದಿಯಲ್ಲಿ ನಿವೇಶನ ರಹಿತರು ಮೆರವಣಿಗೆ ಮೂಲಕ ಘೋಷಣೆ ಕೂಗುತ್ತಾ – ನಾಡ ಗ್ರಾಮ ಪಂಚಾಯತ್ ಕಛೇರಿ ಎದುರು ಪ್ರತಿಭಟನೆ ಧರಣಿ ನಡೆಸಿದರು. ಈ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ ಕೋಣಿ, ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಬಡನಿವೇಶನ ರಹತರ ಪರ ಭೂಮಿ ಹಕ್ಕು ಪತ್ರ ಮಂಜೂರಾತಿಗೆ ಕ್ರಮ ವಹಿಸದಿರುವ ಬಗ್ಗೆ ತೀವ್ರವಾಗಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನಿವೇಶನ ರಹಿತ ಹೋರಾಟ ಸಮಿತಿ ಮುಖಂಡರು ಪಂಚಾಯತ್ ಚುನಾಯಿತ ಪ್ರತಿನಿಧಿಗಳ ಜತೆ ತೀವ್ರ ವಾಗ್ವಾದ–ಮಾತಿನ ಚಕಮಕಿ ನಡೆಸಿದರು. ಪೊಲೀಸ್ ಅಧಿಕಾರಿಗಳು ಮಧ್ಯ ಪ್ರವೇಶ ಮಾಡಿ ವಾತಾವರಣ ತಿಳಿಗೊಳಿಸಿ ಪ್ರತಿಭಟನಾಕಾರರನ್ನು ಸಮಾಧಾನ ಪಡಿಸಿದರು.



ಮಾಜಿ ಪಂಚಾಯತ್ ಸದಸ್ಯ ಫಿಲಿಪ್‌ಡಿ'ಸಿಲ್ವ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ರಾಜೀವ ಪಡುಕೋಣೆ, ನಾಗರತ್ನ ನಾಡ, ಮನೋರಮಾ ಭಂಡಾರಿ, ಶ್ರೀಮತಿ ಆಚಾರ್, ರಾಜೇಶ್ ಪಡುಕೋಣೆ, ಶೀಲಾವತಿ, ಸುಬ್ರಹ್ಮಣ್ಯ ಆಚಾರ್, ಲಯೆನ್ಸ್ ರಬೆಲ್ಲ ಪರಮೇಶ್ವರ ಪ್ರತಿಭಟನಾ ಹೋರಾಟದ ನೇತೃತ್ವ ವಹಿಸಿದ್ದರು.

ವರದಿ : ವೆಂಕಟೇಶ ಕೋಣಿ



ಕಾವೇರಿ: ಕೇಂದ್ರ ಸರ್ಕಾರದ ಜಾಣ ಮೌನಕ್ಕೆ ಖಂಡನೆ

ನದಿ ನೀರಿನ ಹಂಚಿಕೆ, ನಿರ್ವಹಣೆ ಪ್ರಧಾನವಾಗಿ ಆಡಳಿತಾತ್ಮಕ ವಿಚಾರವಾಗಿದ್ದೂ ಕೇಂದ್ರ ಸರ್ಕಾರ ಈಗಲಾದರೂ ಮಧ್ಯ ಪ್ರವೇಶ ಮಾಡಿ ಎರಡೂ ರಾಜ್ಯ ಸರ್ಕಾರಗಳ ಸಭೆ ಕರೆದು ಜಲ ಸಂಪನ್ಮೂಲಗಳ ಕೊರತೆಯ ಸಂದರ್ಭವನ್ನು ಎದುರಿಸಲು ಅಗತ್ಯ ಮಾತುಕತೆ ನಡೆಸಿ ಪರಸ್ಪರ ಸಮನ್ವಯತೆಯ ಪರಿಹಾರ ಮಾರ್ಗೋಪಾಯಗಳಿಗೆ ಮುಂದಾಗಬೇಕು ಮತ್ತು ಕೇಂದ್ರ ಸರ್ಕಾರ ತನ್ನ ಅಧಿಕಾರದ ರಾಜ–ಕಾರಣದ ಸ್ವಾರ್ಥಕ್ಕಾಗಿ ಎರಡೂ ರಾಜ್ಯ ಸರ್ಕಾರಗಳ ನಡುವಿನ ಕಾವೇರಿ ಸಮಸ್ಯೆಯನ್ನು ನಿರ್ಲಕ್ಷಿಸುತ್ತಾ ಬಂದಿವೆ.

ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಢರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಸಂಘಟನೆಗಳು ತೀವ್ರವಾಗಿ ಖಂಡಿಸಿ ಸೆಪ್ಟಂಬರ್ 20ರಂದು ಬೆಂಗಳೂರಿನ ಕಾರ್ಪೋರೇಷನ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ತಮಿಳುನಾಡು ರಾಜ್ಯದಲ್ಲಿರುವ ಕನ್ನಡಿಗರ ಹಿತವನ್ನು ಮತ್ತು ಕರ್ನಾಟಕದಲ್ಲಿರುವ ತಮಿಳು ಜನರ ಹಿತವನ್ನು ಎರಡೂ ರಾಜ್ಯ ಸರ್ಕಾರಗಳು ಕಾಪಾಡಬೇಕೆಂದು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಕಾರ್ಪೋರೇಷನ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಎಸ್.ಎಫ್.ಐ., ಡಿವೈಎಫ್ಐ, ಜೆಎಂಎಸ್ ಸಂಘಟನೆಯ ಮುಖಂಡರನ್ನು ಬಂಧಿಸಿದರು. ಜೆ.ಎಂ.ಎಸ್ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ಲಕ್ಷ್ಮಿ, ಶಾರದಾ ಕೆ.ಎಸ್., ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ವೇಗಾನಂದ ಡಿವೈಎಫ್ಐನ ನರೇಂದ್ರರನ್ನು ಬಂಧಿಸಿದ್ದರು.

"ರೈತರು ಅನ್ನದಾತರು, ಭೂಗಳ್ಳರಲ್ಲ" ಒಕ್ಕಲೆಬ್ಬಿಸುವುದಕ್ಕೆ ಪೊಲೀಸರ ನಿಯೋಜನೆ ಸರಿಯಲ್ಲ

ರೈತರು ಅನ್ನದಾತರು, ಭೂಗಳ್ಳರಲ್ಲ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಕಳೆದ 30–40 ವರ್ಷಗಳಿಂದ ಭೂರಹಿತ ಕಡು ಬಡವರು ಸರಕಾರಿ ಭೂಮಿ ಹಾಗೂ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಹಿಂದೆ ಆಳ್ವಿಕೆ ನಡೆಸಿದ ಎಲ್ಲಾ ಸರಕಾರಗಳು ಭೂರಹಿತ ಸಾಗುವಳಿದಾರರಿಗೆ ಇದುವರೆಗೆ ಹಕ್ಕು ಪತ್ರ ನೀಡಿಲ್ಲ. ಈಗಿನ ಕಾಂಗ್ರೆಸ್ ಸರಕಾರ ಭೂಮಿ ಕಬಳಿಕೆ ನಿಷೇಧ ಕಾಯ್ದೆಯ ವ್ಯಾಪ್ತಿಗೆ ಈ ಬಗರ್ ಹುಕುಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರನ್ನು ತಂದು ಸಾಗುವಳಿ ಭೂಮಿಯಿಂದ ಹೊರ ಹಾಕುವ ಹುನ್ನಾರ ನಡೆಯುತ್ತಿದೆ ಎಂದು ಯು. ಬಸವರಾಜು ರವರು ಹೇಳಿದ್ದಾರೆ.



ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು ಅವರು ಬಗರ್ ಹುಕುಂ ಸಾಗುವಳಿದಾರರು, ಸೆಪ್ಟಂಬರ್ 19ರಂದು ಅರಣ್ಯ ಭೂಮಿ ಸಾಗುವಳಿದಾರರ ತಾಲೂಕು ಸಮಾವೇಶವನ್ನು ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯಾದ್ಯಂತ ಅಧಿಕಾರಿಗಳ ಚುನಾಯಿತ ಪ್ರತಿನಿಧಿಗಳ ಕೈಗೊಂಬೆಯಾಗಿದ್ದು, ಬಂದೂಕು ಹಾಗೂ ಲಾಠಿ ತೋರಿಸಿ ಬೆದರಿಸಿ, ಕ್ರಿಮಿನಲ್ ಮೊಕದ್ದಮೆಗಳನ್ನು ಹೊರಿಸಿ ಹೊಟ್ಟೆ ಪಾಡಿಗಾಗಿ ಉಳುಮೆ ಮಾಡುತ್ತಿರುವ ರೈತರನ್ನು ಪೊಲೀಸರು ಒಕ್ಕಲೆಬ್ಬಿಸುತ್ತಿರುವುದು ಖಂಡನಾರ್ಹ. ನಾಡಿನಲ್ಲಿರುವ ಬಂಜರು ಭೂಮಿಯನ್ನು ಪರಿಶ್ರಮದಿಂದ ಉಳುಮೆ ಮಾಡಿ ಹಲವು ವರ್ಷಗಳಿಂದ ಅನ್ನವನ್ನು ಬೆಳೆಯುತ್ತಿರುವುದು ಅಪರಾಧವೇ ಎಂದು ಪ್ರಶ್ನಿಸಿ, ನಮ್ಮ ರೈತರು ಭೂಗಳ್ಳರಲ್ಲ ಎಂದ ಅವರು, ರೈತರು ಉಳುಮೆ ಮಾಡುತ್ತಲಿರುವ ಭೂಮಿಯನ್ನು ಕಸಿದುಕೊಂಡು ಕಂಪನಿಯವರಿಗೆ ನೀಡುತ್ತಿರುವ ರಾಜಕಾರಣಿಗಳು ನಿಜವಾದ ಭೂಗಳ್ಳರು ಎಂದರು.



ಇದುವರೆಗೂ ಆಡಳಿತ ನಡೆಸಿದ ರಾಜ್ಯ ಮತ್ತು ಕೇಂದ್ರ ಸರಕಾರಗಳ ವಿರುದ್ಧ ಆರೋಪ ಹೊರಿಸುತ್ತ ಸ್ಥಳೀಯ ಶಾಸಕರು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ತಾಲ್ಲೂಕಿನ 121 ರೈತರ ಬೆಂಬಲಕ್ಕೆ ನಿಲ್ಲುವುದು ಬಿಟ್ಟು ಕಾಣದಂತಾಗಿದ್ದಾರೆ. ಅವರನ್ನು ಹುಡುಕಿಕೊಡಿ ಎಂದು ಕಿಡಿ ಕಾರಿದರು.

ಕೆಪಿಆರ್‌ಎಸ್ ಜಿಲ್ಲಾ ಅಧ್ಯಕ್ಷ ಬಿ.ಎಸ್.ಸೊಪ್ಪಿನ್ ಮಾತನಾಡಿ "ಜಿಲ್ಲಾಧಿಕಾರಿಗಳು ಮೊದಲು ಸರ್ವೆ ಕಾರ್ಯಕ್ಕೆ ಮುಂದಾಗಲಿ, ಹುಲ್ಲುಗಾವಲು, ಗುಡ್ಡಗಾಡು, ಅರಣ್ಯ ಪ್ರವೇಶವೆಂದು ಕಾಗದ ಪತ್ರಗಳಲ್ಲಿ ಕಾಣಿಸುತ್ತಿದ್ದೀರಲ್ಲ. ವಾಸ್ತವಾಂಶವನ್ನು ಮೊದಲು ಬಹಿರಂಗಪಡಿಸಿ. ಉಳುಮೆ ಮಾಡುತ್ತಿರುವ ಎಲ್ಲಾ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಿ. ಇಲ್ಲದಿದ್ದಲ್ಲಿ ಅಮರಣಾಂತ ಉಪವಾಸ ಮಾಡಬೇಕಾದೀತು ಎಂದು ಎಚ್ಚರಿಸಿದರು.

ಸದರಿ ಸಮಾವೇಶದಲ್ಲಿ ಕಲಘಟಗಿ ತಾಲೂಕಿನ ವಿವಿಧ ಗ್ರಾಮಗಳ ಸಾಗುವಳಿದಾರರು ಭಾಗವಹಿಸಿದ್ದರು. ಸಮಾವೇಶದ ನಂತರ ಕಲಘಟಗಿ ತಾಲ್ಲೂಕು ತಹಶೀಲ್ದಾರ್ ರವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ಕೆಪಿಆರ್‌ಎಸ್ ಜಿಲ್ಲಾ ಅಧ್ಯಕ್ಷರಾದ ಬಿ.ಎಸ್.ಸೊಪ್ಪಿನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಹೆಚ್.ಪಾಟೀಲ, ಧಾರವಾಡ ಜಿಲ್ಲಾ ಎಸ್‌ಎಫ್ಐ ಮುಖಂಡ ಈರಪ್ಪ ನಾಯಕ್ ಭಾಗವಹಿಸಿದ್ದರು.

ವರದಿ : ಕೆ.ಹೆಚ್.ಪಾಟೀಲ

ಕೇಳಿಸಿದ್ದು

ಉನ್ನತ ಸ್ಥಾನದಲ್ಲಿರುವವರು, ಜನನಾಯಕರೆಂದು ಭ್ರಮಿಸಿದವರು, ಅಷ್ಟೇಕೆ ಜನರ ವಿವೇಕವನ್ನು ವಿಸ್ತರಿಸಬೇಕಾದ ಸಾಹಿತಿಗಳು, ಚಿಂತಕರು, ಮಾಧ್ಯಮದವರಲ್ಲಿ ಕೆಲವರು ತಾವು ಆಡಿದ ಮಾತೇ ಅಂತಿಮವೆಂಬಂತೆ ವರ್ತಿಸುವ ರೀತಿಯಿಂದ ಸಮುದಾಯದ ಸಂವೇದನೆ ಕದಡುತ್ತಿದೆ. ಕೆಲವೊಮ್ಮೆ ಸಮೂಹ ಸನ್ನಿಯೂ ಆಗಿಬಿಡುತ್ತಿದೆ. ಇದರರ್ಥ ಅಭಿಪ್ರಾಯ ಭೇದ ಇರಬಾರದೆಂದಲ್ಲ. ಇರಲೇಬೇಕು; ಆದರೆ ಅದಕ್ಕೆ ಆಧಾರವಿರಬೇಕು; ಅಂತಿಮ ಸತ್ಯದ ಅಹಂಕಾರವಿರಬಾರದು; ಸರ್ವಜ್ಞತೆಯ ಸೊಕ್ಕು ಸುಳಿಯಬಾರದು; ಸಂವಾದದ ಸೌಜನ್ಯವನ್ನು ಬಿಡಬಾರದು. ಇಂಥ ಎಚ್ಚರವಿರದೆ ಇದ್ದರೆ ನಾವೆಲ್ಲ 'ಬಾವಿಕಪ್ಪೆ'ಗಳಾಗಿಬಿಡುತ್ತೇವೆ.
ಶಿಕ್ಷಣ ಮಾಧ್ಯಮದ ವಿಷಯದಾಚೆಗೂ ಅನೇಕ ಕ್ಷೇತ್ರಗಳಲ್ಲಿ ಬಾವಿಕಪ್ಪೆಯ ರೂಪಕವನ್ನು ಅನ್ವಯಿಸಬಹುದು. ತಮ್ಮ ತಿಳಿವಳಿಕೆಯೊಂದೇ ಶ್ರೇಷ್ಠ, ಉಳಿದದ್ದೆಲ್ಲ ಕನಿಷ್ಠ ಎಂದು ಬೊಬ್ಬಿರಿಯುವವರೆಲ್ಲರೂ ಬಾವಿಕಪ್ಪೆ ರೂಪಕಾತ್ಮರೇ ಆಗಿರುತ್ತಾರೆ. ಇಂಥವರು ಸಾಮಾನ್ಯವಾಗಿ ಏಕ ರೇಖಾತ್ಮಕ ಚಿಂತನೆಯವರು ಅಥವಾ ಏಕರೇಖಾತ್ಮಕ ಚರ್ಚಾ ಪಟುಗಳು.
ಬಾವಿ ಕಪ್ಪೆತನವು ಭಾಷೆಗೆ ಸಂಬಂಧಿಸಿದ್ದಲ್ಲ. ನಮ್ಮ ವಿವೇಕದ ವ್ಯಾಪ್ತಿಗೆ ಸಂಬಂಧಿಸಿದ್ದು, ನಮ್ಮ ನಮ್ಮ ಬದುಕಿನ ಬಾವಿಗಳಲ್ಲಿ ವಿವೇಕ ಉಸಿರಾಡಿದರೆ ಪಂಚೇಂದ್ರಿಯಗಳ ಪ್ರಜಾಪ್ರಭುತ್ವೀಕರಣವಾಗುತ್ತದೆ. ಬಾವಿ ಸಮುದ್ರವಾಗುತ್ತದೆ.

– ಬರಗೂರು ರಾಮಚಂದ್ರಪ್ಪ

ಆಧಾರ್ ನೋಂದಣಿ ಕಡ್ಡಾಯಗೊಳಿಸಿ ಪಡಿತರ, ರೇಗಾದ ಫಲಗಳನ್ನು ನಿರಾಕರಿಸುವ ಹುನ್ನಾರ ಪ್ರತಿಭಟನೆ, ಪ್ರಚಾರಾಂದೋಲನ ತೀವ್ರಗೊಳಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗದ ಹೊರೆಗಳನ್ನು ಹೇರುವ ಜೊತೆಗೆ ರೇಶನ್‌ಗೆ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿಯ ಅಡಿಯಲ್ಲಿ ಕೂಲಿ ಪಡೆಯಲು ಮತ್ತು ಎಲ್ಲ ಕಲ್ಯಾಣ ಕ್ರಮಗಳ ಪ್ರಯೋಜನ ಪಡೆಯಲು ಆಧಾರ್ ನೋಂದಣಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಈ ಮೂಲಕ ಇವುಗಳ ಫಲಾನುಭವಿಗಳಿಗೆ ಕಾನೂನು ಪ್ರಕಾರ ಸಿಗಬೇಕಾದ್ದನ್ನು ನಿರಾಕರಿಸಿದಂತಾಗುತ್ತಿದೆ. ಕೃಷಿ ಸಂಕಟಗಳಿಂದ ರೈತರಿಗೆ ಪರಿಹಾರ ಸಿಗುತ್ತಿಲ್ಲ. ಜತೆಗೆ ಭೂಮಿ ಪ್ರಶ್ನೆಯೂ ಸೇರಿಕೊಂಡಿದೆ. ಇವೆಲ್ಲವುಗಳ ವಿರುದ್ಧ ಪ್ರಚಾರಾಂದೋಲನಗಳನ್ನು, ಪ್ರತಿಭಟನೆಗಳನ್ನು ಮತ್ತು ಸಮರಧೀರ ಕಾರ್ಯಾಚರಣೆಗಳನ್ನು ತೀವ್ರಗೊಳಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಇದರಲ್ಲಿ ಜನಗಳ ಸ್ಥಳೀಯ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ಅದು ಹೇಳಿದೆ.

ಸೆಪ್ಟಂಬರ್ 17ರಿಂದ 19ರ ವರೆಗೆ ಸಭೆ ಸೇರಿದ ಕೇಂದ್ರ ಸಮಿತಿ ಇತ್ತೀಚಿನ ಬೆಳವಣಿಗೆಗಳನ್ನು ಚರ್ಚಿಸಿ ಈ ಕರೆ ನೀಡಿದೆ. ಅಲ್ಲದೆ ಸಿಪಿಐ(ಎಂ) ಕೇಂದ್ರ ಸಮಿತಿ ಈ ಮುಂದಿನ ಕರೆಗಳನ್ನೂ ನೀಡಿದೆ:

- **ಕಾಶ್ಮೀರದ ಸನ್ನಿವೇಶದ ಬಗ್ಗೆ ಎಲ್ಲ ರಾಜ್ಯಗಳಲ್ಲಿ ಪ್ರಚಾರಾಂದೋಲನ ನಡೆಸಬೇಕು;**
- **ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಕೋಮುವಾದ-ವಿರೋಧಿ ವೇದಿಕೆಗಳನ್ನು ನಿರ್ಮಾಣ ಮಾಡಬೇಕು;**
- **ದಲಿತ ಗುಂಪುಗಳೊಂದಿಗೆ ಜಂಟಿ ಚಟುವಟಿಕೆಗಳನ್ನು, ಕಾರ್ಯಾಚರಣೆಗಳನ್ನು ಬಲಪಡಿಸಬೇಕು;**
- **ಈ ಬಿಜೆಪಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ಎದುರು ಶರಣಾಗುವುದರ ವಿರುದ್ಧ ಪ್ರಚಾರ ನಡೆಸಬೇಕು.**

ಮುಂದಿನ(2017ರ) ನವಂಬರ್ 7ಕ್ಕೆ ರಶ್ಯಾದಲ್ಲಿ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ ನಡೆದು ನೂರು ವರ್ಷಗಳಾಗುತ್ತವೆ. ಈ ಕ್ರಾಂತಿಯ ಸಾಧನೆಗಳು ಮತ್ತು ಅದರ ಪ್ರಸ್ತುತತೆ ಕುರಿತಂತೆ ಈ ನವಂಬರ್ 7ರಿಂದ ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ ಆಚರಿಸಬೇಕು ಎಂದೂ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.

ಜಮ್ಮು ಮತ್ತು ಕಾಶ್ಮೀರ ಒಮ್ಮತದ ಹೇಳಿಕೆಯ ಪಾಲನೆಯಾಗಲಿ

ಸೆಪ್ಟಂಬರ್ 18ರ ಮುಂಜಾನೆ ಜಮ್ಮು ಮತ್ತು ಕಾಶ್ಮೀರದ ಉರಿ ಎಂಬಲ್ಲಿ ಒಂದು ಭಯೋತ್ಪಾದನಾ ದಾಳಿಯಲ್ಲಿ 17 ಭಾರತೀಯ ಸೇನಾ ಸಿಬ್ಬಂದಿಯ ಹತ್ಯೆಯಾಗಿರುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ.

ಈ ಬಗ್ಗೆ ಈಗಾಲೇ ಕೇಂದ್ರ ಸಮಿತಿ ಹೇಳಿಕೆ ನೀಡಿದ್ದು ಪಾಕಿಸ್ತಾನ ಉಗ್ರಗಾಮಿ ಶಕ್ತಿಗಳಿಗೆ ನೆರವು, ಕುಮ್ಮಕ್ಕು ನೀಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ. ಭಯೋತ್ಪಾದನೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸದು ಎಂಬ ತನ್ನ ನಿಲುವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಇಂತಹ ಚಟುವಟಿಕೆಗಳು ಈ ಪ್ರದೇಶದಲ್ಲಿ ಶಾಂತಿ ಪ್ರಕ್ರಿಯೆಗೆ ದೊಡ್ಡ ಅಡ್ಡಿಯಾಗಿವೆ ಎಂದು ಅದು ಹೇಳಿದೆ.


ದೊಡ್ಡ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ಅಲ್ಲಿ ನೆಲೆಗೊಳಿಸಿದರೂ ಉಗ್ರರ ನುಸುಳಿಕೆ ಮುಂದುವರೆಯುತ್ತಿರುವುದನ್ನು ತಡೆಯುವಲ್ಲಿ ಸರಕಾರ ವಿಫಲವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಕೇಂದ್ರ ಸಮಿತಿಯ ಈ ಸಭೆ ಈ ವಿಷಯ ಕುರಿತಂತೆ ಪ್ರತ್ಯೇಕವಾದ ನಿರ್ಣಯವನ್ನು ಅಂಗೀಕರಿಸಿತು. ಅಲ್ಲಿ ನಡೆಯುತ್ತಿರುವ ಹಲವಾರು ಸಾವು-ನೋವುಗಳು, ಮೂರು ತಿಂಗಳಿಂದಲೂ ಮುಂದುವರೆಯುತ್ತಿರುವ ಗಲಭೆಗಳು,ಮತ್ತು ಗಡಿಯಾಚೆಯಿಂದ ನೆರವು ಮತ್ತು ಕುಮ್ಮಕ್ಕು ಪಡೆದಿರುವ ಭಯೋತ್ಪಾದಕ ದಾಳಿಗಳು ಇವೆಲ್ಲವುಗಳ ಬಗ್ಗೆ ಗಂಭೀರ ಆತಂಕವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಸರ್ವಪಕ್ಷಗಳ ನಿಯೋಗ ದಿಲ್ಲಿಗೆ ಮರಳಿದ ಮೇಲೆ ಒಂದು ಒಮ್ಮತದ ಹೇಳಿಕೆಯಲ್ಲಿ "ಕೇಂದ್ರ ಮತ್ತು ರಾಜ್ಯ ಸರಕಾರ ತಕ್ಷಣವೇ ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ರಾಜಕೀಯ ಸಂವಾದವನ್ನು ಆರಂಭಿಸಬೇಕು" ಎಂದು ಒಪ್ಪಿದ್ದರೂ, ಈ ಬಿಜೆಪಿ ಸರಕಾರ ಅದರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಈದ್‌ನ ದಿನ ಶ್ರೀನಗರದಲ್ಲಿ ಎಲ್ಲ ಮಸೀದಿಗಳನ್ನು ಮುಚ್ಚಿಡುವ ಅಭೂತಪೂರ್ವ ಬೆಳವಣಿಗೆ ನಡೆದಿದೆ. ಈದ್‌ಗಾಗಳಲ್ಲೂ ಧಾರ್ಮಿಕ ನಂಬಿಕೆಯವರು ಪ್ರಾರ್ಥನೆ ಸಲ್ಲಿಸಲು ಬಿಡಲಿಲ್ಲ. ಶ್ರೀನಗರದ ಪ್ರಸಿದ್ಧ ಜಾಮಿಯಾ ಮಸ್ಜಿದ್ ಈ ಹಿಂದೆ 1821ರಲ್ಲಿ ಮಾತ್ರ ನೈಸರ್ಗಿಕ ವಿಕೋಪದಿಂದಾಗಿ ಮುಚ್ಚಲ್ಪಟ್ಟಿತ್ತು. ಈ ವರ್ಷ ಮೊದಲ ಬಾರಿಗೆ ಈದ್ ಪ್ರಾರ್ಥನೆಗೆ ಅದು ಮುಚ್ಚಿತ್ತು.

ಇದು ಒಂದು ಅಪಾಯಕಾರಿ ಪರಿಸ್ಥಿತಿ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ. ಕೇಂದ್ರ ಸರಕಾರ ಮತ್ತು ಹಿಂದುತ್ವ ಶಕ್ತಿಗಳು ಒಂದು ಕರ್ಕಶ ಪಾಕಿಸ್ತಾನ-ವಿರೋಧಿ ನಿಲುವು ಮತ್ತು ಕಾಶ್ಮೀರ ಕಣಿವೆಯಲ್ಲಿ ಭದ್ರತಾ ಪಡೆಗಳಿಂದ ದಮನದ ಮೂಲಕ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸಬಹುದು, ಅದರಿಂದ ಮುಂಬರುವ ಚುನಾವಣೆಗಳಲ್ಲಿ ಪ್ರಯೋಜನಗಳನ್ನು ಗಿಟ್ಟಿಸಿಕೊಳ್ಳಬಹುದು ಎಂದು ಭಾವಿಸಿರುವಂತೆ ಇದೆ. ಇದು ಅಪಾಯಕಾರಿ ಎಂದು ಕೇಂದ್ರ ಸಮಿತಿ ಹೇಳಿದೆ.

ಇಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ಏರ್ಪಡಾಗಲು ಒಂದು ದ್ವಿವಿಧ ದಾರಿಯನ್ನು ಅನುಸರಿಸಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸಿದೆ. ಒಂದೆಡೆಯಲ್ಲಿ ವಿಶ್ವಾಸ ಮೂಡಿಸುವ ಕ್ರಮಗಳನ್ನು ಜಾರಿಗೊಳಿಸಬೇಕು ಮತ್ತು ಇನ್ನೊಂದೆಡೆಯಲ್ಲಿ ಸಂಬಂಧಪಟ್ಟ ಎಲ್ಲರೊಂದಿಗೆ ತಕ್ಷಣವೇ ರಾಜಕೀಯ ಸಂವಾದವನ್ನು ನಡೆಸಬೇಕು ಹಾಗೂ ಭಾರತ-ಪಾಕಿಸ್ತಾನ ಮಾತುಕತೆಗಳನ್ನು ಪುನರಾರಂಭಿಸಬೇಕು ಎಂದು ಸಿಪಿಐ(ಎಂ) ಪುನರುಚ್ಚರಿಸಿದೆ.



ಸರ್ವಪಕ್ಷ ನಿಯೋಗ ಶ್ರೀನಗರದಿಂದ ಹಿಂದಿರುಗಿದ ನಂತರ ನಡೆದ ಸಭೆ ಒಂದು ಒಮ್ಮತದ ಹೇಳಿಕೆ ನೀಡಿತು. ಆದರೆ ಸರಕಾರ ಅದನ್ನು ಜಾರಿಗೊಳಿಸಲಿಲ್ಲ.

ಗೋರಕ್ಷಕರ ಹಾವಳಿ ತಡೆಯಬೇಕು

ಗೋರಕ್ಷಕ ಸಮಿತಿಗಳ ಹಾವಳಿಗಳು, ಗೋಮಾಂಸ ತಿಂದ-ರೆಂಬ ಆಧಾರರಹಿತ ಆಪಾದನೆಗಳ ಮೇಲೆ ಮುಸ್ಲಿಮರು ಮತ್ತು ದಲಿತರ ಮೇಲೆ ಮಾರಣಾಂತಿಕ ದಾಳಿಗಳು ನಡೆಯುತ್ತಿರುವುದನ್ನು ಚರ್ಚಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ "ಇಂತಹ ಗೋರಕ್ಷಕರೆನ್ನುವ ಗುಂಪುಗಳು ಕಾನೂನನ್ನು ತಮ್ಮ ಕೈಗೆ ತಗೊಳ್ಳಲು ಬಿಡಬಾರದು. ಕಾನೂನಿನ ಜಾರಿಯ ಕೆಲಸವನ್ನು ಸರಕಾರದ ಸಂಸ್ಥೆಗಳಿಗೆ ಮತ್ತು ಪೋಲೀಸರಿಗೆ ವಹಿಸಲಾಗಿದೆ. ಇಂತಹ ಖಾಸಗಿ ಗಲಭೆಕೋರರು ಮನಬಂದಂತೆ ವರ್ತಿಸಲು ಅನುಮತಿ ಇರಬಾರದು. ಈ ಗೋರಕ್ಷಕರೆನ್ನುವ ಗುಂಪುಗಳನ್ನು ತಕ್ಷಣವೇ ನಿಷೇಧಿಸಬೇಕು" ಎಂದು ಆಗ್ರಹಿಸಿದೆ.

ಅಲ್ಪಸಂಖ್ಯಾತರ ಮೇಲೆ ದಾಳಿಗಳು ಜಾತ್ಯಾತೀತ ಗಣತಂತ್ರದ ರಕ್ಷಣೆಗೆ ಸಜ್ಜಾಗಬೇಕು

ಗೋಮಾಂಸ ಸೇವನೆ ಮತ್ತು ಗೋರ-ಕ್ಷೆಯ ಪ್ರಶ್ನೆಯ ಮೇಲಷ್ಟೇ ಅಲ್ಲ, ವಿವಿಧ ಇತರ ನೆವಗಳನ್ನೂ ಒಡ್ಡಿ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಮುಂದುವರೆಯುತ್ತಿವೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ಈ ದಾಳಿಗಳನ್ನು ಬಲವಾಗಿ ಖಂಡಿಸಿದೆ. ಕಳೆದೊಂದು ವಾರದಲ್ಲೇ ದಿಲ್ಲಿಯ ರಾಜಧಾನಿ ಪ್ರದೇಶದ ಸಮೀಪದಲ್ಲೇ ಎರಡು ಇಂತಹ ಭೀಕರ ದಾಳಿಗಳು ನಡೆದಿವೆ- ಉತ್ತರಪ್ರದೇಶದ ಬಿಜ್ನೋರ್‌ನಲ್ಲಿ ಮತ್ತು ರಾಜಸ್ತಾನದ ಭರತ್‌ಪುರ್‌ನಲ್ಲಿ. ಸಿಪಿಐ(ಎಂ) ಮುಖಂಡರ ನಿಯೋಗ ಈ ಪ್ರದೇಶಗಳಿಗೆ ಭೇಟಿ ನೀಡಲಿದೆ. ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಅಮಾನುಷ ದಾಳಿ ನಡೆದು ಗಂಭೀರ ಪರಿಸ್ಥಿತಿ ಉಂಟಾಗಿರುವ ಹರಿಯಾಣದ ಮೇವತ್‌ಗೂ ಮತ್ತೊಂದು ಸಿಪಿಐ(ಎಂ) ನಿಯೋಗ ಭೇಟಿ ನೀಡುತ್ತಿದೆ.

ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮತ್ತು ಹಿಂದುತ್ವ ಅಜೆಂಡಾವನ್ನು ಆಕ್ರಾಮಕವಾಗಿ ಅನುಸರಿಸುವ ಪ್ರಯತ್ನಗಳನ್ನು ಆರೆಸ್ಸೆಸ್-ಬಿಜೆಪಿ ಮತ್ತು ಅದರ ವಿವಿಧ ಸಂಯೋಜಿತ ಸಂಘಟನೆಗಳು ನಡೆಸುತ್ತಿವೆ ಎಂಬುದನ್ನು ಪರಿಶೀಲಿಸಿದ ಕೇಂದ್ರ ಸಮಿತಿ ಭಾರತದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಸಂವಿಧಾನಿಕ ಗಣತಂತ್ರದ ರಕ್ಷಣೆಗೆ ಅಣಿನೆರೆಯಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿದೆ.

ಜನತೆಯ ಮೇಲೆ ಹೆಚ್ಚುತ್ತಿರುವ ಹೊರೆಗಳು ಬುಡಮೇಲಾಗುತ್ತಿದೆ ಬಹು ಜನಗಳ ಬದುಕು

ಆರ್ಥಿಕ ಪರಿಸ್ಥಿತಿಯನ್ನು ಚರ್ಚಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ ಅದು ಹದಗೆಡುತ್ತಲೇ ಸಾಗಿದೆ ಎಂದು ಅಭಿಪ್ರಾಯ ಪಟ್ಟಿದೆ. ಕೈಗಾರಿಕಾ ಮತ್ತು ಸರಕು ಉತ್ಪಾದನೆಗಳ ಅಂಕಿ-ಅಂಶಗಳು ಇಳಿಯುತ್ತಿವೆ, ಬೆಳವಣಿಗೆ ದರಗಳು ನಕಾರಾತ್ಮಕವಾಗಿವೆ. ಬಂಡವಾಳ ಸರಕುಗಳ ಉತ್ಪಾದನೆಯಲ್ಲಿ 30ಶೇ. ಆತಂಕಕಾರಿ ಇಳಿಕೆ ಭವಿಷ್ಯಕ್ಕೆ ಅತ್ಯಂತ ಹಾನಿಕಾರಕ. ಇಡೀ ಇಂಧನ ವಲಯ ಬಿಕ್ಕಟ್ಟಿನಲ್ಲಿದೆ, ಇದು ಕೈಗಾರಿಕಾ ನಿಧಾನಗತಿ ಬಹಳ ಗಮನಾರ್ಹವಾಗಿದೆ ಎಂಬುದನ್ನು ಸಲೂಚಿಸುತ್ತದೆ. ಪರಿಣಾಮವಾಗಿ ನಿರುದ್ಯೋಗ ಏರುತ್ತಿದೆ, ಕೃಷಿ ಬಿಕ್ಕಟ್ಟು ಆಳಗೊಳ್ಳುತ್ತಿದೆ. ಬಡಜನರಿಗೆ ಕಾನೂನು ಪ್ರಕಾರ ಸಿಗಬೇಕಾದ ಅಲ್ಪ-ಸ್ವಲ್ಪ ಪರಿಹಾರಗಳನ್ನೂ ಆಧಾರ್ ಕಾರ್ಡ್‌ಗಳೂ ಬೇಕೇ ಬೇಕೆಂದು ವಿಧಿಸಿ ವಂಚಿಸಲಾಗುತ್ತಿದೆ.

ಬೆಲೆಗಳು ನಿರಂತರವಾಗಿ ಏರುತ್ತಲೇ ಇವೆ, ಎಲ್ಲ ಆಹಾರ ಸಾಮಗ್ರಿಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವೆಚ್ಚದಾಯಕವಾಗುತ್ತಿದ್ದು, ನಮಮ್ ಬಹುಪಾಲು ಜನಗಳ ಬದುಕಿನ ಪರಿಸ್ಥಿತಿಗಳನ್ನು ತೀವ್ರವಾಗಿ ಬುಡಮೇಲು ಮಾಡುತ್ತಿವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ವಿದೇಶಾಂಗ ಧೋರಣೆಯಲ್ಲಿ ಪಲ್ಲಟ ಕಿರಿಯ ಮಿಲಿಟರಿ ಭಾಗೀದಾರನ ಪಾತ್ರ

ಈ ಬಿಜೆಪಿ ಸರಕಾರದ ಅಡಿಯಲ್ಲಿ ಭಾರತದ ವಿದೇಶಾಂಗ ಧೋರಣೆಪಲ್ಲಟಗೊಳ್ಳುತ್ತಿದೆ ಎಂಬುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಗಮನಿಸಿತು. ಅಲಿಪ್ತ ಆಂದೋಲನದ ಶೃಂಗಸಭೆಯೊಂದರಲ್ಲಿ ಭಾರದ ಪ್ರಧಾನ ಮಂತ್ರಿಗಳು ಭಾಗವಹಿಸದೇ ಇರುವ ಮೊದಲ ಸಂದರ್ಭ ಆಂದೋಲನದ ಇತಿಹಾಸದಲ್ಲಿ ಬಂದಂತಾಗಿದೆ. ಅಮೆರಿಕನ್ ಒತ್ತಡಗಳಿಗೆ ಶರಣಾಗಿ, ಅದರ ಕಿರಿಯ ಭಾಗೀದಾರನಾಗಿ ಮೂಡು ಬಂದಿರುವ ಈ ಬಿಜೆಪಿ ಸರಕಾರ ದೀರ್ಘಕಾಲದಿಂದ ಸ್ಥಾಪಿತಗೊಂಡಿರುವ , ದೇಸ ಬಹುವಾಗಿ ನೆಚ್ಚಿರುವ ಸ್ವತಂತ್ರ ವಿದೇಶಾಂಗಧೋರಣೆಯ ನಿಲುವುಗಳನ್ನು ತ್ವರಿತವಾಗಿ ಬುಡಮೇಲು ಮಾಡಲಾಗುತ್ತಿದೆ ಎಂದು ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಅಮೆರಿಕಾದೊಂದಿಗೆ ಸಾಗಾಣಿಕೆ ವಿನಿಮಯ ಒಪ್ಪಂದ ಮನವಿ (ಎಲ್‌ಇಎಂಒಎ) ಎಂದು ಹೆಸರಿಸಿರುವ ಸಮರ ಸಾಗಾಣಿಕೆ ಬೆಂಬಲ ಒಪ್ಪಂದಕ್ಕೆ ಸಹಿ ಹಾಕಿರುವ ಬಗ್ಗೆ ವಿಶ್ಲೇಷಿಸುತ್ತ, ಕೇಂದ್ರ ಸಮಿತಿ, ಇಂತಹ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಭಾರತ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಮಿಲಿಟರಿ ಮಿತ್ರ ಎಂಬ ಅಧಿಕೃತ ಸ್ಥಾನವನ್ನು ಪಡೆದಿದೆ. ಈ ಒಪ್ಪಂದದ ಅಡಿಯಲ್ಲಿ ಅಮೆರಿಕಾದ ವಿಮಾನ ಪಡೆ ಮತ್ತು ನೌಕಾಪಡೆ ಭಾರತದ ನೌಕಾ ಮತ್ತು ವಿಮಾನ ನೆಲೆಗಳನ್ನು ನಿಯಮಿತವಾಗಿ ತಮ್ಮ ಸಮರ ಸಾಗಾಣಿಕೆಗೆ ಬೆಂಬಲವಾಗಿ ಮತ್ತು ತಮ್ಮ ಯುದ್ಧಹಡಗುಗಳು ಮತ್ತು ಯುದ್ಧವಿಮಾನಗಳಿಗೆ ಇಂಧನ ತುಂಬಿಸಿಕೊಳ್ಳಲು ಬಳಸಿಕೊಳ್ಳಬಹುದಾಗಿದೆ. ಅಮೆರಿಕನ್ ಸಶಸ್ತ್ರ ಪಡೆಗಳು ಮೂರನೇ ದೇಶವೊಂದರಲ್ಲಿ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸುವಾಗ ಭಾರತದ ಮಿಲಿಟರಿ ನೆಲೆಗಳನ್ನು ಬಳಸಲು ಅವಕಾಶವಾಗಿದೆ.

ಈ ಮೂಲಕ ಮೋದಿ ಸರಕಾರ ಭಾರತದ ಸಾಮರಿಕ ಸ್ವಾಯತ್ತತೆಗೆ ಕುಂದು ತಂದಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಟೀಕಿಸಿದೆ.

ಕೇರಳ:ಆರೆಸ್ಸೆಸ್/ಬಿಜೆಪಿ ಮುಖವಾಡ ಬಯಲಾಗುತ್ತದೆ

ಕೇರಳದ ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್) ಸರಕಾರ ಅಧಿಕಾರ ವಹಿಸಿಕೊಂಡ ನೂರು ದಿನಗಳೊಳಗೆ ಚುನಾವಣಾ ಪ್ರಚಾರದ ವೇಳೆಯಲ್ಲಿ ನೀಡಿದ ಕೆಲವು ಭರವಸೆಗಳನ್ನು ಈಡೇರಿಸಿದೆ ಎಂದು ಕೇಂದ್ರ ಸಮಿತಿ ಗಮನಿಸಿತು.

ಇನ್ನೊಂದೆಡೆಯಲ್ಲಿ ಆರೆಸ್ಸೆಸ್-ಬಿಜೆಪಿ ರಾಜ್ಯದ ಎಲ್ಲೆಡೆಗಳಲ್ಲಿ ಸಿಪಿಐ(ಎಂ) ಮತ್ತು ಎಲ್‌ಡಿಎಫ್ ವಿರುದ್ಧ ಹಿಂಸಾಚಾರ ಹರಿಯ ಬಿಟ್ಟಿರುವುದನ್ನು ಗಮನಿಸಿದ ಕೇಂದ್ರ ಸಮಿತಿ ಈ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿದೆ.

ಮುಂದಿನ ಪುಟ ನೋಡಿ



ಅಮೆರಿಕಾದೊಂದಿಗೆ ಮಿಲಿಟರಿ ಒಪ್ಪಂದದ ಬಗ್ಗೆ ಸತೀಶ್ ಆಚಾರ್ಯ ಅವರ ವ್ಯಂಗ್ಯಚಿತ್ರ



ಪಠಾಣಕೋಟ್ ವಾಯುನೆಲೆಯ ನಂತರ
ಈಗ ಉರಿ ಸೇನಾನೆಲೆಯ ಮೇಲೆ
ಭಯೋತ್ಪಾದಕ ದಾಳಿ ನಡೆದಿದೆ.
ಇದಕ್ಕೆ ತಕ್ಕ ಪಾಠ ಕಲಿಸಬೇಕೆಂಬ ಬೊಬ್ಬೆ ಎದ್ದಿದೆ.
ಈ ಹಿಂದೆ ಇಂತಹ ಸಂದರ್ಭದಲ್ಲಿ
ಆಗಿನ ಪ್ರಧಾನ ಮಂತ್ರಿಗಳದ್ದು ಸೌಮ್ಯಧೋರಣೆ
ಎಂದು ತೀಕ್ಷ್ಣವಾಗಿ ಟೀಕಿಸಿದ್ದ
ಈಗಿನ ಪ್ರಧಾನ ಮಂತ್ರಿಗಳ ಮುಂದೆ ಇರುವ ಪ್ರಶ್ನೆ–

ಉರಿ ನಂತರ ಮುಂದೇನು?



ಪ್ರಕಾಶ್ ಕಾರಟ್

ಉರಿಯಲ್ಲಿನ ಸೇನಾ ನೆಲೆ ಮೇಲೆ ನಾಲ್ವರು ಶಸ್ತ್ರಸಜ್ಜಿತ ಉಗ್ರಗಾಮಿಗಳು ನಡೆಸಿದ ದಾಳಿಯಲ್ಲಿ 18 ಭಾರತೀಯ ಸೈನಿಕರು ಹತರಾಗಿದ್ದಾರೆ. ಈ ಘೋರ ದಾಳಿಯು ಇದಕ್ಕೆ ಭಾರತ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಪ್ರಶ್ನೆಯನ್ನು ಎತ್ತಿದೆ. ಈ ವರ್ಷದ ಜನವರಿಯಲ್ಲಿ ಭಾರತೀಯ ವಾಯುಸೇನೆಯ ಪಠಾಣ್‌ಕೋಟ್ ನೆಲೆ ಮೇಲೆ ದಾಳಿ ನಡೆದಾಗಲೂ ಮೋದಿ ಸರಕಾರಕ್ಕೆ ಇದೇ ರೀತಿಯ ಸಮಸ್ಯೆ ಎದುರಾಗಿತ್ತು.

ಆರ್‌ಎಸ್‌ಎಸ್ ಮತ್ತು ಅದರ ಸಹವರ್ತಿಗಳು ಉಗ್ರ ಪ್ರತಿಕ್ರಿಯೆಗೆ ಕರೆ ನೀಡಿದ್ದಾರೆ. ರಾಮ್ ಮಾಧವ್‌ರ ಮಾತುಗಳಲ್ಲಿ ಹೇಳುವುದಾದರೆ 'ಒಂದು ಹಲ್ಲಿಗೆ ಪ್ರತಿಯಾಗಿ ಇಡೀ ದವಡೆ ಮೂಳೆಯನ್ನೇ ಕೀಳಬೇಕು'. ಟಿವಿ ಚಾನೆಲ್‌ಗಳ ಸ್ಟುಡಿಯೋಗಳಂತೂ ನಿವೃತ್ತ ಸೇನಾ ಅಧಿಕಾರಿಗಳು ಮತ್ತು ಸ್ವಯಂಘೋಷಿತ ರಕ್ಷಣಾ ತಜ್ಞರಿಂದ ತುಂಬಿ ಹೋಗಿ ಅವರೆಲ್ಲಾ ಪಾಕಿಸ್ತಾನಕ್ಕೆ ಒಂದು ಪಾಠ ಕಲಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಕಳೆದ ಲೋಕಸಭೆ ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಮತ್ತು ಸ್ವತಃ ಮೋದಿ ಅವರಂತೂ ಪಾಕಿಸ್ತಾನದ ಬಗ್ಗೆ ಮನಮೋಹನ್ ಸಿಂಗ್ ತಳೆದಿದ್ದ ಸೌಮ್ಯ ಧೋರಣೆಯ ವಿರುದ್ಧ ಪ್ರಚಾರ ಮಾಡಿದ್ದರು.

ಇವೆಲ್ಲವೂ ಇತ್ತೀಚಿನ ಪ್ರಚೋದನೆಗೆ ಹೇಗೆ ಪ್ರತಿಕ್ರಿಯಿಸಬೇಕೆಂಬ ವಿಚಾರದಲ್ಲಿ ಮೋದಿ ಸರಕಾರವನ್ನು ಬಲು ಕಷ್ಟದ ಪರಿಸ್ಥಿತಿಗೆ ತಳ್ಳಿದೆ. ಎಲ್ಲಾ ಸೇನಾ ಕಾರ್ಯಾಚರಣೆಯ ಆಯ್ಕೆಗಳು ಗಂಭೀರವಾದ ಮಿತಿಗಳನ್ನು ಹೊಂದಿವೆ ಅಥವಾ ಪರಮಾಣು ಶಸ್ತ್ರ ಸನ್ನದ್ಧ ಉಭಯ ದೇಶಗಳ ನಡುವೆ ಸಂಘರ್ಷ ಉಲ್ಬಣಿಸಬಹುದು ಎನ್ನುವುದು ಒಂದು ಸಮಚಿತ್ತದ ವಿಶ್ಲೇಷಣೆ ಮಾಡಿದಾಗ ರಾಜಕೀಯ ವ್ಯವಸ್ಥೆಗೆ ಸ್ಪಷ್ಟವಾಗಬೇಕು. ಅತ್ಯಂತ ಕನಿಷ್ಠ ಸೇನಾ ಪ್ರತಿಕ್ರಿಯೆಯೆಂದರೆ ನಿಯಂತ್ರಣ ಗಡಿ ರೇಖೆಯಲ್ಲಿ (ಎಲ್‌ಓಸಿ) ಶೆಲ್ ಮತ್ತು ಕ್ಷಿಪಣಿ ದಾಳಿ ನಡೆಸುವುದು. 2014–15ರಲ್ಲಿ ಗಡಿಗುಂಟ ನಡೆದ ಶೆಲ್ ದಾಳಿ ಮತ್ತು ಗುಂಡು ಹಾರಾಟವನ್ನು ಗಮನಿಸಿದರೆ ಅದು ಎಲ್‌ಓಸಿಗುಂಟ ಎರಡೂ ಕಡೆ ವಾಸಿಸುವ ನಾಗರಿಕರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ, ಭಾರಿ ಪ್ರಮಾಣದಲ್ಲಿ ಜನರು ಮನೆ ಬಿಟ್ಟು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್‌ಓಸಿಯಲ್ಲಿ 2003ರಿಂದ ಜಾರಿಯಲ್ಲಿರುವ ಕದನವಿರಾಮವನ್ನು ಅಂತ್ಯಗೊಳಿಸುವುದಕ್ಕೆ ಅರ್ಥವಿಲ್ಲ. ಗಡಿಯಲ್ಲಿ ಗುಂಡಿನ ಚಕಮಕಿ ಮತ್ತು ಸ್ಥಳೀಯ ಸಂಘರ್ಷಗಳು ನಡೆದರೆ ಈಗಾಗಲೇ ಸಮಸ್ಯೆಯಿಂದ ತತ್ತರಿಸಿರುವ ಕಾಶ್ಮೀರದೊಳಗೆ ಗಡಿಯಾಚೆಯಿಂದ ನುಸುಳಿ ಬರುವ ಅವಕಾಶ ಹೆಚ್ಚುತ್ತದೆ ಅಷ್ಟೇ.



ಭಯೋತ್ಪಾದಕರಿಗೆ ಮತ್ತು ಜಿಹಾದಿ ಸಂಘಟನೆಗಳಿಗೆ ಆಶ್ರಯ ನೀಡುವುದನ್ನು ನಿಲ್ಲಿಸುವಂತೆ ಪಾಕಿಸ್ತಾನದ ಮೇಲೆ ಒತ್ತಡ ಹೇರಲು ಪೂರ್ಣ ಪ್ರಮಾಣದ ರಾಜತಾಂತ್ರಿಕ ಪ್ರಯತ್ನಗಳು ಆಗಬೇಕು. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕ ಸಂಘಟನೆಗಳ ವಿಷಯವನ್ನು ಅಂತಾರಾಷ್ಟ್ರೀಯ ವೇದಿಕೆ ಮೇಲೆ ತರಲು ಬಹುಮುಖಿ ರಾಜತಾಂತ್ರಿಕ ಮತ್ತು ನಿರಂತರ ರಾಜಕೀಯ ಉಪಕ್ರಮಗಳು ಅಗತ್ಯ. ಹೀಗೆ ಮಾಡಬೇಕಾದರೆ, ಅಮೆರಿಕಾದ ಸಾಮರಿಕ ಹಿತಗಳೊಂದಿಗೆ ಜೋಡಿಸಿಕೊಂಡದ್ದರಿಂದ ಭಾರತಕ್ಕೆ ಏನು ಅನುಕೂಲ ಆಗಿದೆ ಎಂಬುದರತ್ತ ಕಠಿಣ ನೋಟ ಬೀರಬೇಕಾಗುತ್ತದೆ. ಉರಿ ಸೇನಾ ನೆಲೆ ಮೇಲೆ ನಡೆದ ಭಯೋತ್ಪಾದಕರ ದಾಳಿಯನ್ನು ಅಮೆರಿಕ ಮತ್ತು ರಷ್ಯಾ ಖಂಡಿಸಿವೆ. ಆದರೆ, ಅಮೆರಿಕದ ಹೇಳಿಕೆ ಪಾಕಿಸ್ತಾನದ ಹೆಸರನ್ನು ಪ್ರಸ್ತಾವಿಸಿಲ್ಲ. ಪಾಕಿಸ್ತಾನದ ಕಡೆಯಿಂದ ಎಲ್‌ಓಸಿ ಯಿಂದ ಭಯೋತ್ಪಾದಕರು ನುಸುಳಿದ್ದರು ಎಂಬ ಭಾರತದ ವಾದವನ್ನು ರಷ್ಯಾದ ಹೇಳಿಕೆ ಗುರುತಿಸಿದೆ. ಭಾರತದ ವಿಶ್ವಾಸಾರ್ಹ ಮಿತ್ರನಾಗಿದ್ದ ರಷ್ಯಾ ಸೆಪ್ಟೆಂಬರ್ ಕೊನೆಯಲ್ಲಿ ಪಾಕಿಸ್ತಾನದೊಂದಿಗೆ ಪ್ರಥಮ ಜಂಟಿ ಸೇನಾ ಕವಾಯತು ನಡೆಸಲಿದೆ. ಅಮೆರಿಕ–ಭಾರತ ಮೈತ್ರಿ ಚಿಗುರೊಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಹೆಜ್ಜೆಯನ್ನು ನೋಡಬೇಕಾಗಿದೆ.

ವ್ಯೂಹಾತ್ಮಕ ತಾಳ್ಮೆಯನ್ನು ಕಾಯ್ದುಕೊಳ್ಳುತ್ತ, ಗಮನವನ್ನು ನಿಯಂತ್ರಣ ರೇಖೆಯಲ್ಲಿ ಮತ್ತು ಪಾಕಿಸ್ತಾನದೊಂದಿಗಿನ ಅಂತಾರಾಷ್ಟ್ರೀಯ ಗಡಿಯಲ್ಲಿ ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸುವುದಕ್ಕೆ ಕೇಂದ್ರೀಕರಿಸಬೇಕು. ಈ ಮೂಲಕ ಒಳನುಸುಳುವಿಕೆ ಯಶಸ್ವಿಯಾಗದಂತೆ ಖಚಿತಪಡಿಸಬೇಕು. ಪಠಾಣ್‌ಕೋಟ್ ವಾಯುನೆಲೆ ಮೇಲಿನ ದಾಳಿಯ ಬಗ್ಗೆ ತನಿಖೆಯ ಫಲಿತಾಂಶ ಏನೆಂಬುದು ಇನ್ನೂ ಗೊತ್ತಾಗಿಲ್ಲ. ಭಯೋತ್ಪಾದಕರು ಉರಿಯಲ್ಲಿ ಎಲ್‌ಓಸಿಯನ್ನು ಹೇಗೆ ದಾಟಿದರು ಮತ್ತು ಅತಿ ಭದ್ರತೆಯ ಶಿಬಿರದ ಮೇಲೆ ಹೇಗೆ ದಾಳಿ ಮಾಡಿದರು ಎನ್ನುವ ಬಗ್ಗೆ ತನಿಖೆ ನಡೆಯಬೇಕಿದೆ. ಜಿಹಾದಿ ಆತ್ಮಹತ್ಯಾ ದಳಗಳ ನುಸುಳಿಕೆ ಒಡ್ಡಿರುವ ಬೆದರಿಕೆಯನ್ನು ನಿಭಾಯಿಸಲು ಸಮಗ್ರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಕಾಶ್ಮೀರ ಕಣಿವೆಯಲ್ಲಿ ಸಾಮೂಹಿಕ ಬಂಡಾಯವೆದ್ದಿರುವ ಹಿನ್ನೆಲೆಯಲ್ಲಿ ಉರಿ ಪ್ರಕರಣ ನಡೆದಿದೆ. ಜನತೆಯ ಅಶಾಂತಿಯನ್ನು ನಿಭಾಯಿಸಲು ಸರಕಾರ ನಡೆಸುತ್ತಿರುವ ದಬ್ಬಾಳಿಕೆ ಮತ್ತು ಪೆಲೆಟ್ ಗನ್ ಬಳಕೆ ವ್ಯಾಪಕ ಕಳವಳಕ್ಕೆ ಕಾರಣವಾಗಿತ್ತು ಹಾಗೂ ಇದರಿಂದಾಗಿ ಜಗತ್ತಿನ ಕಣ್ಣಿನಲ್ಲಿ ಭಾರತದ ಪ್ರತಿಷ್ಠೆಗೆ ಹಾನಿ ತಟ್ಟಿದೆ.

ಕಾಶ್ಮೀರ ಕಣಿವೆಯಲ್ಲಿ ಸಾಮೂಹಿಕ ಬಂಡಾಯವೆದ್ದಿರುವ ಹಿನ್ನೆಲೆಯಲ್ಲಿ ಉರಿ ಪ್ರಕರಣ ನಡೆದಿದೆ. ಇದು ಕಾಶ್ಮೀರ ಕಣಿವೆಯಲ್ಲಿ ದಬ್ಬಾಳಿಕೆಯನ್ನು ಹೆಚ್ಚಿಸಲು ಇನ್ನೊಂದು ನೆವವಾಗಬಾರದು.

ಪೆಲೆಟ್ ಗನ್‌ನಂಥ ಅಪಾಯಕಾರಿ ಶಸ್ತ್ರಗಳನ್ನು ಬಳಸುವುದನ್ನು ತಡೆಯಲು ಮೋದಿ ಸರಕಾರ ತಕ್ಷಣದ ಕ್ರಮಗಳನ್ನು ಕೈಗೊಳ್ಳದ ಹೊರತು ಮತ್ತು ಕಾಶ್ಮೀರ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವುದನ್ನು ನಿಲ್ಲಿಸದ ಹೊರತು ಪಾಕಿಸ್ತಾನ ವಿರುದ್ಧದ ಯಾವುದೇ ರಾಜತಾಂತ್ರಿಕ ದಾಳಿ ಪೂರ್ಣವಾಗಿ ಪರಿಣಾಮಕಾರಿ ಆಗುವುದಿಲ್ಲ. ಎಲ್ಲಾ ಬಗೆಯ ರಾಜಕೀಯ ಅಭಿಪ್ರಾಯ ಹೊಂದಿರುವವರ ಜೊತೆ ಮಾತುಕತೆಯ ರಾಜಕೀಯ ಪ್ರಕ್ರಿಯೆಯನ್ನು ಸರಕಾರ ಇನ್ನಷ್ಟು ವಿಳಂಬವಿಲ್ಲದೆ ಆರಂಭಿಸಬೇಕು. ಉರಿ ಪ್ರಕರಣವು ಕಾಶ್ಮೀರ ಕಣಿವೆಯಲ್ಲಿ ದಬ್ಬಾಳಿಕೆಯನ್ನು ಹೆಚ್ಚಿಸಲು ಇನ್ನೊಂದು ನೆವವಾಗಬಾರದು.

ಪ್ರತಿಭಟನೆ, ಪ್ರಚಾರಾಂದೋಲನ ತೀವ್ರಗೊಳಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಆರೆಸ್ಸೆಸ್/ಬಿಜೆಪಿ ತಮ್ಮ ಹಿಂಸಾತ್ಮಕ ಚಟುವಟಿಕೆಗಳನ್ನು ಸಿಪಿಐ(ಎಂ) ವಿರುದ್ಧ ಒಂದು ಸುಳ್ಳು ಪ್ರಚಾರಾಂದೋಲನದ ಮುಖವಾಡದಲ್ಲಿ ನಡೆಸುತ್ತಿವೆ. ಆರೆಸ್ಸೆಸ್/ಬಿಜೆಪಿಯ ಈ ವಂಚನೆಯನ್ನು ದೇಶಾದ್ಯಂತ ಬಯಲಿಗೆಳೆಯಲಾಗುವುದು ಮತ್ತು ಕೇರಳದ ಶಾಂತಿಪ್ರಿಯ ಜನತೆ ಇದಕ್ಕೆ ತಕ್ಕ ಉತ್ತರ ನೀಡುತ್ತಾರೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಬಂಗಾಳ: ಭಯೋತ್ಪಾದನೆಯ ವಿರುದ್ಧ ಜನತಾ ಹೋರಾಟ ಮುಂದುವರೆಯುತ್ತಿದೆ

ಟಿಎಂಸಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಪರೋಕ್ಷ ಬೆಂಬಲದೊಂದಿಗೆ ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಹರಿಯ ಬಿಟ್ಟಿರುವ ಭಯೋತ್ಪಾದಕ ಮತ್ತು ಬೆದರಿಕೆಯ ರಾಜಕೀಯ ಮುಂದುವರೆಯುತ್ತಿದೆ. ಭಯೋತ್ಪಾದನೆ ಮತ್ತು ಬೆದರಿಕೆಗಳೊಂದಿಗೆ ಅವರು ವಿಧಾನ ಸಭಾ ಚುನಾವಣೆಗಳ ಮೊದಲು ಎಡರಂಗ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಗಳಿಸಿದ ಹತೋಟಿಯನ್ನು ಕೈವಶ ಮಾಡಿಕೊಳ್ಳಲು ಒತ್ತಡ ಹಾಕುವ ಮತ್ತು ಹಣಬಲದ ಮೂಲಕ ಆಮಿಷದ ತಂತ್ರಗಳನ್ನೂ ಬಳಸುತ್ತಿದ್ದಾರೆ. ಆಳುವ ಟಿಎಂಸಿ ವರ್ಷಾಂತ್ಯದೊಳಗೆ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿಪಕ್ಷಗಳನ್ನು ನಿರ್ನಾಮ ಮಾಡಿ 'ಕೈವಶ' ಮಾಡಿಕೊಳ್ಳುವುದಾಗಿ ಸಾರ್ವಜನಿಕವಾಗಿಯೇ ಸಾರಿದೆ. ಈ ದಾಳಿಗಳ ವಿರುದ್ಧ ಜನತಾ ಹೋರಾಟ ಮುಂದುವರೆಯುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ತ್ರಿಪುರಾ: ಕುತಂತ್ರಗಳನ್ನು ಜನತೆ ಸಹಿಸರು

ರಾಜ್ಯದ ಬುಡಕಟ್ಟು ಜನಗಳಿಗೆ ಪ್ರತ್ಯೇಕ ರಾಜ್ಯದ ವಿಭಜನಕಾರೀ ಪ್ರಚಾರವನ್ನು ನಡೆಸುತ್ತಿರುವ 'ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರ'(ಐಪಿಎಫ್‌ಟಿ)ದ ಹಿಂಸಾಚಾರದ ಪ್ರಚಾರವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ.

ಎಡರಂಗ ಸರಕಾರ ಆಗಸ್ಟ್ 23ರ ಹಿಂಸಾಚಾರದ ಘಟನೆಯನ್ನು ಹತೋಟಿಗೆ ತಂದು ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಪುನಃ ತಂದಿದೆ. ಈ ದಾಳಿಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಮಂದಿ ಗಾಯಗೊಂಡರು. ದಾಳಿ, ಅಗ್ನಿಸ್ಪರ್ಶದಲ್ಲಿ ತೊಡಗಿದ್ದವರೊಂದಿಗೆ ಸೇರಿಕೊಂಡು ಟಿಎಂಸಿ ಇದರಲ್ಲಿ ಸಕ್ರಿಯ ಪಾತ್ರ ವಹಿಸಿದೆ. ತ್ರಿಪುರಾದಲ್ಲಿನ ಎಡರಂಗ ಸರಕಾರವನ್ನು ಅಸ್ಥಿರಗೊಳಿಸುವ ಇಂತಹ ಕುತಂತ್ರಗಳನ್ನು ತ್ರಿಪುರಾದ ಜನತೆ ಸಹಿಸಿಕೊಳ್ಳುವುದಿಲ್ಲ ಎಂದು ಸಿಪಿಐ(ಎಂ) ಸಾರಿದೆ.



ಕೊಲ್ಕತ ಪ್ಲೀನಮ್ ನಿರ್ಧಾರಗಳ ಜಾರಿ

ಸಂಘಟನೆ ಕುರಿತ ಕೊಲ್ಕತ ಪ್ಲೀನವ್‌ನ ನಿರ್ಣಯಗಳ ಪ್ರಕಾರ ಪಕ್ಷದ ಕೇಂದ್ರವನ್ನು ಮತ್ತು ಪೊಲಿಟ್‌ಬ್ಯುರೊ/ಕೇಂದ್ರ ಸಮಿತಿ ಕೆಲಸಗಳನ್ನು ಬಲಗೊಳಿಸುವ ಮೂರ್ತ ಕ್ರಮಗಳನ್ನು ಕೇಂದ್ರ ಸಮಿತಿ ಚರ್ಚಿಸಿ ನಿರ್ಧರಿಸಿದೆ.

ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ

ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ನಡೆಸಬೇಕಾದ ಚಟುವಟಿಕೆಗಳ ಒಂದು ಕಾರ್ಯಕ್ರಮವನ್ನು ಕೇಂದ್ರ ಸಮಿತಿ ಚರ್ಚಿಸಿ ಅಂಗೀಕರಿಸಿತು. ಅಕ್ಟೋಬರ್ ಕ್ರಾಂತಿಯ ಕೊಡುಗೆಗಳು ಮತ್ತು ಇಂದು ಅದರ ಪ್ರಸ್ತುತತೆಯನ್ನು ಪ್ರಚುರಗೊಳಿಸುವ ರಾಜಕೀಯ ಸಭೆಗಳು, ಸೈದ್ಧಾಂತಿಕ ಪ್ರಚಾರಗಳು, ಸಾಂಸ್ಕೃತಿಕ/ಕಲಾ/ಸಂಗೀತ ಉತ್ಸವಗಳು ಇದರಲ್ಲಿ ಸೇರಿವೆ. ನವಂಬರ್ 7, 2016ರಿಂದ ಆರಂಭವಾಗಿ ನವಂಬರ್ 7, 2017ರ ವರೆಗೆ ಒಂದು ವರ್ಷದ ಕಾಲ ಈ ಕಾರ್ಯಕ್ರಮ ನಡೆಯುತ್ತದೆ.

‘ಸಮಾನತೆ ಸಾರಿದ ಶರಣರ ನಾಡಿನಲ್ಲಿ’... ಸಿಐಟಿಯು 13 ನೇ ರಾಜ್ಯ ಸಮ್ಮೇಳನ

‘ಸಮರಶೀಲ ಹಾಗೂ ಸಂಘರ್ಷದ ಕಾರ್ಮಿಕ ಚಳವಳಿ ಕಟ್ಟುವ ಪಣ’

ವರದಿ : ಲಿಂಗರಾಜು, ಮಹೇಶ ಪತ್ತಾರ್





ಸಮಾನತೆಗಾಗಿ ಶ್ರಮಿಸಿದ ಶರಣರ ನಾಡಿನಲ್ಲಿ ಸಮಾಗಮಗೊಂಡ ಕಾಯಕ ಜೀವಿಗಳ ಸಮ್ಮೇಳನವು ಇತಿಹಾಸ ನಿರ್ಮಿಸಿತು. 12ನೇ ಶತಮಾನದಲ್ಲಿ ಇಡೀ ಜಗತ್ತಿಗೆ ಸಮಾನತೆಯ ಸಂದೇಶ ನೀಡಿದ ಹಾಗು ಕಾಯಕವೇ ಕೈಲಾಸವೆಂದು ಶ್ರಮ ಸಂಸ್ಕೃತಿಯನ್ನು ಎತ್ತಿಹಿಡಿದ ಶರಣ ಚಳವಳಿಯ ಹರಿಕಾರ ಬಸವಣ್ಣನ ಐಕ್ಯವಾದ ಐತಿಹಾಸಿಕ ನೆಲವಾದ ಬಾಗಲಕೋಟೆ ಜಿಲ್ಲೆ ಕೂಡಲ ಸಂಗಮದಲ್ಲಿ ಸೆಪ್ಟಂಬರ್ 17 ರಿಂದ 19 ರವರೆಗೆ ನಡೆದ ಸಿಐಟಿಯು 13ನೇ ಕರ್ನಾಟಕ ರಾಜ್ಯ ಸಮ್ಮೇಳನವು, ಮುಂಬರುವ ದಿನಗಳಲ್ಲಿ ಶ್ರಮಜೀವಿಗಳ ಮೇಲಾಗುತ್ತಿರುವ ಬರ್ಬರ ಶೋಷಣೆ, ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ರಾಜ್ಯದಲ್ಲಿ ಸಮರಶೀಲ ಹಾಗೂ ಸಂಘರ್ಷಾತ್ಮಕ ಆಂದೋಲನವನ್ನು ನಡೆಸುವ ತೀರ್ಮಾನ ಕೈಗೊಂಡಿದೆ.

ಕೆಂಪಾಯಿತು ಶರಣರ ನಾಡು

ಶನಿವಾರ ಸೆಪ್ಟೆಂಬರ್–17 ರಂದು ಕೆಂಬಾವುಟಗಳು ಮತ್ತು ಕೆಂಪು ಸಮವಸ್ತ್ರಧಾರಿಗಳಿಂದ “ಕೆಂಪಾದವೋ ಎಲ್ಲಾ ಕೆಂಪಾದವೋ.......” ಎನ್ನುವಂತೆ ಇಡೀ ಹಳೇ ಬಾಗಲಕೋಟೆ ನಗರ ಕೆಂಪಲ್ಲಿ ಮಿಂದೆದ್ದಿತು. ಸಿಐಟಿಯು 13ನೇ ರಾಜ್ಯ ಸಮ್ಮೇಳನದ ಅಂಗವಾಗಿ ನಗರದ ರೈಲು ನಿಲ್ದಾಣದಿಂದ ಪ್ರಾರಂಭವಾದ ಸಾವಿರಾರು ಗ್ರಾಮ ಪಂಚಾಯತ, ಅಂಗನವಾಡಿ, ಅಕ್ಷರದಾಸೋಹ, ಹಮಾಲಿ, ಮುನ್ಸಿಫಲ್ ಮುಂತಾದ ಅಸಂಘಟಿತ ಕಾರ್ಮಿಕರು, ರಾಜ್ಯಾದ್ಯಂತ ಆಗಮಿಸಿದ್ದ ಸಮ್ಮೇಳನದ ಪ್ರತಿನಿಧಿಗಳು ಹಾಗೂ ರಾಜ್ಯ, ಜಿಲ್ಲಾ ಮುಖಂಡರನ್ನೊಳಗೊಂಡ ಬೃಹತ್ತ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಆಕರ್ಷಕ 100 ಅಡಿ ಬೃಹತ್ತ ಧ್ವಜವನ್ನು ಹೊತ್ತು, ಡೊಳ್ಳು ಕುಣಿತದ ಜಾನಪದ ಕಲಾತಂಡದೊಂದಿಗೆ ಮುನ್ನಡೆಯಿತು. ಮೆರವಣಿಗೆ ಉದ್ದಕ್ಕೂ ಸರಕಾರಗಳ ನೀತಿಗಳ ವಿರುದ್ದ ಹಾಗೂ ಕಾರ್ಮಿಕರ ಬೇಡಿಕೆಗಳ ಪರ ಘೋಷಣೆಗಳು ಮುಗಿಲು ಮುಟ್ಟಿದ್ದವು. ಸಂಘಪರಿವಾರದ ಗರಡಿ ಮನೆಯಂತಿರುವ ಬಾಗಲಕೋಟೆ ನಗರದಲ್ಲಿ ಕೆಂಬಾವುಟದ ಈ ಮೆರವಣಿಗೆ ಕೆಲವರ ಹುಬ್ಬೇರಿಸುವಂತೆ ಮಾಡಿದ್ದಂತು ಸತ್ಯ. ನಗರದ ಜನತೆ “ಎಲ್ಲಿಂದ ಬಂದರೋ...ಇವರು...” ಎಂಬಂತೆ ಬೀದಿಯ ಬದಿಯಲ್ಲಿ ನಿಂತು ನೋಡುವಂತಾಗಿತ್ತು.

ಹಿರಿಯ ಸಂಗಾತಿಗಳಿಗೆ ಬೀಳ್ಕೊಡಿಗೆ :

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ಹಲವು ವರ್ಷಗಳು ದುಡಿದ ಸಂಗಾತಿ ಬಿ. ಮಾಧವ, ಪ್ಲಾಂಟೇಷನ್ ಕಾರ್ಮಿಕರ ಹಿರಿಯ ಮುಂದಾಳು ವಿ.ಸುಕುಮಾರ್ ಹಾಗೂ ಸಿಐಟಿಯು ರಾಜ್ಯ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ತಿಲಕ್ ಜಟ್ಟಿಗೌಡ, ಜಿ.ರಾಮಕೃಷ್ಣ, ಗೈಬು ಜೈನೇಖಾನ್, ಬಿ.ಎಂ.ಭಟ್ ಹಾಗೂ ರಮಣಿ ಯವರನ್ನು ಸಮ್ಮೇಳನದಲ್ಲಿ ಸ್ಮರಣಿಕೆ ನೀಡಿ ಗೌರವಿಸಿ ಬೀಳ್ಕೊಡಲಾಯಿತು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಅ ಧ್ಯಕ್ಷ ರಾಗಿ ಹಲವು ವರ್ಷಗಳ ದುಡಿದ ಮತ್ತು ಈಗ ಉಪಾಧ್ಯಕ್ಷರಾಗಿರುವ ಸಂಗಾತಿ ವಿ.ಜೆ.ಕೆ.ನಾಯರ್ ಅವರನ್ನು ಸನ್ಮಾನಿಸಲಾಯಿತು.

ನವಉದಾರೀಕರಣ ನೀತಿಗಳನ್ನು ಬೆಂಬಲಿಸುವವರು ಕಾರ್ಮಿಕರ ಶತ್ರುಗಳು

ಬೃಹತ್ ಮೆರವಣಿಗೆ ಕಾಂ॥ ಡಿ.ಎಂ. ಕಲಾಸಿ ನಗರದ ಕಾಂ॥ ಎಸ್.ಪ್ರಸನ್ನಕುಮಾರ ವೇದಿಕೆಯ ಮುಂದೆ (ನಗರದ ಪೋಲೀಸ್ ಪೆರೆಡ ಮೈದಾನದಲ್ಲಿ) ಸಮಾವೇಶಗೊಂಡ ನಂತರ ಬಹಿರಂಗ ಸಭೆ ನಡೆಸಲಾಯಿತು. ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯರಾದ ಕಾಂ॥ ತಪನ್ ಸೇನ್ “ ದೇಶದ ಜನತೆಯನ್ನು ತೀವ್ರ ಸಂಕಷ್ಟಕ್ಕೀಡು ಮಾಡಿರುವ ರೈತ ಕಾರ್ಮಿಕ ವಿರೋಧಿ ನವಉದಾರವಾದಿ ನೀತಿಗಳನ್ನು ಬೆಂಬಲಿಸುವ ಯಾವುದೇ ಸರಕಾರಗಳು, ಪಕ್ಷಗಳು, ಪಂಗಡಗಳು, ಬಾವುಟಗಳು ಶ್ರಮಿಕರ ಶತ್ರುಗಳಾಗಿವೆ. ಬಹುತೇಕ ಮಹಿಳೆಯರಿರುವ ಸ್ಕೀಂ ಕಾರ್ಯಕರ್ತರನ್ನು ಕಾರ್ಮಿಕರೆಂದು ಪರಿಗಣಿಸಲು, ಅಸಂಘಟಿತರಿಗೆ ಸಾಮಾಜಿಕ ಭದ್ರತೆಯನ್ನು ನೀಡಲು, ಗುತ್ತಿಗೆ ಕಾರ್ಮಿಕರ ಶೋಷಣೆ ಕೊನೆಗಾಣಿಸಲು ಕೇಂದ್ರ ರಾಜ್ಯ ಸರಕಾರಗಳು ಸಿದ್ದವಿಲ್ಲ ಈ ದುರಹಂಕಾರವನ್ನು ನಾವು ಸಹಿಸಲು ಸಾಧ್ಯವಿಲ್ಲ. ನೆಲ, ಜಲ, ಭಾಷೆ, ಕೋಮಿನ ಹೆಸರಿನಲ್ಲಿ ದುಡಿಯುವ ಜನತೆಯ ಒಗ್ಗಟ್ಟನ್ನು ಮುರಿಯುವ ಕುತಂತ್ರ ನಡೆಸುವ ಮತ್ತು ರೈತ–ಕಾರ್ಮಿಕ, ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ರಾಜ್ಯ ಸರಕಾರಗಳು ದೇಶ ವಿರೋಧಿಗಳೇ ಆಗಿವೆ. ಈ ಸರಕಾರಗಳಿಗೆ ಕೆಂಬಾವುಟದಿಂದ ಮಾತ್ರ ತಕ್ಕ ಉತ್ತರ ನೀಡಲು ಸಾಧ್ಯ ಎಂದರಲ್ಲದೇ ಈ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕ ಸಂಘಟನೆಗಳು ನಡೆಸುತ್ತಿರುವ ಜಂಟಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ಮುಂದಾಗಬೇಕು” ಎಂದರು.

ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿಗಳಾದವರು ರಾಜ್ಯ ರಾಜ್ಯಗಳ ಮಧ್ಯ ಬಿಕ್ಕಟ್ಟು ಸೃಷ್ಟಿಯಾದಾಗ ಉಭಯ ರಾಜ್ಯಗಳ ಮಧ್ಯ ಸಮನ್ವಯತೆ ಸಾಧಿಸಿ ರಾಜಿ ಸಂಧಾನದ ಸಲಹೆಯನ್ನು ನೀಡಿ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು. ಅದು ಅವರ ಕರ್ತವ್ಯ ಕೂಡಾ. ಕಾವೇರಿ, ಮಹದಾಯಿ ನೀರು ಹಂಚಿಕೆ ವಿವಾದಗಳ ಬಿಕ್ಕಟ್ಟನ್ನು ಪರಿಹರಿಸಲು ಮುಂದಾಗದೇ ಮೌನವಹಿಸಿರುವುದು, ಎರಡು ರಾಜ್ಯಗಳ ಜನತೆಯ ಮಧ್ಯೆ ಉದ್ಭವಿಸಿರುವ ಮೈನಸ್ಸಿಗೆ, ಕಿತ್ತಾಟಕ್ಕೆ ಪ್ರಧಾನಿ ಮೋದಿ ತಮ್ಮ ಕರ್ತವ್ಯ ನಿರ್ವಹಿಸದೇ ನುಣಚಿ–ಕೊಂಡಿದ್ದೇ ಕಾರಣವಾಗಿದೆ. ದೇಶ ಪ್ರೇಮದ ಬಗ್ಗೆ

ಪುಟ 14 ಕ್ಕೆ

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

- ರೈತರು ಮತ್ತು ಕೃಷಿಕೂಲಿಕಾರರು ನಡೆಸುತ್ತಿರುವ ಭೂಮಿ ಹಕ್ಕಿಗಾಗಿ ನವೆಂಬರ್ ನಲ್ಲಿ ನಡೆಸುವ ಜೈಲ್‌ಭರೋ ಹೋರಾಟವನ್ನು ಬೆಂಬಲಿಸಿ ಯಶಸ್ವಿಗೊಳಿಸಲು
- ಎಲ್ಲಾ ದುಡಿಯುವ ಜನತೆಗೆ ವಸತಿ ಹಾಗು ಭೂಮಿಯ ಹಕ್ಕಿಗಾಗಿ ಒತ್ತಾಯ,
- ಕೋಮು ಹಿಂಸಾಚಾರ ಖಂಡಿಸಿ,
- ದುಡಿಯುವ ಜನರ ಐಕ್ಯತೆಯನ್ನು ಸಂರಕ್ಷಣೆಗೆ,
- ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ವಿರೋಧಿಸಿ,
- ಜಾತಿ ಅಸ್ಪೃಷ್ಯತೆ, ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ,
- ಸಮಾನ ಕನಿಷ್ಟ ವೇತನಕ್ಕಾಗಿ,
- ಅಸಂಘಟಿತ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ರೂಪಿಸಿರುವ ಭವಿಷ್ಯನಿಧಿ ಕರಡನ್ನು ವಿಧಾನ ಸಭೆಯಲ್ಲಿ ಮಂಡಿಸಲು ಆಗ್ರಹಿಸಿ,
- ಕಾರ್ಮಿಕ ಸಂಘದ ಮಾನ್ಯತೆಗಾಗಿ ಶಾಸನ ರೂಪಿಸಲು ಒತ್ತಾಯಿಸಿ
- ಖಾಯಮೇತರ ಕಾರ್ಮಿಕರನ್ನು ಖಾಯಂ ಮಾಡಲು ಶಾಸನಕ್ಕಾಗಿ



ಎಸ್. ವರಲಕ್ಷ್ಮಿ



ಎಂ.ಎಸ್.ಮೀನಾಕ್ಷಿ ಸುಂದರಂ



ಪಿ.ಕೆ. ಪರಮೇಶ್ವರ

ನೂತನ ರಾಜ್ಯ ಸಮಿತಿ

ನೂತನ ಸಮ್ಮೇಳನವು ಮುಂದಿನ ಮೂರು ವರ್ಷಗಳಿಗೆ ನೂತನ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆಮಾಡಿತು. 35 ಜನ ಪದಾಧಿಕಾರಿಗಳು ಸೇರಿದಂತೆ ಒಟ್ಟು 109 ಸದಸ್ಯರು ರಾಜ್ಯ ಸಮಿತಿಗೆ ಆಯ್ಕೆಯಾದರು.

ನೂತನ ರಾಜ್ಯ ಪದಾಧಿಕಾರಿಗಳು :

ಅಧ್ಯಕ್ಷರು : ಎಸ್. ವರಲಕ್ಷ್ಮಿ

ಉಪಾಧ್ಯಕ್ಷರು : ವಿಜೆಕೆ ನಾಯರ್, ಕೆ.ಶಂಕರ, ಆರ್.ಶ್ರೀನಿವಾಸ್, ಜೆ.ಬಾಲಕೃಷ್ಣ ಶೆಟ್ಟಿ (ಮಂಗಳೂರು), ಎನ್.ವೀರಸ್ವಾಮಿ, ಜಿ.ಜಯರಾಮ್, ಟಿ.ಲೀಲಾವತಿ, ವಸಂತ ಆಚಾರಿ, ಶಾಂತ ಎಸ್.ಘಂಟೆ, ಹರೀಶ್ ನಾಯಕ, ಹೆಚ್.ಎನ್.ಗೋಪಾಲಗೌಡ, ಕೆ.ಪ್ರಕಾಶ್, ಆರ್. ಎಸ್.ಬಸವರಾಜ (ಚಿಕ್ಕಬಳ್ಳಾಪುರಕ್ಕೆ ಒಂದು ಸ್ಥಾನ)

ಪ್ರಧಾನ ಕಾರ್ಯದರ್ಶಿ : ಎಂ.ಎಸ್.ಮೀನಾಕ್ಷಿ ಸುಂದರಂ

ಕಾರ್ಯದರ್ಶಿಗಳು : ಸೈಯದ್ ಮುಜೀಬ್, ಬಾಲಕೃಷ್ಣ ಶೆಟ್ಟಿ (ಉಡುಪಿ), ಕೆ.ಎನ್.ಉಮೇಶ್, ಕೆ.ಮಹಾಂತೇಶ್, ಎಂ.ಬಿ.ನಾಡಗೌಡ, ಯಮುನ ಗಾಂವ್ಕರ್, ಹೆಚ್.ಎಸ್. ಸುನಂದ, ಮಹೇಶ್ ಪತ್ತಾರ್, ಮಾಲಿನಿ ಮೇಸ್ತ, ಎನ್.ಪ್ರತಾಪಸಿಂಹ, ಸುನಿಲ್‌ಕುಮಾರ ಬಜಾಲ್, ಧರ್ಮೇಶ್, ಬಿ.ಉಮೇಶ್, ಸಿ.ಆರ್.ಶಾನಬಾಗ್, ಬಿ.ವಿ.ರಾಘವೇಂದ್ರ, ಬಿ.ಎಸ್.ನಾಗರತ್ನ, ಪದ್ಮಾವತಿ ಶೆಟ್ಟಿ, ನಿರುಪಾದಿ,

ಖಜಾಂಚಿ : ಪಿ.ಕೆ. ಪರಮೇಶ್ವರ



ಟಿ.ಕೆ.ಎಸ್.ಕುಟ್ಟಿ, ಆರ್.ಶ್ರೀನಿವಾಸ್ ಮತ್ತು ತಪನ್ ಸೇನ್

ವರದಿ : ವಿನೋದ ಶ್ರೀರಾಮಪುರ

ಕಾ. ತಪನ್ ಸೇನ್ ಸಮಾರೋಪ ಮಾತುಗಳು
"ರಕ್ಷಣಾತ್ಮಕ ಮಾತ್ರವಲ್ಲ ಆಕ್ರಮಾಣತ್ಮಕ ಹೋರಾಟಗಳೂ ನಡೆಯಬೇಕು'

ಜನತೆಯ ಪ್ರತಿರೋಧವನ್ನು ಸಂಘಟನಾತ್ಮಕವಾಗಿ, ರಾಜಕೀಯವಾಗಿ ರೂಪಿಸಲು ಸಾಧ್ಯವಾಗಿಲ್ಲ. ಸಂಘಟನೆಯ ಅವಕಾಶಗಳನ್ನು ನಾವು ಬಳಸಿಕೊಳ್ಳುತ್ತಿಲ್ಲ. ಎಲ್ಲಾ ಹಂತದ ಸಮಿತಿಗಳು ಇವೆ. ಪ್ರತಿ ಹಂತದ ಸಮಿತಿಗಳು ಕೆಲಸ ಮಾಡಬೇಕು. ಸದಸ್ಯರನ್ನು ಮುಖಂಡರಾಗಿ ಮಾಡಬೇಕಿದೆ. ರಾಜ್ಯ ಸಮಿತಿಯ ಮಾರ್ಗದರ್ಶನದ ಜೊತೆಗೆ ಸ್ವ ಯಂ ಮುತುವರ್ಜಿಯಿಂದ ಸಂಘಟನೆಯನ್ನು ಬೆಳೆಸಬೇಕಿದೆ.

ಸಮ್ಮೇಳನದ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳಿಗೂ, ವೇದಿಕೆಯಲ್ಲಿ ವಿವಿಧ ಜಿಲ್ಲೆಗಳಿಂದ ಮಾತನಾಡಿದ 60 ಜನರಿಗೂ ಅಭಿನಂದನೆಗಳು. ಎಲ್ಲಾ ಸಂಗಾತಿಗಳಿಗೂ ಸಿಐಟಿಯುವನ್ನು ಬಲಿಷ್ಠವಾಗಿ ಮುನ್ನಡೆಸುವ ಬಗ್ಗೆ ಆತ್ಮವಿಶ್ವಾಸದಿಂದ ಮಾತನಾಡಿದ್ದಾರೆ. ಅಂತರಾಷ್ಟ್ರೀಯವಾಗಿ ಆಗುತ್ತಿರುವ ಬದಲಾವಣೆಗಳು ಮತ್ತು ನವ ಉದಾರವಾದಿ ನೀತಿಗಳು ಜನತೆಯ ಬದುಕಿನ ಮೇಲೆ ತನ್ನದೇ ಆದ ರೀತಿಯಲ್ಲಿ ಪರಿಣಾಮಗಳು ಬೀರುತ್ತಿವೆ. ಈ ಬಗ್ಗೆ ಇಡೀ ಸಮಾಜಕ್ಕೆ ತಿಳುವಳಿಕೆ ನೀಡುವ ಕೆಲಸ ನಾವು ಮಾಡಬೇಕಿದೆ. ಜಾಗತಿಕ ಬಿಕ್ಕಟ್ಟು ಸಮಾಜವನ್ನು ಸಂಕಷ್ಟಕ್ಕೆ ದೂಡುತ್ತಿದೆ.

ಜನತೆಗೆ ನಾವು ಸರ್ಕಾರ ಜನ ವಿರೋಧಿ ನೀತಿಗಳ ಜೊತೆಗೆ ಅದರ ಹಿಂದಿನ ರಾಜಕೀಯದ ಬಗೆಗೂ ನಾವು ತಿಳಿಸಬೇಕು. ಸ್ಥಳೀಯ ಸಮಸ್ಯೆಗಳನ್ನು ಗುರುತಿಸಬೇಕು, ಜೊತೆಗೆ ಆಳುವ ವರ್ಗದ ನೀತಿಗಳ ಬಗ್ಗೆಯೂ ತಿಳಿಸಬೇಕಿದೆ. ಸ್ಥಳೀಯ ಹೋರಾಟಗಳಲ್ಲಿ ನಮ್ಮ ಮಧ್ಯಪ್ರವೇಶ ಸೀಮಿತವಾಗುತ್ತಿದೆ. ಸೀಮಿತತೆಯನ್ನು ಹೋಗಲಾಡಿಸಿ ಸಮರ್ಥವಾಗಿ ನಾವು ಮುನ್ನುಗ್ಗಬೇಕು. ಹೋರಾಟವನ್ನು ತೀವ್ರಗೊಳಿಸಬೇಕು.

ಆಳುವ ವರ್ಗಗಳು ದೇಶದ ಸಾಮಾನ್ಯ ಜನರನ್ನು ವಿಭಜನೆ ಮಾಡುತ್ತಿವೆ. ಅವು ತಮ್ಮ ವರ್ಗ ಮತ್ತು ರಾಜಕೀಯ ಹಿತಾಸಕ್ತಿ ಆಧಾರದಲ್ಲಿ ಕೆಲಸ ಮಾಡುತ್ತಿವೆ. ಜನತೆಯ ಮಧ್ಯೆ ನಾವು ಪ್ರಜ್ಞಾಪೂರ್ವಕವಾಗಿ ಆಳುವ ವರ್ಗದ ನೀತಿಗಳನ್ನು ತಿಳಿಸಬೇಕಿದೆ. ಕಾರ್ಮಿಕ ವರ್ಗ ಹಿತಾಸಕ್ತಿಗಳ ರಕ್ಷಣಾತ್ಮಕ ಹೋರಾಟದ ಜೊತೆ ಜೊತೆಗೆ ಆಳುವ ವರ್ಗಗಳ ವರ್ಗ ಹಿತಾಸಕ್ತಿಗಳ ಮೇಲೆ ಆಕ್ರಾಮಕ ರೂಪದ ತೀವ್ರ ರೀತಿಯ ಹೋರಾಟಗಳನ್ನು ನಾವು ಮಾಡಬೇಕು.

14ನೇ ಸಮ್ಮೇಳನದಲ್ಲಿ ನಾವು ತಲುಪದೇ ಇರುವ ಕಾರ್ಮಿಕರನ್ನು ನಾವು ತಲುಪಬೇಕೆಂದು ಹೇಳಲಾಗಿತ್ತು. ವರ್ಗ ಬಲಾ ಬಲಗಳು ಬದಲಾಗುತ್ತಿವೆ. ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಆಗಿನ ಸಮ್ಮೇಳನದಲ್ಲಿ ತಿಳಿಸಲಾಗಿತ್ತು. ನಾವು ಅನೇಕ ಹೋರಾಟಗಳನ್ನು ಮಾಡುತ್ತಿದ್ದೇವೆ. ಅಂಗನವಾಡಿ ಸೇರಿದಂತೆ ಸಂಘಟಿತ–ಅಸಂಘಟಿತ ಕಾರ್ಮಿಕರ ಹೋರಾಟಗಳು ಮಾಡಿ ಗೆಲುವು ಸಹ ಪಡೆಯಲಾಗುತ್ತಿದೆ.

ರಾಜ್ಯದಲ್ಲಿ ಸಂಘಟನೆಗೆ 2 ಲಕ್ಷ ಸದಸ್ಯತ್ವವನ್ನು ಇಟ್ಟುಕೊಂಡು ಸೆಪ್ಟಂಬರ್ 2ರಂದು ಕರ್ನಾಟಕದಲ್ಲಿ ಅತ್ಯಂತ ಯಶಸ್ವಿ ಮುಷ್ಕರವನ್ನು ಮಾಡಲಾಗಿದೆ. ಯಾವ ನೀತಿಗಳ ವಿರುದ್ಧ ನಾವು ಹೋರಾಟಗಳನ್ನು ಮಾಡಲಾಗುತ್ತದೋ ಆ ನೀತಿಗಳನ್ನು ಜಾರಿ ಮಾಡುವ ಕಾಂಗ್ರೆಸ್ ಬಿಜೆಪಿ ಪಕ್ಷಗಳು ಲಾಭ ಮಾಡಿಕೊಳ್ಳುತ್ತಿವೆ. ಬೇಡಿಕೆಗಳ ಜೊತೆಯಲ್ಲೇ ನಾವು ನೀತಿಗಳ ವಿರುದ್ಧವೂ ಹೋರಾಟ ಮಾಡುತ್ತೇವೆ. ಈ ಎರಡೂ ಪಕ್ಷಗಳ ನೀತಿಗಳ ಬಗ್ಗೆ ಜನತೆಯಲ್ಲಿ ನಾವು ಹೆಚ್ಚಾಗಿ ಹೇಳಲಾಗುತ್ತಿಲ್ಲ. ಕೆಳ ಹಂತದ ಸಾಮಾನ್ಯ ಜನತೆಗೆ ಇದನ್ನು ತಿಳಿಸುವ ಬಗ್ಗೆ ಸಮ್ಮೇಳನ ಕರೆ ನೀಡಿತ್ತು. ಅವನ್ನು ಮಾಡಬೇಕಾಗಿದೆ.



ಸಂಘಟನೆಯ ಸಂರಕ್ಷಣೆ ಪ್ರಶ್ನೆ ಈಗ ಎದುರಾಗಿದೆ. ಕೆಳ ಹಂತದ ಸದಸ್ಯರನ್ನು ನಾವು ಸದಸ್ಯರಾಗಿ ಅಲ್ಲ ಮುಖಂಡರಾಗಿ ಕೆಲಸ ಮಾಡಿಸಬೇಕು. ಚರ್ಚೆಯ ಅಂಶಗಳನ್ನು ನಾವು ಕಾರ್ಯರೂಪಕ್ಕೆ ತರಬೇಕಿದೆ. ಈಗಿನ ಆಳುವ ವರ್ಗದ ದಾಳಿಗಳು ಮೂರು ರೀತಿಯಲ್ಲಿ ಆಗುತ್ತಿವೆ. ಆರ್ಥಿಕ, ಸಾಮಾಜಿಕ, ರಾಜಕೀಯ ದಾಳಿಗಳು ನಡೆಯುತ್ತಿವೆ. ನಮ್ಮ ಖಾಸಗೀ ಜೀವನದಲ್ಲೂ ಮಧ್ಯೆ ಪ್ರವೇಶ ಪಡೆಯುತ್ತಿವೆ. ಆಹಾರದಲ್ಲಿ, ಉಡುಗೆ ತೊಡುಗೆಯಲ್ಲಿ, ಸಾಮಾಜಿಕ ಸಂಬಂಧಗಳಲ್ಲಿ ಎಲ್ಲ ರೀತಿಯಲ್ಲೂ ಮಧ್ಯಪ್ರವೇಶ ಮಾಡುತ್ತಿವೆ.

ಅವರು ಯುವಜನತೆಯನ್ನು ಒಡೆಯುತ್ತಿದ್ದಾರೆ. ಇತ್ತೀಚಿನ ಯುರೋಪ್ ಒಕ್ಕೂಟದಿಂದ ಬ್ರಿಟನ್ ಹೊರ ಬರಲು ಪ್ರಮುಖವಾಗಿ ವಲಸೆ ಪ್ರಶ್ನೆಯನ್ನು ಗುರಿಯಾಗಿಸಿಕೊಂಡಿದ್ದರು. ನವ ಉದಾರವಾದಿಯೊಳಗಿನ ಬಿಕ್ಕಟ್ಟಿನಿಂದ ಹೊರಬರಲು ಆಳುವ ವರ್ಗಗಳು ಹೊಸ ಹೊಸ ತಂತ್ರಗಳನ್ನು ಬಳಸಿಕೊಳ್ಳುತ್ತಿದೆ. ಅಂತಹ ಶಕ್ತಿಗಳ ಜೊತೆ ಗುರುತಿಸಿಕೊಳ್ಳಬಾರದು, ಕೆಲಸದ ವಿಧಾನದಲ್ಲಿ ನಾವು ಬಹಳಷ್ಟು ಬದಲಾವಣೆ ಮಾಡಿಕೊಳ್ಳಬೇಕಿದೆ. ನವ ಉದಾರವಾದಿ ನೀತಿ ಮತ್ತು ಸ್ಥಳೀಯ ಸಮಸ್ಯೆಗಳ ಬಗ್ಗೆಯೂ ಅವುಗಳ ಹಿಂದಿನ ರಾಜಕೀಯ ಹಿತಾಸಕ್ತಿ ಬಗ್ಗೆಯೂ ನಾವು ಜನತೆಯಲ್ಲಿ ತಿಳಿಸಬೇಕು.

ಈ ಬಾರಿ ಸೆಪ್ಟಂಬರ್ 2ರ ಮುಷ್ಕರದಲ್ಲಿ ಸರಕಾರ ಕಾರ್ಮಿಕ ವಿರೋಧಿ, ಜನ ವಿರೋಧಿ ಮಾತ್ರವಲ್ಲ ಜೊತೆಗೆ ದೇಶ ವಿರೋಧಿ ಸಹ ಎಂದು ಮೊದಲ ಬಾರಿಗೆ ಸೇರಿಸಲಾಯಿತು. ಅಂದ–ರೆ ಇಂದು ಆಳುವ ವರ್ಗಗಳು ದೇಶ ವಿರೋಧಿ ಕೆಲಸಗಳನ್ನು ಮಾಡುತ್ತಿವೆ. ಖಾಸಗೀಕರಣದ ನೀತಿಗಳು ಹೆಚ್ಚಾಗುತ್ತಿವೆ. ಹೆಚ್.ಎ.ಎಲ್. ಮತ್ತು ಬಿ.ಇ.ಎಲ್. ನಂತಹ ಸಾರ್ವಜನಿಕ ರಕ್ಷಣಾ ಕ್ಷೇತ್ರಗಳನ್ನು ಖಾಸಗೀಕರಣದ ಮೂಲಕ ಮಾರಾಟ ಮಾಡಲಾಗುತ್ತಿದೆ. ಅಮೇರಿಕಾದೊಂದಿಗಿನ ಒಪ್ಪಂದಗಳ ಮೂಲಕ ಉತ್ಪಾದನೆಯನ್ನು ಕಡಿಮೆ ಮಾಡಲಾಗುತ್ತಿದೆ. ಈಗ ಇಲ್ಲಿ ಕೇವಲ ಜೋಡಣೆ–ಯ ಕೆಲಸಗಳು ನಡೆಯುತ್ತಿವೆ. ರಿಲಾಯನ್ಸ್ ನಂತಹ ಖಾಸಗೀ ಸಂಸ್ಥೆಗಳು ಯುದ್ಧ ಹಡಗುಗಳನ್ನು ತಯಾರಿಸಲು ಹೊರಟಿವೆ. ವಿದೇಶಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಆಧುನಿಕ ತಂತ್ರಜ್ಞಾನವಿದೆ. ಆ ಮೂಲಕ ಲಾಭ ಮಾಡಿಕೊಳ್ಳಲು ಹೊರಟಿದ್ದಾರೆ.

ವಿದೇಶಿ ನೇರ ಬಂಡವಾಳವು ದೇಶಕ್ಕೆ ಹರಿದು ಬರುವುದಿಲ್ಲ. ಬದಲಾಗಿ ದೇಶದ ನಮ್ಮ ಹಣವನ್ನೇ ವಿದೇಶಿ ಎಂಬ ಹೆಸರಿನಲ್ಲಿ ತೊಡಗಿಸಲಾಗುತ್ತದೆ. ದೇಶದ ಹಣಕಾಸು ಬಂಡವಾಳ ಅಂತರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತೆರೆದುಕೊಳ್ಳುತ್ತಿದೆ. ಬ್ಯಾಂಕುಗಳನ್ನು ಖಾಸಗೀಕರಿಸಲು ಮುಂದಾಗುತ್ತಿದ್ದಾರೆ.

ರಾಷ್ಟ್ರೀಯತೆಯ ಹೆಸರಿನಲ್ಲಿ ನಮ್ಮನ್ನು ದೇಶದ್ರೋಹಿಗಳಾಗಿ ಬಿಂಬಿಸಲಾಗುತ್ತಿದೆ. ಕನ್ನಯ್ಯ ಕುಮಾರ್ ಹೇಳಿಕೆ ಹಿನ್ನೆಲೆಯಲ್ಲಿ ನಮ್ಮನ್ನು ಗುರಿ ಮಾಡಲಾಗುತ್ತಿದೆ. 2013 ರಲ್ಲಿ ನಡೆದ 14ನೇ ಸಮ್ಮೇಳನದಲ್ಲಿ ಈ ದೇಶದ ನೀತಿಗಳು ಬಲ ತಿರುವು ಪಡೆಯುತ್ತಿದ್ದು ಇವು ಸಾಮ್ರಾಜ್ಯಶಾಹಿಯ ನೀತಿಗಳು ಎಂದು ತಿಳಿಸಲಾಗಿತ್ತು. 2010ರಲ್ಲಿ ನಡೆದ ಮುಷ್ಕರದಲ್ಲಿ ಮೊದಲ ಬಾರಿಗೆ ಐಎನ್‌ಟಿಯುಸಿ, ಬಿಎಂಎಸ್ ಸಂಘಟನೆಗಳು ಸಹ ಮುಷ್ಕರದಲ್ಲಿ ಭಾಗವಹಿಸಿದ್ದವು. 2013ರಲ್ಲಿ ಎರಡು ದಿನದ ಮುಷ್ಕರವನ್ನು ನಡೆಸಲಾಗಿದೆ. ಜನತೆ ಮೇಲೆ ದುಷ್ಪರಿಣಾಮಗಳು ಮಾತ್ರ ಹೆಚ್ಚಾಗುತ್ತಿದ್ದವು. ಕಾಂಗ್ರೆಸ್ ಅದಕ್ಕೆ ಸರಿಯಾದ ಬೆಲೆ ತೆತ್ತಿದೆ. ಮನಮೋಹನ್ ಸಿಂಗ್ ನಂತರ ಬಂದ ನರೇಂದ್ರ ಮೋದಿ ಸರ್ಕಾರ ಬಂದಿದೆ. ಆದರೆ ನರೇಂದ್ರಮೋದಿ ಸರ್ಕಾರ ಇನ್ನೂ ತೀವ್ರ ರೀತಿಯಲ್ಲಿ ದುಡಿಯುವ ಜನರ ಮೇಲೆ ದಾಳಿಗಳನ್ನು ಮಾಡುತ್ತಿದೆ.

ಜನತೆಯ ಪ್ರತಿರೋಧವನ್ನು ಸಂಘಟನಾತ್ಮಕವಾಗಿ, ರಾಜಕೀಯವಾಗಿ ರೂಪಿಸಲು ಸಾಧ್ಯವಾಗಿಲ್ಲ. ಸಂಘಟನೆಯ ಅವಕಾಶಗಳನ್ನು ನಾವು ಬಳಸಿಕೊಳ್ಳುತ್ತಿಲ್ಲ. ಎಲ್ಲಾ ಹಂತದ ಸಮಿತಿಗಳು ಇವೆ. ಪ್ರತಿ ಹಂತದ ಸಮಿತಿಗಳು ಕೆಲಸ ಮಾಡಬೇಕು. ಸದಸ್ಯರನ್ನು ಮುಖಂಡರಾಗಿ ಮಾಡಬೇಕಿದೆ. ರಾಜ್ಯ ಸಮಿತಿಯ ಮಾರ್ಗದರ್ಶನದ ಜೊತೆಗೆ ಸ್ವಯಂ ಮುತುವರ್ಜಿಯಿಂದ ಸಂಘಟನೆಯನ್ನು ಬೆಳೆಸಬೇಕಿದೆ.

ಈಗಿನ ಪ್ರತಿ ಸ್ಥಳೀಯ ಸಮಸ್ಯೆಗಳು ನವ ಉದಾರವಾದ ನೀತಿಗಳಿಗೆ ಸಂಬಂಧಿಸಿದ್ದು. ನಮ್ಮ ನಿಜವಾದ ಎದುರಾಳಿ ನವ ಉದಾರವಾದ ನೀತಿಗಳು. ಕಾರ್ಮಿಕರ ಯಶಸ್ವಿ ಮುಷ್ಕರಗಳು ಸಂಘಟನೆಯ ಸದಸ್ಯತ್ವವಾಗಿ ಮಾರ್ಪಟ್ಟಿಲ್ಲ. ಸಿಐಟಿಯು ಸದಸ್ಯತ್ವವನ್ನು ಹೆಚ್ಚು ಮಾಡಬೇಕು. ಚಟುವಟಿಕೆ, ಸದಸ್ಯತ್ವ, ಹೋರಾಟಗಳನ್ನು ದೈನಂದಿನ ಕೆಲಸಗಳಾಗಿ ಮಾಡಬೇಕಿದೆ.

ಎಲ್ಲಾ ಹಂತದ ಸಮಿತಿಗಳಲ್ಲಿ ನಾವು ಹೋರಾಟಗಳ ಸಂದರ್ಭದಲ್ಲಿ ಹೊಸಬರನ್ನು ತರಲು ಗಮನ ಕೇಂದ್ರೀಕರಿಸಬೇಕು. ಅವರ ಪ್ರಶ್ನೆಗಳ ಹೋರಾಟದ ಜೊತೆಗೆ ಸಂಘಟನೆಯ ಸದಸ್ಯತ್ವವನ್ನು ಮಾಡಿಸಬೇಕು. ನಾವೆಲ್ಲರೂ ಸಾಮೂಹಿಕ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ಕಾರ್ಮಿಕರ ನಾಯಕರೊಂದಿಗೆ ಜನತೆಯ ರಾಜಕೀಯ ನಾಯಕರಾಗಿಯೂ ಬದಲಾಗಬೇಕು.

ಶೇ.40ರಷ್ಟು ಜನ ಕಟ್ಟಡ ಕಾರ್ಮಿಕರ ಬಗ್ಗೆ ಮಾತನಾಡಿದ್ದಾರೆ. ನಾವು ದೊಡ್ಡ ಪ್ರಮಾಣದಲ್ಲಿ ಕಟ್ಟಡ ಕಾರ್ಮಿಕರನ್ನು ಸಂಘಟಿಸಲು ಆದ್ಯತೆ–ಯಾಗಿ ತೆಗೆದುಕೊಳ್ಳಬೇಕಿದೆ. ಸಂಘಟನಾ ಕೆಲಸದ ಮಿತಿಗಳನ್ನು ನಾವು ಮೆಟ್ಟಿ ನಿಲ್ಲಬೇಕಿದೆ. ಶಿಕ್ಷಣಕ್ಕಾಗಿ ಅಖಿಲ ಭಾರತ ಮಟ್ಟದಲ್ಲಿ ಪಿ.ರಾಮಮೂರ್ತಿ ಭವನ ಅತೀ ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ನವ ಉದಾರವಾದಿ ಅಭಿವೃದ್ಧಿ ಎಂದರೆ ಕರ್ನಾಟಕ ಎಂದು ಬಿಂಬಿಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು ಕಾರ್ಮಿಕರಲ್ಲಿ ಮೂರನೇ ಒಂದು ಭಾಗದಷ್ಟು ಕಾರ್ಮಿಕರಿಗೆ ಇ.ಎಸ್.ಐ. ಸೌಲಭ್ಯ ಇಲ್ಲವಾಗಿದೆ. ಖಾಸಗಿ ವಲಯದಲ್ಲೂ ಮೀಸಲಾತಿಗಾಗಿ ನಾವು ಹೋರಾಟಗಳನ್ನು ಅಣಿನೆರೆಸಬೇಕು. ಆರ್ಥಿಕ ಪ್ರಶ್ನೆಗಳ ಜೊತೆಗೆ ಜನತೆಯ ಸಾಮಾಜಿಕ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕಿದೆ.

ಹಲವು ವಿಧಾನಗಳಲ್ಲಿ ಎಲ್ಲಾ ತರದ ತಯಾರಿಗಳೊಂದಿಗೆ ಜನತೆಯ ನಡುವೆ ಪ್ರಚಾರ ಮಾಡಬೇಕಿದೆ. ಆಳುವ ವರ್ಗದ ನೀತಿಗಳನ್ನು ಪ್ರತಿರೋಧಿಸಲು ಸಾಕಷ್ಟು ತಯಾರಿಗಳನ್ನು, ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ಸರಿಯಾದ ವಿಚಾರಗಳನ್ನು ನಾವು ಜನತೆಗೆ ತಿಳಿಸಬೇಕು. ಬೌದ್ಧಿಕವಾಗಿಯೂ ನಾವು ಬೆಳವಣಿಗೆಯಾಗಬೇಕಿದೆ. ಬಲಪಂಥೀಯರನ್ನು ಎದುರಿಸಲು ಪ್ರಚಾರಗಳನ್ನು, ಹೋರಾಟಗಳನ್ನು ಸಮರ್ಥವಾಗಿ, ಯೋಜನಾಬದ್ಧವಾಗಿ ರೂಪಿಸಬೇಕಿದೆ. ವರ್ಗ ಸಂಘಟನೆಯಾಗಿ ನಾವು ಕೆಲಸ ಮಾಡಬೇಕು.





ನವೋದ್ಯಮದ ರಾಜಧಾನಿ....................

ಪುಟ 3 ರಿಂದ

ಒಟ್ಟು 23.85 ಉದ್ಯೋಗಿಗಳಿದ್ದು, ಸಾರ್ವಜನಿಕ ಉದ್ದಿಮೆಗಳಲ್ಲಿನ ಉದ್ಯೋಗಗಳು ಹೆಚ್ಚಿರುತ್ತಿದ್ದ ಇದುವರೆಗಿನ ಬೆಳವಣಿಗೆಗೆ ವ್ಯತಿರಿಕ್ತ ಬೆಳವಣಿಗೆಯನ್ನು ಕಾಣಬಹುದಾಗಿದೆ. ಇದರಲ್ಲಿ ರಾಜ್ಯದಲ್ಲಿನ 15,903 ನೊಂದಾಯಿತ ಕಾರ್ಖಾನೆಗಳಲ್ಲಿ 17.53 ಲಕ್ಷ, 28743 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 1.28 ಲಕ್ಷ ಕಾರ್ಮಿಕರು, 4.80 ಲಕ್ಷ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ 27 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿರುವ ವಾಸ್ತವಿಕ ಅಂಶಗಳನ್ನು ಸಮ್ಮೇಳನ ಗುರುತಿಸಿದೆ.

ಈ ಎಲ್ಲಾ ಅಂಶಗಳು ತೋರುವ ಪ್ರಧಾನ ಪ್ರವೃತ್ತಿಯೆಂದರೆ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದ್ದು, ಪ್ರಮುಖವಾಗಿ ಸೇವಾ ವಲಯದಲ್ಲಿನ ಕಾರ್ಮಿಕರನ್ನು ಸಂಘಟಿಸುವ ಕಡೆಗೆ ಗಮನ ಹರಿಸಬೇಕೆಂಬುದನ್ನು ತೋರುತ್ತದೆ.

ಮೌಲ್ಯವರ್ದನೆಯಲ್ಲಿ ಲಾಭದ ಪಾಲು ಹೆಚ್ಚಳ–ವೇತನದ ಪಾಲು ಇಳಿಕೆ :

ಇದೇ ವೇಳೆ ರಾಜ್ಯದಲ್ಲಿನ ಒಟ್ಟು ಕಾರ್ಖಾನೆಗಳಲ್ಲಿನ 2009–10 ರಿಂದ 2012–13 ರವರೆಗಿನ ನಾಲ್ಕು ವರ್ಷಗಳ ಒಟ್ಟು ರೂ.2,34 ಲಕ್ಷ ಕೋಟಿ ರೂಗಳ ಮೌಲ್ಯವರ್ಧನೆಯಲ್ಲಿ ಲಾಭದ (ಅಂದರೆ ಮಾಲಿಕರ) ಪಾಲು ರೂ.1,41 ಲಕ್ಷ ಕೋಟಿ ರೂ.ಗಳಾಗಿದ್ದರೆ, ಕಾರ್ಮಿಕರ ವೇತನದ ಪಾಲು ಕೇವಲ 28.6 ಸಾವಿರ ಕೋಟಿ ರೂಗಳಾಗಿದೆ. ಅಂದರೆ ಮಾಲಿಕರ ಪಾಲು 60.40 ಶೇಕಡಕ್ಕೆ ಏರಿದ್ದರೆ, ವೇತನದ ಪಾಲು 16.45 ಶೇಕಡಕ್ಕೆ ಇಳಿದಿದೆ. ಅದೇ ವೇಳೆ ಕೈಗಾರಿಕಾ ಉತ್ಪಾಧನೆಯ ಸಾಮಾನ್ಯ ಸೂಚ್ಯಂಕ ಪ್ರತಿ ವರ್ಷ ಏರುತ್ತಿದ್ದು, 2014–15 ರಲ್ಲಿ ಗಣಿಗಾರಿಕೆಯ ಋಣಾತ್ಮಕ ಬೆಳವಣಿಗೆಯ ನಡೆವೆಯು ಗರಿಷ್ಠ 181.15 ಅಂಶಗಳಿಗೆ ತಲುಪಿದೆ. ರಾಜ್ಯದಲ್ಲಿನ ಇಂತಹ ಮಿಗಿತಾಯ ಮೌಲ್ಯ ಸಂಪಾದನೆಯ ಪ್ರಮಾಣವೇ ರಾಜ್ಯವನ್ನು ಜಾಗತಿಕ ಬಂಡವಾಳದ ಆಕರ್ಷಣೆಯ –ನೆಚ್ಚಿನ ತಾಣವನ್ನಾಗಿ ರೂಪಿಸುತ್ತಿದೆ. ಹಾಗಾಗಿ ರಾಷ್ಟ್ರಕ್ಕೆ ಹರಿದು ಬಂದಿರುವ ವಿದೇಶಿ ನೇರ ಬಂಡವಾಳದಲ್ಲಿ ದೆಹಲಿ, ಮುಂಬಯಿ ನಂತರದ ಮೂರನೆ ಸ್ಥಾನದಲ್ಲಿ ರಾಜ್ಯವಿದೆ.

ಬಹುರಾಷ್ಟ್ರೀಯ ಬಂಡವಾಳದ ನೆಚ್ಚಿನ ತಾಣ :

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 3500 ಮಾಹಿತಿ ತಂತ್ರಜ್ಞಾನ ಕಂಪನಿಗಳಿದ್ದು, ರಾಷ್ಟ್ರದ 38 ಶೇಕಡ ರಫ್ತನ್ನು ಒದಗಿಸುತ್ತಿದೆ. 500 ಜಾಗತಿಕ ಫಾರ್ಚೂನ್ ಕಂಪನಿಗಳಲ್ಲಿ 400 ಕಂಪನಿಗಳು ಮಾಹಿತಿ ತಂತ್ರಜ್ಞಾನ ಸೇವೆಯನ್ನು ರಾಜ್ಯದಿಂದ ಹೊರಗುತ್ತಿಗೆ. ಆಧಾರದಲ್ಲಿ ಪಡೆಯುತ್ತಿದೆ. 85 ಚಿಪ್ ವಿನ್ಯಾಸ ಸಂಸ್ಥೆಗಳು 370 ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ರಾಜ್ಯದಲ್ಲಿವೆ. ಭಾರತದ ಅತಿ ಹೆಚ್ಚು ಆರ್ &ಡಿ ಸಂಸ್ಥೆಗಳನ್ನು ಹೊಂದಿರುವ ರಾಜ್ಯವಾಗಿದೆ. ರಾಷ್ಟ್ರದ 26 ಶೆಕಡ ಜೈವಿಕ ತಂತ್ರಜ್ಞಾನ ಆದಾಯವು ರಾಜ್ಯದಿಂದ ಬರುತ್ತಿದ್ದು, 200 ಕ್ಕೂ ಹೆಚ್ಚು ಸಂಸ್ಥಗೆಳಲ್ಲಿ 19 ಸಾವಿರ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿದ್ದು, ಅದರಲ್ಲಿ 15.6 ಶೇಕಡ ಮಹಿಳೆಯರಿದ್ದಾರೆ. ಮೆಷಿನ್ ಟೂಲ್ ಉತ್ಪಾಧನೆಯಲ್ಲಿ ರಾಜ್ಯದ ಪಾಲು 60 ಶೇಕಡವಿದ್ದು, ರಾಜ್ಯದಲ್ಲಿನ 2.92 ಲಕ್ಷ ಕೋಟಿ ರೂಗಳ ಮೌಲ್ಯದ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಉತ್ಪಾಧನೆಯಲ್ಲಿ 2.22 ಲಕ್ಷ ಕೋಟಿ ರೂಗಳ ಮೌಲ್ಯದ ಉತ್ಪನ್ನ ರಫ್ತಾಗಿರುವುದು, ಸಾಫ್ಟ್‌ವೇರ್‌ನೊಂದಿಗೆ ಹಾರ್ಡ್‌ವೇರ್ ಸಹಾ ನೆಲೆ ಪಡೆಯುತ್ತಿರುವ ಪ್ರವೃತ್ತಿಯನ್ನು ತೋರುತ್ತದೆ.

ವಿಶ್ವದ 4 ನೇ ಅನ್ವೇಷಣೆ ಕೇಂದ್ರವನ್ನಾಗಿ ವಿಶ್ವ ಆರ್ಥಿಕ ವೇದಿಕೆ ಗುರುತಿಸಿರುವಾಗಲೆ, 2020 ರ ವೇಳೆಗೆ ರಾಜ್ಯದ ಬೆಂಗಳೂರು 20 ಲಕ್ಷ ಮಾಹಿತಿ ತಂತ್ರಜ್ಞಾನ ವೃತ್ತಿಪರರೂ ಹಾಗು 60 ಲಕ್ಷ ಪರೋಕ್ಷ ಉದ್ಯೋಗಿಗಳೊಂದಿಗೆ ಭೂಗ್ರಹದ ಮೇಲಿನ ಅತಿ ಹೆಚ್ಚು ಪ್ರತಿಭೆಗಳನ್ನು ಹೊಂದಿದ ಏಕ ಮಾತ್ರ ಕೇಂದ್ರವಾಗಲಿದೆ ಎಂದು ಅಂದಾಜಿಸಲಾಗಿದೆ.

ನಾಗರೀಕ ಸಮಸ್ಯೆ–ಬಂಡವಾಳಿಗರ ಹಿಡಿತ :

ಅದೇ ವೇಳೆ ರಾಷ್ಟ್ರದ ಮಾಲೀಕರ ಸಂಘವಾದ ಆಸೋಚಾಮ್ ಬೆಂಗಳೂರಿನಲ್ಲಿ ನಡೆದಿರುವ ಬೆಳವಣಿಗೆಯ ಸ್ಪೋಟವು ನಗರವನ್ನು ಗಂಭೀರ ನಾಗರಿಕ ಸಮಸ್ಯೆಗಳಿಗೆ ದೂಡಿದೆ. ಕೈಗಾರಿಕೆಗಳು ರಾಷ್ಟ್ರದ ಇತರೆ ನಗರಗಳೆಡೆಗೆ ಮುಖ ಮಾಡುತ್ತಿವೆ ಎಂದು ತನ್ನ 2025 ರವರೆಗಿನ ಕಣ್ನೋಟದಲ್ಲಿ ಗುರುತಿಸಿದೆ. ಈ ಹಿನ್ನೆಲೆಯಲ್ಲಿ ಹಿಂದಿನ ಎಸ್.ಎಂ.ಕೃಷ್ಣ, ಹಾಗು ಯಡಿಯೂರಪ್ಪ ಸರ್ಕಾರಗಳು ರಚಿಸಿದ್ದಂತೆ ಬಂಡವಾಳಗಾರರ ಪ್ರತಿನಿಧಿಗಳು ಒಳಗೊಂಡ "ಬೃಹತ್ ಬೆಂಗಳೂರು ನೀಲಿನಕ್ಷೆ ಕಾರ್ಯಪಡೆ" (BBPAG) ಯನ್ನು ರಚಿಸಿದೆ. ಸ್ಮಾರ್ಟ್ ಸಿಟಿಗಳನ್ನು ಸ್ಥಾಪಿಸಲು ಕೇಂದ್ರವು ಮುಂದಾಗಿದೆ ಎಂಬುದನ್ನು ಮನಗಾಣಬೇಕಿದೆ.

ಹೆಚ್ಚುತ್ತಿರುವ ಕಾರ್ಮಿಕ ಕಾನೂನುಗಳ ಉಲ್ಲಂಘನೆ :

ಇದೇ ವೇಳೆ ರಾಜ್ಯದಲ್ಲಿನ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಹೆಚ್ಚುತ್ತಿರುವುದು, ಕಾರ್ಮಿಕ ಇಲಾಖೆ ನಡೆಸಿರುವ ತಪಾಸಣೆ ಹೂಡಲಾದ ಮೊಕದ್ದಮೆಗಳು ಮತ್ತು ಶಿಕ್ಷೆಗೆ ಒಳಪಟ್ಟ ಸಂಸ್ಥೆಗಳಲ್ಲಿ ಶೇಕಡ 25 ರಷ್ಟು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಾದರೆ, ಎರಡನೇ ಸ್ಥಾನದಲ್ಲಿ ಕನಿಷ್ಠ ವೇತನ ಕಾಯ್ದೆ ಮತ್ತು ಮೂರನೇ ಸ್ಥಾನ ವೇತನ ಪಾವತಿ ಕಾಯ್ದೆ ಅಡಿಯ ಉಲ್ಲಂಘನೆಗಳಾಗಿವೆ ಎಂಬ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳಲ್ಲಿನ ಅಂಶವನ್ನು ಸಮ್ಮೇಳನ ಉಲ್ಲೇಖಿಸುತ್ತಾ, ಕನಿಷ್ಠ ವೇತನ ಮತ್ತು ವೇತನ ಪಾವತಿಯಂತಹ ಮೂಲಭೂತ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಎಂತಹ ಪರಿಸ್ಥಿತಿಗೆ ಕಾರ್ಮಿಕರನ್ನು ದೂಡಿದೆ ಎಂಬುದನ್ನು ತೋರಿದೆ.

ಹೆಚ್ಚುತ್ತಿರುವ ತಿಕ್ಕಾಟ–ಪರಿಹಾರವಾಗದ ವಿವಾದಗಳು :

ಅಂತೆಯೆ ಕೈಗಾರಿಕಾ ಸಂಬಂಧದಲ್ಲಿ ಮಾಲೀಕರು ಮತ್ತು ಕಾರ್ಮಿಕರ ನಡುವಿನ ತಿಕ್ಕಾಟಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಕಾರ್ಮಿಕರ ಮುಷ್ಕರಕ್ಕಿಂತ ಮಾಲೀಕರ ಬೀಗ ಮುದ್ರೆಗಳಿಂದ ಮಾನವ ದಿನಗಳ ನಷ್ಟ ರಾಜ್ಯದಲ್ಲಿ ಹೆಚ್ಚಾಗಿರುವುದನ್ನು ಸಮ್ಮೇಳನ ಗುರುತಿಸುತ್ತಾ, ಕೈಗಾರಿಕಾ ವಿವಾದಗಳು ಒಪ್ಪಂದದಲ್ಲಿ ಅಂತ್ಯವಾಗುವ ಬದಲು ವಿಫಲತೆ ಹೊಂದಿ ನ್ಯಾಯ ನಿರ್ಣಯಕ್ಕೆ ನ್ಯಾಯಾಲಯಗಳಿಗೆ ಶಿಫಾರಸ್ಸಾಗುತ್ತಿರುವುದು ಹೆಚ್ಚುತ್ತಿದೆ. ರಾಜ್ಯ ಉಚ್ಚ ನ್ಯಾಯಾಲಯದ ಮನೆಬಾಗಿಲಿಗೆ ನ್ಯಾಯ ಘೋಷಣೆಯಡಿ, ಜಿಲ್ಲೆಗಳಿಗೆ ಕೈಗಾರಿಕಾ ವಿವಾದಗಳು ವರ್ಗಾವಣೆಗಳು ಆಗುತ್ತಿವೆ. ಅಲ್ಲಿ ಪ್ರತ್ಯೇಕ ಕಾರ್ಮಿಕ ನ್ಯಾಯಾಲಯಗಳಿಲ್ಲದ ಕಾರಣ, ಸಿವಿಲ್ ನ್ಯಾಯಾಲಗಳಿಗೆ ವಿವಾದಗಳು ವರ್ಗಾವಣೆಗೊಂಡು, ನ್ಯಾಯ ನಿರ್ಣಯ ಮತ್ತಷ್ಟು ವಿಳಂಬಗೊಳ್ಳುವ, ಮಾಲೀಕರಿಗೆ ಲಾಭ ಮಾಡಿಕೊಡುವ ಸಾಧ್ಯತೆಗಳು ಹೆಚ್ಚಿವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗೆ ಮತ್ತು ಕನಿಷ್ಠ ವೇತನ ಕ್ಲೇಮ್ ಅರ್ಜಿ ವಿಚಾರಣೆ ಪ್ರಾಧಿಕಾರದ ಅಧಿಸೂಚನೆಗೆ ರಾಜ್ಯ ಸರ್ಕಾರವನ್ನು ಸಮ್ಮೇಳನ ಒತ್ತಾಯಿಸಿದೆ.

ಇದೇ ವೇಳೆ ವರ್ಷ ಪ್ರತಿ ನೊಂದಾಯಿತ ಗುತ್ತಿಗೆದಾರರ ಸಂಖ್ಯೆ ಹೆಚ್ಚುತ್ತಿದೆ. 2015 ರಲ್ಲಿ 16,193 ನೊಂದಾಯಿತ ಗುತ್ತಿಗೆದಾರರಿದ್ದು, ಅವರುಗಳಡಿ ಕನಿಷ್ಠ 3.23 ಲಕ್ಷ ಗುತ್ತಿಗೆ ಕಾರ್ಮಿಕರು ಇರುವುದನ್ನು ಅಂದಾಜಿಸಬಹುದಾಗಿದೆ. ಎಲ್ಲಾ ರಂಗದಲ್ಲೂ ಗುತ್ತಿಗೆ ಕಾರ್ಮಿಕರು ಹೆಚ್ಚುತ್ತಿದ್ದು, ನೂತನ ರಾಜ್ಯ ಕೈಗಾರಿಕಾ ನೀತಿಯಲ್ಲಿ 30 ಶೇಕಡ ಗುತ್ತಿಗೆ ಕಾರ್ಮಿಕರನ್ನು ಉತ್ಪಾದನಾ ಕೆಲಸಗಳಲ್ಲಿ ತೊಡಗಿಸಲು, ಅನುವುಗೊಳಿಸಿರುವ ಹಿನ್ನೆಲೆಯಲ್ಲಿ ಇದರ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಚಳುವಳಿಗೆ ಆಕ್ರಮಣ ಶೀಲತೆ ನೀಡುವ ನಿಟ್ಟಿನಲ್ಲಿ ಗುತ್ತಿಗೆ ಕಾರ್ಮಿಕರು ಮತ್ತಿತರೆ ಕಾಯಮೇತರರನ್ನು ಕಾಯಂಗೊಳಿಸಲು ಶಾಸನಕ್ಕೆ ಒತ್ತಾಯಿಸಲು ಸಮ್ಮೇಳನ ನಿರ್ಣಯಿಸಿದೆ.

ಹಲವು ಕೈಗಾರಿಕೆಗಳಲ್ಲಿ ಸಂಘ ರಚಿಸಲು ಬಿಡದ, ರಚಿಸಿದರೆ ಮುಂದಾಳುಗಳನ್ನು ಬಲಿಪಶು ಮಾಡುವ ಬೆಳೆವಣಿಗೆಗಳು ತೀವ್ರಗೊಂಡಿವೆ. ಹಾಲಿ ಕಾನೂನುಗಳ ಮಿತಿ ಸಂಘ ಮಾನ್ಯತೆಗೆ ಅನುವಾಗದಿರುವುದನ್ನು ಮನಗಂಡು ಕಾರ್ಮಿಕ ಸಂಘಗಳ ಮಾನ್ಯತೆಗೆ ಶಾಸನಕ್ಕೆ ಒತ್ತಾಯಿಸಲು ಸಮ್ಮೇಳನ ನಿರ್ಣಯಿಸಿದೆ.

"ಹಿಂತಿರುಗುವ ಹಕ್ಕಿಗಾಗಿ" ಕಾನೂನು

ನವ ಉದಾರವಾದಿ ಆರ್ಥಿಕ ನೀತಿಗಳ 25 ನೇ ವರ್ಷಾಚರಣೆ ಸಂದರ್ಭದಲ್ಲಿ, ಖಾಸಗಿ ಬಹುರಾಷ್ಟ್ರೀಯ ಬಂಡವಾಳವು ಹಲವು ರೀತಿಯ ವಿಲೀನ, ಅವಿಲೀನ ಪ್ರಕ್ರಿಯೆಯಲ್ಲಿ ತೊಡಗಿದೆ. ತನ್ನ ಉತ್ಪಾಧನ ವೆಚ್ಚ ಕಡಿತಗೊಳಿಸಲು, ಉದ್ಯೋಗಿಗಳ ಸಂಖ್ಯೆ ಕಡಿಮೆ ಮಾಡಲು, ಕಾನೂನು ವ್ಯಾಪ್ತಿಯಿಂದ ಹೊರಗುಳಿಯಲು, ಹೊರಗುತ್ತಿಗೆ ಮುಂತಾದ ಕ್ರಮಗಳಿಗೆ ಮುಂದಾಗುತ್ತಿರುವಾಗಲೆ, ಅವಿಲೀನದ ವಿವಿಧ ರೂಪಗಳಾದ ಪಾಲು ಮಾಡುವ, divestiture, demerger, Hive OFF ನಂತಹ ಪ್ರಕ್ರಿಯೆಗಳ ಮೂಲಕ ಒಂದು ಕಂಪನಿಯನ್ನು ಎರಡು ಮಾಡುವ ಪ್ರಕ್ರಿಯೆಗಳು ಹೆಚ್ಚುತ್ತಿವೆ. ಇದರ ವಿರುದ್ಧ ಕಾರ್ಮಿಕರ ಅತೃಪ್ತಿ, ಅಸಮಾದಾನ ಹೆಚ್ಚುತ್ತಿದೆ. ಕಾರ್ಮಿಕ ಸಂಘಗಳಲ್ಲಿ ಒಡಕಿಗೂ ಕಾರಣವಾಗುತ್ತಿದೆ. ಇಂತಹ ಸನ್ನಿವೇಶಕ್ಕೆ ಕಾನೂನಿನ ಬಲ ಪಡೆಯುವ ನಿಟ್ಟಿನಲ್ಲಿ ಜರ್ಮನಿಯಲ್ಲಿರುವ ರೀತಿಯಲ್ಲಿ "ಹಿಂತಿರುಗುವ ಹಕ್ಕಿಗಾಗಿ" Right to Return ಕಾನೂನು ರೂಪಿಸಲು ಒತ್ತಾಯಿಸಲು ಸಹಾ ಸಮ್ಮೇಳನವು ನಿರ್ಣಯಿಸಿದೆ.

ಈ ರೀತಿಯಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳಡಿ ಒಂದೆಡೆ ಹಾಲಿ ಹಕ್ಕುಗಳ ಉಳಿವಿಗಾಗಿ ರಕ್ಷಣಾತ್ಮಕ ಹೋರಾಟಗಳ ಜೊತೆ, ಬದಲಾಗುತ್ತಿರುವ ಕೈಗಾರಿಕೆ ಹಾಗು ಕೈಗಾರಿಕಾ ಸಂಬಂಧಗಳ ಹಿನ್ನಲೆಯಲ್ಲಿ ಕಾರ್ಮಿಕ ಹಕ್ಕುಗಳ ಸಮಕಾಲೀನತಗೆ ಬಲಪಡಿಸುವಿಕೆಗೆ ಆಕ್ರಮಣಕಾರಿ ಹೋರಾಟ–ಚಳುವಳಿಗೆ ಮುಂದಾಗಲು ಸಮ್ಮೇಳನ ನಿರ್ಣಯಿಸಿದೆ.

ಖಾಸಗಿ ಲಾಭದ ಪಾಲು ಹೆಚ್ಚುತ್ತಿದೆ–ಸರ್ಕಾರಿ ಕರ್ತವ್ಯಗಳು ಹೊರಗುತ್ತಿಗೆಗೊಳುತ್ತಿವೆ:

ಇದೇ ವೇಳೆ ಮೌಲ್ಯವರ್ಧನೆಯಲ್ಲಿನ ಬಹುತೇಕ ಪಾಲು ಖಾಸಗಿ ಬಂಡವಾಳಕ್ಕೆ ಸಲ್ಲುತ್ತಿರುವ ಸಂದರ್ಭದಲ್ಲಿ ಸರ್ಕಾರಗಳು ತನ್ನ ಎಲ್ಲಾ ಕರ್ತವ್ಯಗಳನ್ನು ಖಾಸಗಿ ಒಡೆತನಕ್ಕೆ ವಹಿಸುವ ನಿಟ್ಟಿನಲ್ಲಿ ಸರ್ಕಾರಿ ನೌಕರರ ಬದಲು ಸ್ಕೀಂ ನೌಕರರ ಮೂಲಕ ಗುತ್ತಿಗೆ ಹೊರಗುತ್ತಿಗೆ ನೌಕರರ ಮೂಲಕ ತನ್ನ ಕರ್ತವ್ಯಗಳನ್ನು ನಿರ್ವಹಣೆಗೆ ಮುಂದಾಗಿ ಅಂಗನವಾಡಿ, ಬಿಸಿಊಟ, ಆಶಾ, 108 ಮುಂತಾದ ಹೊಸ ವಿಭಾಗದ ಅರೆ ಉದ್ಯೋಗಿಗಳು ಒಂದು ಅರ್ಥದಲ್ಲಿ ನಿರುದ್ಯೋಗಿಗಳಾಗಿಲು ಅನುವುಗೊಳಿಸಿ, ಅವುಗಳನ್ನು ಇಲ್ಲದಾಗಿಸಲು ಖಾಸಗೀಕರಣಕ್ಕೆ ಮಿಷನ್ ಮೋಡ್‌ಗೆ ಮುಂದಾಗಿದೆ ಎಂದು ಸಮ್ಮೇಳನ ಅಂದಾಜಿಸಿದೆ.

ಅದೇ ವೇಳೆ ಸಾಂಪ್ರಾದಾಯಿಕ ಉದ್ದಿಮೆಗಳಾದ ಬೀಡಿ, ಹೆಂಚು, ಗೇರು, ಪ್ಲಾಂಟೇಷನ್ ಕೈಗಾರಿಕೆ ಅವಸಾನಹ ಅಂಚಿನಲ್ಲಿದ್ದು, ಅದರ ಮೇಲೆ ಅವಲಂಬಿತ ಕಾರ್ಮಿಕರ ರಕ್ಷಣೆಗೆ ಸರ್ಕಾರ ಮುಂದಾಗುತ್ತಿಲ್ಲ, ಪರ್ಯಾಯ ಜೀವನಾದಾರಕ್ಕಾಗಿ ಒತ್ತಾಯಿಸಲು ಸಮ್ಮೇಳನ ನಿರ್ಣಯಿಸಿದೆ.

ವಿಭಜಿತ ಶಕ್ತಿಗಳ ವಿರುದ್ಧ ಐಕ್ಯತೆಯ ಚಳುವಳಿ :

ಇದೇ ವೇಳೆ ರಾಜ್ಯದಲ್ಲಿ ಅಪೌಷ್ಠಿಕತೆ, ಆಹಾರದ ಹಕ್ಕಿನ ಪರಿಸ್ಥಿತಿ, ಜಾತಿ ಅಸ್ಪೃಷ್ಯತೆ, ಜಾತಿ ತಾರತಮ್ಯ, ಜಾತಿ ಆಧಾರಿತ ಕಾರ್ಮಿಕರ ಅಣಿನೆರೆಯುವಿಕೆಯ, ಕೋಮು ಆಧಾರಿತ ವಿಭಜನೆಯ ಪ್ರವೃತ್ತಿಗಳು ಕಾರ್ಮಿಕರ ನಡುವೆ ತೀವ್ರಗೊಳ್ಳುತ್ತಿರುವುದನ್ನು ಸಮ್ಮೇಳನ ಗುರುತಿಸಿದೆ.

ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯನ್ನು ಎತ್ತಿ ಹಿಡಿಯುವಾಗಲೆ, ಹುಸಿ ರಾಷ್ಟ್ರೀಯವಾದ, ದೇಶಭಕ್ತಿಯ ಪ್ರಚಾರ ಕಾರ್ಮಿಕರ ನಡುವೆ, ಪ್ರಮುಖವಾಗಿ ಯುವ ಕಾರ್ಮಿಕರ ನಡುವೆ ತೀವ್ರಗೊಳ್ಳುತ್ತಿರುವ ಅಂಶವನ್ನು ಗುರುತಿಸಿದೆ. ಅದಕ್ಕೆ ಸಹಕಾರಿಯಾಗಿರುವ ಮಾಧ್ಯಮ ಹಾಗು ನವ ಮಾಧ್ಯಮವಾದ ಪೇಸ್ ಬುಕ್, ವಾಟ್ಸ್ ಆಪ್, ಟ್ವಿಟರ್‌ಗಳನ್ನು ಸಮರ್ಪಕವಾಗಿ ಬಳಸಲು ಅಗತ್ಯವಿರುವ ತರಬೇತಿಗಳನ್ನು ಸದಸ್ಯರಿಗೆ ನೀಡಲು ಅಗತ್ಯ ಕ್ರಮವಹಿಸಲು ಸಮ್ಮೇಳನ ನಿರ್ಣಯಿಸಿದೆ.

ಕಾಲದ ಅಗತ್ಯಕ್ಕೆ ನಿಲುಕುವ ಮಾರ್ಗದರ್ಶನಕ್ಕೆ ಒತ್ತಾಸೆ:

ಈ ಹಿನ್ನೆಲೆಯಲ್ಲಿ ಚರ್ಚೆಯಲ್ಲಿ ಪಾಲ್ಗೊಂಡ ಸಂಗಾತಿಗಳು ಮೇಲಿನ ಎಲ್ಲಾ ನಿರ್ಣಯಗಳನ್ನು ಜಾರಿಗೊಳಿಸಲು ಅಗತ್ಯವಿರುವ ಮಾರ್ಗದರ್ಶನ, ಸೈದ್ಧಾಂತಿಕ ತರಬೇತಿ, ಕೌಶಲ್ಯಾಭಿವೃದ್ಧಿಗೆ ನೂತನ ರಾಜ್ಯ ಸಮಿತಿ ಆದ್ಯತೆ ನೀಡಬೇಕೆಂಬ ಒತ್ತಾಸೆಯನ್ನು, ಚರ್ಚೆಯ ಉದ್ದಗಲಕ್ಕೂ ಹೊರಹೊಮ್ಮಿಸಿದ್ದಾರೆ.

ಇದೇ ವೇಳೆ ಹಲವು ಮಧ್ಯಪ್ರವೇಶಗಳು ಚಳುವಳಿಯಿಂದ ಸಾಧ್ಯವಾಗಿದರೂ ಸಹಾ ಸಾಮಾಜಿಕ ಪ್ರಶ್ನೆಗಳ ವಿಚಾರದಲ್ಲಿ ಕೋಮುವಾದದ ದಾಳಿಗಳನ್ನು ಸೈದ್ಧಾಂತಿಕವಾಗಿ ಏದುರಿಸುವಲ್ಲಿ ಚಳುವಳಿಯ ಮಧ್ಯಪ್ರವೇಶ ಕಾಲದ ಅಗತ್ಯಕ್ಕೆ ಸಾಕಗುವಷ್ಟು ಇಲ್ಲ ಎಂಬುದನ್ನು ಅತ್ಯಂತ ಕಳಕಳಿಯಿಂದ ಸಮ್ಮೇಳನದ ಚರ್ಚೆಯಲ್ಲಿ ಹೊರಹೊಮ್ಮಿದೆ.

ಸಂಘಟನೆ ವಿಸ್ತರಣೆ–ಕ್ರೋಡಿಕರಣ :

ಸದಸ್ಯತ್ವವನ್ನು ಹಿಂದಿನ ಸಮ್ಮೇಳನದ ಗುರಿಯಂತೆ ತಲುಪಲು ಸಾಧ್ಯವಾಗದಿದ್ದರೂ ಸಹಾ ನಿರಂತರವಾಗಿ ಸಾವಿರಾರು ಸಂಖ್ಯೆಯಲ್ಲಿ ಹೆಚ್ಚಳ ಕಂಡಿದೆ. ನಿರೀಕ್ಷಿತ ಗುರಿ ಸಾಧಿಸಲು ಅಗತ್ಯ ಯೋಜಿತ ಕೆಲಸಕ್ಕೆ ಚಳುವಳಿಯನ್ನು ಮುನ್ನೆಡೆಸಲು ಬಲಿಷ್ಠ ರಾಜ್ಯ ಸಮಿತಿ, ರಾಜ್ಯ ಪದಾಧಿಕಾರಿಗಳ ಸಮಿತಿ ಮತ್ತು ರಾಜ್ಯ ಕೇಂದ್ರ ರೂಪಿತವಾಗಬೇಕೆಂಬ ಒತ್ತಾಸೆಯನ್ನು ಸಮ್ಮೇಳನ ವ್ಯಕ್ತಪಡಿಸಿದೆ.

13 ನೇ ರಾಜ್ಯ ಸಮ್ಮೇಳನದ ಪೂರ್ವದಲ್ಲಿ ಸಂಘಟಿಸಲಾದ 27 ಜಿಲ್ಲಾ ಸಮ್ಮೆಳನಗಳು ಅದರ ಪೂರ್ವದ 85 ತಾಲ್ಲೂಕು/ವಲಯ ಸಮ್ಮೇಳನಗಳು ಅದರಲ್ಲಿ ಅಣಿ ನೆರೆದ ಕಾರ್ಮಿಕರು ಚಳುವಳಿಯ ಸಾಮರ್ಥ್ಯವನ್ನು ತೋರ್ಪಡಿಸಿದೆ. ಪ್ರಪ್ರಥಮವಾಗಿ ಸಂಘಟಿಸಲಾದ 146 ಗ್ರಾಮ ಪಂಚಾಯತಿ, 31 ಹೋಬಳಿ, 21 ವಾರ್ಡ್, 6 ನಗರ ಸಭೆ/ಪುರ ಸಭೆ ಸಮ್ಮೇಳನಗಳು ಸಂಘಟನೆಯನ್ನು ತಳಹಂತಕ್ಕೆ ಕೊಂಡೊಯ್ಯಲು, ಸಾಮಾನ್ಯ ಸದಸ್ಯರನ್ನು ಕಾರ್ಯಕರ್ತರನ್ನಾಗಿ ರೂಡಿಸಲು ನಾಯಕತ್ವ ರೂಪಿಸಲು ಸಾಧ್ಯವಾಗಿರುವುದು ಚಳುವಳಿಯ ಕ್ರೋಡಿಕರಣಕ್ಕೆ ನಡೆಸಲಾದ ಗುಣಾತ್ಮಕ ಪ್ರಯತ್ನಗಳನ್ನು ಸಂಘಟನ ವರದಿ ಗುರುತಿಸಿದೆ, ಸಮ್ಮೇಳನವು ಸಹಾ ಈ ನಿಟ್ಟಿನಲ್ಲಿ ನಡೆದಿರುವ ಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಈ ಯತ್ನಗಳನ್ನು ನಿರಂತರಗೊಳಿಸುತ್ತಾ, ವಿಸ್ತರಿಸಿ, ವ್ಯಾಪಕಗೊಳಿಸಲು ನಿರ್ಧರಿಸಿದೆ.

ಆ ಮೂಲಕ ನಮ್ಮ ಚಳುವಳಿಯನ್ನು ರಕ್ಷಣಾತ್ಮಕ ಜಾಡಿನಿಂದ ಆಕ್ರಮಣಕಾರಿ ಜಾಡಿಗೆ ಹೊರಳಿಸಬಹುದೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದೆ. ●


ದೇಶಕ್ಕೆ ದೇಶವೇ ತನ್ನ ಗಡಿ ಕಾಯುವ ವೀರ ಯೋಧರ ಸಾವಿನ ಶೋಕದಲ್ಲಿ ಮುಳುಗಿದೆ. ಆದರೆ ನಿತ್ಯವೂ ಸೈನಿಕರ ಬಗ್ಗೆ ಹುಸಿ ಉದ್ವೇಗದಿಂದ ಮಾತಾಡುವ ನಕಲಿ ದೇಶಪ್ರೇಮಿ ಚಕ್ರವರ್ತಿ ಸೂಲಿಬೆಲೆ ಮಾತ್ರ ಇಂದು ಭಾರೀ ಸಂಭ್ರಮದಲ್ಲಿದ್ದಾನೆ. ಯಾಕೆ ಗೊತ್ತೆ? ಮಂಗಳೂರಿನ ದೇವಳವೊಂದರಲ್ಲಿ ನಡೆದ ಅವ್ಯವಹಾರ ಬಯಲಿಗೆಳೆಯಲು ಪ್ರಯತ್ನಿಸಿದ ಅಪ್ಪಟ ಹಿಂದೂ ವಿನಾಯಕ ಬಾಳಿಗಾ ಎಂಬ ಆರ್‌ಟಿಐ ಕಾರ್ಯಕರ್ತನ ಕೊಲೆ ಮಾಡಿಸಿದ ಆರೋಪಿಯಾಗಿರುವ ಸೂಲಿಬೆಲೆಯ ಗೆಳೆಯ ನಮೊ ಬ್ರಿಗೇಡ್ ನರೇಶ್ ಶೆಣೈ ಇಂದು ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ. ಸೂಲಿಬೆಲೆ ಖುಷಿಯಿಂದ ಸ್ವತಃ ಜೈಲಿಗೆ ಹೋಗಿ ಕೊಲೆ ಆರೋಪಿಯನ್ನು ಬರಮಾಡಿಕೊಂಡಿದ್ದಾನೆ. ಮುಖದಲ್ಲಿರುವ ನಗು ನೋಡಿ!

#ShameSoolibele

– ಶಶಿಧರ ಹೆಮ್ಮಾಡಿ

ಮೋದಿ ಸಾಹೇಬ ಓದಲೇಬೇಕಾದ ಪುಸ್ತಕಗಳು

ಗಿರೀಶ್ ತಾಳಿಕಟ್ಟೆ (ಸ್ಫೂರ್ತಿ: ಲೆಫ್ಟ್‌ವರ್ಲ್ಡ್)



'ನಮೋ' ಅಂದ್ರೆ ಯಾರಿಗೆ ತಾನೇ ಗೊತ್ತಿಲ್ಲ. 'ಭಕ್ತ'ರ ಪ್ರಪಂಚದ ವರ್ಲ್ಡ್ ಫೇಮಸ್ ಸೂಪರ್ ಹೀರೋ! ಭಕ್ತರಲ್ಲದ 'ದ್ರೋಹಿ'ಗಳಿಗೂ ನಮೋ ಬಗ್ಗೆ ಸಾಕಷ್ಟು ತಿಳಿದಿದೆ. ಆತನ ಅವ್ಯಾಹತ ವಿದೇಶಿ ಹಾರಾಟಗಳು, ಠಾಕೂಠೀಕಿನ ವೇಷಭೂಷಣಗಳು, ತನ್ನ ಮಾತನ್ನು ತಾನೇ ಆನಂದಿಸುವ ಆತ್ಮರತಿ..... ಅಬ್ಬಬ್ಬಾ ಪಟ್ಟಿ ದೊಡ್ಡದಾಗುತ್ತಲೇ ಸಾಗುತ್ತದೆ.

ಆದರೆ ಇಡೀ ಇಂಡಿಯಾಕ್ಕೆ ಗೊತ್ತಿಲ್ಲದ ಸಂಗತಿ ಅಂದ್ರೆ ಈ ಮಹಾಮಾನವ ಯಾವ್ಯಾವ ಪುಸ್ತಕ ಓದುತ್ತಾನೆ?

ಮೊನ್ನೆಯಷ್ಟೇ ನಮೋನ ಪರಮಾಪ್ತ ಗೆಳೆಯ ಬರಾಕ್ ಒಬಾಮಾ ತನ್ನ ನೆಚ್ಚಿನ ಸಂಗೀತಗಳ ಪಟ್ಟಿಯೊಂದನ್ನು ತೆರೆದಿಟ್ಟ. ಈ ವಿಷಯ ಕಿವಿಗೆ ಬಿದ್ದಕೂಡಲೇ ನಮೋ ಮುಖದ ಮೇಲೆ ಕೃತಕ ನಗೆಯೊಂದು ಹಾದುಹೋಗಿರುತ್ತೆ ಬಿಡಿ. ತನ್ನ ಕ್ಷುಲ್ಲಕ ಗತಕಾಲವನ್ನು ನೆನೆದಲ್ಲ, ತಾನೊಬ್ಬ ಜಗತ್ತಿನ ಪುರಾತನ ದೇಶದ ಜನನಾಯಕ ಅನ್ನೋದನ್ನು ಪ್ರತಿನಿಧಿಸಲೋಸುಗ. ಅದೂ ಎಂಥ ದೇಶ, ಪ್ರಪಂಚದ ಮೊಟ್ಟಮೊದಲ ನಾಗರಿಕತೆಗಳು ಮೈನರೆಯುವ ಸಾವಿರಾರು ವರ್ಷಗಳ ಹಿಂದೆಯೇ ಪ್ಲಾಸ್ಟಿಕ್ ಸರ್ಜರಿ ಕಂಡುಹಿಡಿದಿದ್ದ, ಏರೋಪ್ಲೇನ್ ತಂತ್ರಜ್ಞಾನದಲ್ಲಿ ಹಾರಾಟ ನಡೆಸಿದ್ದ, ಟೆಸ್ಟ್‌ಟ್ಯೂಬ್ ಬೇಬಿಗಳನ್ನು ಉತ್ಪಾದಿಸಿದ್ದ, ಇನ್ನೂ ಏನೇನೋ ಮೈಕ್ರೊ, ನ್ಯಾನೋ ಚಮತ್ಕಾರಗಳನ್ನೆಲ್ಲ ಮಾಡಿದ್ದ ದೇಶ. ಇದನ್ನೆಲ್ಲ ಹೋದಬಂದಲ್ಲೆಲ್ಲ ನಮೋ ಸಾಹೇಬನೇ ಹೇಳಿಕೊಂಡು ತಿರುಗಾಡುತ್ತಾನೆ. ಇಂತದ್ದನ್ನೆಲ್ಲ ಹೇಳಬೇಕೆಂದರೆ ಆತ ಘನವಾದ ಹೊತ್ತಿಗೆಗಳನ್ನೇ ಓದಿ ಉರುಳಾಡಿರಬೇಕು!

ಹಾಗಾದರೆ, ನಮೋ ಸಾಹೇಬ ಏನೆಲ್ಲಾ ಓದುತ್ತಾನೆ?

ಸದ್ಯಕ್ಕಂತೂ ಇಂಡಿಯಾಕ್ಕೆ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಭಾಗ್ಯ ಲಭಿಸಿಲ್ಲ. ಆದರೆ ಈಗಿನ ಪರಿಸ್ಥಿತಿಗೆ ತಕ್ಕಂತೆ ನಮೋ ಓದಲೇಬೇಕಾದ ಒಂದಷ್ಟು ಇಂಟರೆಸ್ಟಿಂಗ್ ಪುಸ್ತಕಗಳ ಪಟ್ಟಿ ಇಲ್ಲಿದೆ.

ಮೊದಲನೆಯದಾಗಿ, ನಮೋ ಈಗ ತುರ್ತಾಗಿ ತನ್ನ ತವರು ರಾಜ್ಯ ಗುಜರಾತ್‌ನತ್ತ ಗಮನಹರಿಸಬೇಕಿದೆ. ಪಟೇಲರ ಮೀಸಲಾತಿ ಹೋರಾಟ ಶುರುವಾದ ಕ್ಷಣದಿಂದ ಮೊನ್ನೆಯ ಊನಾ ಘಟನೆಯ ಮುಹೂರ್ತಕ್ಕೆ ಸರಿಯಾಗಿ ನಮೋ ಕಷ್ಟಪಟ್ಟು ಗಾಳಿಯೂದಿ ಉಬ್ಬಿಸಿದ್ದ 'ಗುಜರಾತ್ ಮಾಡೆಲ್' ಧಸಕ್ಕನೆ ಕುಸಿದು ಕುಳಿತಿದೆ. ಶೋಷಿತರು ಶೋಷಕರ ದಬ್ಬಾಳಿಕೆಯನ್ನು ಧಿಕ್ಕರಿಸಿ ನಿಂತಿದ್ದಾರೆ. ಅಲ್ಲೀಗ ನಮೋ ಉಪಸ್ಥಿತಿ ಎದ್ದು ಕಾಣುತ್ತಿದೆ. ನಮೋ ಉನ್ಮಾದಿತ ಗೋ ರಕ್ಷಕರನ್ನು ನಿಭಾಯಿಸಬೇಕೆಂದರೆ ಆತ ಡಿ.ಎನ್.ಝಾ ಅವರು ಬರೆದಿರುವ 'ದಿ ಮಿಥ್ ಆಫ್ ದಿ ಹೋಲಿ ಕೌ' (ಗೋವು ಪವಿತ್ರ ಎಂಬ ಮಿಥ್ಯ) ಪುಸ್ತಕವನ್ನು ಓದಲೇಬೇಕು.

ನಮೋನ ಈ ಸಾಹಸಕ್ಕೆ ಮೀರಾ ವೇಲಾಯುಧನ್‌ರು ತಮ್ಮ ಬ್ಲಾಗ್‌ನಲ್ಲಿ ಬರೆದುಕೊಂಡಿರುವ 'ದಲಿತ್ಸ್ ಅಂಡ್ ದಿ ಹೋಲಿ ಕೌ' (ದಲಿತರು ಮತ್ತು ಪವಿತ್ರ ಗೋವು) ಲೇಖನವೂ ನೆರವು ನೀಡಲಿದೆ. ನಮೋ ಸಾಹೇಬ ಅದನ್ನೂ ಓದಿಕೊಳ್ಳುವುದು ಒಳಿತು.

ಇನ್ನು ನಮೋ ಓದಲೇಬೇಕಾದ ಮೂರನೇ ಪುಸ್ತಕವೆಂದರೆ ಎ.ಜಿ. ನೂರಾನಿ ಬರೆದಿರುವ 'ದಿ ಕಾಶ್ಮೀರ್ ಡಿಸ್ಪ್ಯೂಟ್' (ಕಾಶ್ಮೀರಿ ವಿವಾದ) ಪುಸ್ತಕ. ಇದರ ಸಂಪುಟ ಒಂದು ಮತ್ತು ಎರಡನ್ನೂ ಓದುವುದು ಒಳಿತು. ಯಾಕೆಂದರೆ ಕಾಶ್ಮೀರದಲ್ಲಿ ಶಾಂತಿಯುತ ಪರಿಹಾರ ಬಯಸುವುದಾಗಿ ನಮೋ ಉದ್ಘರಿಸಿದ್ದಾನೆ. ಪರಿಹಾರ..., ಇರಲಿ, ಅದ್ರೆ ನಮೋ ಸಾಹೇಬನಿಗೆ ಕಾಶ್ಮೀರದ ಸಮಸ್ಯೆ ಏನೆಂಬುದು ಗೊತ್ತಿದೆಯೇ? ಅದನ್ನು ಗೊತ್ತು ಮಾಡಿಕೊಳ್ಳುವುದಕ್ಕಾದರೂ ಆತ ಈ ಪುಸ್ತಕಗಳನ್ನು ತಿರುವಿ ಹಾಕಲೇಬೇಕು. ಆಮೇಲೆ ಪರಿಹಾರದ ಬಗ್ಗೆ ಮಾತನಾಡಿದರೆ ಅದರಲ್ಲೊಂದಷ್ಟು ತೂಕ ಕಾಣಿಸಿಕೊಂಡೀತು.

ಅದೇರೀತಿ 'ಅಚ್ಚೇ ದಿನ್' ಹರಿಕಾರ ನಮೋ ಓದಬೇಕಾದ ನಾಲ್ಕನೇ ಪುಸ್ತಕ ವಿಜಯ ಪ್ರಸಾದ್ ಬರೆದಿರುವ 'ದಿ ಪೂರರ್ ನೇಷನ್ಸ್' (ಬಡ ದೇಶಗಳು). ಕುಸುರಿ ಮತ್ತು ಸ್ವಾರಸ್ಯಗಳನ್ನೇ ಬೆರೆಸಿ ಬರೆದಿರುವ ಈ ಪುಸ್ತಕವನ್ನು ನೆಕ್ಸ್ಟ್ ಟೈಮ್ ನಮೋ ವಾಷಿಂಗ್ಟನ್ ಡಿಸಿಯಂತಹ ದೂರದ ಊರಿಗೆ ಹಾರುವಾಗ ವಿಮಾನದೊಳಗೇ ಓದಿ ಮುಗಿಸಬಹುದು.

ಐದನೇ ಪುಸ್ತಕವಾಗಿ, ಆತನ ಪರಮಾಪ್ತ ದೋಸ್ತಿಗಳಾದ ಅಂಬಾನಿಗಳ ಬಗ್ಗೆ ಪರಂಜೋಯ್ ಗುಹಾ ಠಾಕುರ್ತಾ ಬರೆದಿರುವ 'ಗ್ಯಾಸ್ ವಾರ್ಸ್' (ಅನಿಲ ಯುದ್ಧ) ಪುಸ್ತಕವನ್ನು ನಮೋ ಓದಬೇಕಿದೆ ಅಂತ ನಮಗನ್ನಿಸುತ್ತೆ. ಇದು ಬಂಡವಾಳಶಾಹಿ ಚಮಚಾಗಿರಿಯ ಕುರಿತಾಗಿ ಬರೆದ ಪುಸ್ತಕ. ಈ ವಿಷಯದಲ್ಲಿ ನಮೋ ಸಾಹೇಬ ಡಬಲ್ ಡಿಗ್ರಿ ಮುಗಿಸಿರೋದರಿಂದ ಈ ಪುಸ್ತಕದ ಅವಶ್ಯಕತೆ ಆತನಿಗೆ ಇಲ್ಲದೇ ಇರಬಹುದು.

ತನ್ನನ್ನು ತಾನು ಮುತ್ಸದ್ದಿ ಅಂತ ಬಿಂಬಿಸಿಕೊಳ್ಳೋ ಶೋಕಿ ಆತನಿಗಿರುವುದರಿಂದ ಗೋವಿಂದ ಪನ್ಸಾರೆಯವರ 'ಹೂ ವಾಸ್ ಶಿವಾಜಿ' (ಶಿವಾಜಿ ಯಾರು) ಪುಸ್ತಕವನ್ನು ಆರನೇ ಆಯ್ಕೆಯಾಗಿ ಶಿಫಾರಸ್ಸು ಮಾಡಬಹುದು. ಪ್ರಸಿದ್ಧ ಐತಿಹ್ಯ ಆಡಳಿತಗಾರನನ್ನು ಕೇಸರಿ ಛಾಯೆಯಿಂದ ಹೊರಗಿಟ್ಟು ವಸ್ತುನಿಷ್ಠವಾಗಿ ನೋಡುವ ಕೃತಿ ಇದು. ಅಂದ ಹಾಗೆ, ಈ ಪುಸ್ತಕ ಬರೆದ ಕಾರಣಕ್ಕೆ ಪನ್ಸಾರೆಯವರನ್ನು ಗುಂಡಿಟ್ಟು ಕೊಲೆ ಮಾಡಿರುವುದರಿಂದ ಇದು 'ಅಪಾಯಕಾರಿ' ಪುಸ್ತಕವೇ ಸರಿ!

ನಮೋ ಮತ್ತವನ ಕೇಸರಿ ಬ್ರಿಗೇಡಿನ ಹಿಂದೂತ್ವವೇ ಬಂಡವಾಳ. ಅಂತಹ ಅಪ್ರತಿಮ 'ಶ್ರೇಷ್ಠಭ್ರಮೆ'ಯ ಸಿದ್ಧಾಂತದ ಬಗ್ಗೆ ಕೊಳಕು ಹಿಂದೂತ್ವ–ದ್ವೇಷಿಗಳು ಏನೆಲ್ಲಾ ವಿಷಕಾರುತ್ತಾರೆ ಅಂತ ತಿಳಿದುಕೊಳ್ಳುವ ಸಲುವಾಗಿ ಪೆಟ್ರೀಷಿಯಾ ಜೆಫೆರ್ರಿ ಮತ್ತು ರೋಜರ್ ಜೆಫೆರ್ರಿ ಬರೆದಿರುವ 'ಕಂಫ್ರಾಂಟಿಂಗ್ ಸ್ಯಾಫ್ರನ್ ಡೆಮೊಗ್ರಾಫಿ' (ಕೇಸರಿ ಜನವಿವರಣೆಯನ್ನು ಎದುರಿಸುವ ಬಗೆ) ಪುಸ್ತಕವನ್ನು ನಮೋ ಒಮ್ಮೆ ಓದಲೇಬೇಕು.

ಈ ಪಟ್ಟಿಯನ್ನು ಓದಿದ ಪ್ರತಿಯೊಬ್ಬ 'ದೇಶಭಕ್ತ'ನೂ ಕನಿಷ್ಠ ಹತ್ತು ಜನರಿಗಾದರೂ ಇದನ್ನು ಓದುವಂತೆ ಶಿಫಾರಸ್ಸು ಮಾಡಬೇಕು. ಹಾಗೆ ಮಾಡಿದವರಿಗೆ, ವ್ಯಾವಹಾರಿಕ ಮತ್ತು ಪ್ರೀತಿ ತುಂಬಿದ ಗೌರವಗಳನ್ನು ನೀಡಲಾಗುತ್ತದೆ. ಹಾಗೆ ಮಾಡದಿದ್ದರೆ, ಅಂತವರಿಗೆ 'ದೇಶದ್ರೋಹಿ'ಗಳು ಅನ್ನೋ ಹಣೆಪಟ್ಟಿ ಕಟ್ಟಿ ಪಬ್ಲಿಕ್ ಟಿವಿಯ ಕಡ್ಡಿ ರಂಗನ ಶೋವನ್ನು ಒಂದು ವಾರದ ಕಾಲ ಪ್ರತಿದಿನ ನೋಡುವ ಶಿಕ್ಷೆ ಕಾದಿರುತ್ತೆ!

ನಮೋ ಓದಬೇಕಾದ ಎಂಟನೇ ಪುಸ್ತಕವೊಂದಿದೆ. ಅದು 'ದಿ ಆರ್ಮ್‌ಚೇರ್ ರೆವೊಲ್ಯೂಷನರಿ' (ಆರಾಮಕುರ್ಚಿ ಕ್ರಾಂತಿಕಾರಿ). ಈ ಪುಸ್ತಕದ ಲೇಖಕನಿಗೂ ನಮೋನಂತೆ ಸಿನಿಮಾ ಸ್ಟಾರ್‌ಗಳೆಂದರೆ ಇಷ್ಟ ಎನ್ನುವ ಆಯಾಮದಿಂದ ಅದನ್ನಾತ ಓದಬೇಕೆ ವಿನಾಃ ಯಾವುದೇ ಕಾರಣಕ್ಕೂ ಅದರ ಲೇಖಕ ದೇಶವಿಭಜನೆಯ ನಂತರ ಪಕ್ಕದ ರಾಷ್ಟ್ರದ ಪ್ರಜೆ–ಯಾಗಿ ಹಂಚಿಕೆಯಾದ, ಅರ್ಥಾತ್ ಪಾರಿಕರ್ ಪರಿಭಾಷೆಯ 'ನರಕ'ದ ನಿವಾಸಿಯಾದ, ಅನ್ನೋ ಸತ್ಯವನ್ನು ಮನಸ್ಸಿಗೆ ತಂದುಕೊಳ್ಳಲೇಬಾರದು. ಈ ಪುಸ್ತಕದಲ್ಲಿ ಸಿನಿಮಾ ನಟರೂ ಸೇರಿದಂತೆ ಆಗಿನ ಕಾಲಘಟ್ಟದ ಮಹಾನ್ ವ್ಯಕ್ತಿಚಿತ್ರಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಈ ಲೇಖಕ ಮಾತ್ರ ಕಟ್ಟಿಕೊಡಲು ಸಾಧ್ಯ ಎನ್ನುವಷ್ಟು ಅದ್ಭುತವಾಗಿ ಚಿತ್ರಿಸಲಾಗಿದೆ. ಅಷ್ಟಕ್ಕೂ ಆ ಪುಸ್ತಕ ಬರೆದಿರೋದು ಸಾದತ್ ಹಸನ್ ಮಾಂಟೊ.

ನಾವು ಇಷ್ಟಪಟ್ಟು ಹೇಳುವ ಆದರೆ ನಮೋ ಸಾಹೇಬನಿಗೆ ತುಂಬಾನೇ ಕಷ್ಟವೆನಿಸುವ ಒಂಬತ್ತನೇ ಪುಸ್ತಕದ ಹೆಸರು 'ಗುಜರಾತ್ ಫೈಲ್ಸ್', ಇದರಲ್ಲಿ ಆತನ ಬಲಗೈ ಬಂಟ ಅಮಿತ್ ಶಾನದ್ದೇ ಪ್ರಧಾನ ಪಾತ್ರಪೋಷಣೆ. ಶಾಗೆ ಒಂದಷ್ಟು 'ಅವ್ಯಕ್ತ' ಕಾರಣಗಳಿಗಾಗಿ ಈ ಪುಸ್ತಕ ಇಷ್ಟವಿಲ್ಲ ಅನ್ನೋ ವರ್ತಮಾನಗಳು ನಮಗೆ ಬಂದು ತಲುಪಿವೆ. ಅಷ್ಟೇ ಅಲ್ಲ, ಈ ಪುಸ್ತಕದ ಆಸುಪಾಸಿನಲ್ಲಿ ಸುಳಿದಾಡಿದವರನ್ನು ಕಂಡರೆ ಸಾಕು ಆತ ಕೆಂಡಮಂಡಲ ಆಗಿಬಿಡುತ್ತಾನಂತೆ. ಆದ್ದರಿಂದ ಮೋದಿ ಸಾಹೇಬ ತನ್ನ ಈ ಬಂಟನಿಗೆ ಗೊತ್ತಾಗದಂತೆ ಈ ಪುಸ್ತಕವನ್ನು ಓದಿದರೆ ಆತನಿಗೇ ಒಳಿತು.

ಇನ್ನು ಕಟ್ಟಕಡೆಯ ಹಾಗೂ ಹತ್ತನೇ ಪುಸ್ತಕ ಅಂದರೆ ನಮೋ ಸಾಹೇಬನ ಅತ್ಯಾಪ್ತ ಲೇಖಕಿ ತೀಸ್ತಾ ಸೆಟ್ಲ್‌ವಾಡರು ಮಹಾತ್ಮ ಗಾಂಧಿ ಹತ್ಯೆಯ ಕುರಿತಾಗಿ ದಾಖಲುಗೊಳಿಸಿದ 'ಬಿಯಾಂಡ್ ಡೌಟ್' (ಕಿಂಚಿತ್ತೂ ಸಂಶಯ ಇಲ್ಲದಂತೆ) ಪುಸ್ತಕ. ಓಹ್ ಕ್ಷಮಿಸಿ, ಇದು ರಾಹುಲ್ ಗಾಂಧಿ ಓದಬೇಕಾದ ಪುಸ್ತಕಗಳ ಪಟ್ಟಿಯಲ್ಲಿರಬೇಕಾದ ಕೃತಿ! ಗಾಂಧಿಯನ್ನು ಕೊಂದವರು ಯಾರೆಂಬುದನ್ನು ನಮೋ ಸಾಹೇಬನಿಗೆ ಮತ್ತೊಮ್ಮೆ ಹೇಳುವ ಅಗತ್ಯವೇ ಇಲ್ಲ ಬಿಡಿ...

ಈ ಪಟ್ಟಿಯನ್ನು ಓದಿದ ಪ್ರತಿಯೊಬ್ಬ 'ದೇಶಭಕ್ತ'ನೂ ಕನಿಷ್ಠ ಹತ್ತು ಜನರಿಗಾದರೂ ಇದನ್ನು ಓದುವಂತೆ ಶಿಫಾರಸ್ಸು ಮಾಡಬೇಕು. ಹಾಗೆ ಮಾಡಿದವರಿಗೆ, ವ್ಯಾವಹಾರಿಕ ಮತ್ತು ಪ್ರೀತಿ ತುಂಬಿದ ಗೌರವಗಳನ್ನು ನೀಡಲಾಗುತ್ತದೆ. ಹಾಗೆ ಮಾಡದಿದ್ದರೆ, ಅಂತವರಿಗೆ 'ದೇಶದ್ರೋಹಿ'ಗಳು ಅನ್ನೋ ಹಣೆಪಟ್ಟಿ ಕಟ್ಟಿ ಪಬ್ಲಿಕ್ ಟಿವಿಯ ಕಡ್ಡಿ ರಂಗನ ಶೋವನ್ನು ಒಂದು ವಾರದ ಕಾಲ ಪ್ರತಿದಿನ ನೋಡುವ ಶಿಕ್ಷೆ ಕಾದಿರುತ್ತೆ!

(ಕೃಪೆ: ಗೌರಿ ಲಂಕೇಶ್ ಪತ್ರಿಕೆ)


ಮೋದಿ ಸಾಹೇಬ ಓದಲೇಬೇಕಾದ ಪುಸ್ತಕಗಳು


1. 'ದಿ ಮಿಥ್ ಆಫ್ ದಿ ಹೋಲಿ ಕೌ' (ಗೋವು ಪವಿತ್ರ ಎಂಬ ಮಿಥ್ಯ) * – ಡಿ.ಎನ್.ಝಾ
2. 'ದಲಿತ್ಸ್ ಅಂಡ್ ದಿ ಹೋಲಿ ಕೌ' (ದಲಿತರು ಮತ್ತು ಪವಿತ್ರ ಗೋವು) – ಮೀರಾ ವೇಲಾಯುಧನ್
3. 'ದಿ ಕಾಶ್ಮೀರ್ ಡಿಸ್ಪ್ಯೂಟ್' (ಕಾಶ್ಮೀರಿ ವಿವಾದ) – ಎ.ಜಿ. ನೂರಾನಿ
4. 'ದಿ ಪೂರರ್ ನೇಷನ್ಸ್' (ಬಡ ದೇಶಗಳು) – ವಿಜಯ ಪ್ರಸಾದ್
5. 'ಗ್ಯಾಸ್ ವಾರ್ಸ್' (ಅನಿಲ ಯುದ್ಧ) – ಪರಂಜೋಯ್ ಗುಹಾ ಠಾಕುರ್ತಾ
6. 'ಹೂ ವಾಸ್ ಶಿವಾಜಿ' (ಶಿವಾಜಿ ಯಾರು) * – ಗೋವಿಂದ ಪನ್ಸಾರೆ
7. 'ಕಂಫ್ರಾಂಟಿಂಗ್ ಸ್ಯಾಫ್ರನ್ ಡೆಮೊಗ್ರಾಫಿ' (ಕೇಸರಿ ಜನವಿವರಣೆಯನ್ನು ಎದುರಿಸುವ ಬಗೆ) – ಪೆಟ್ರೀಷಿಯಾ ಜೆಫೆರ್ರಿ ಮತ್ತು ರೋಜರ್ ಜೆಫೆರ್ರಿ
8. 'ದಿ ಆರ್ಮ್‌ಚೇರ್ ರೆವೊಲ್ಯೂಷನರಿ' (ಆರಾಮಕುರ್ಚಿ ಕ್ರಾಂತಿಕಾರಿ).– ಸಾದತ್ ಹಸನ್ ಮಾಂಟೊ.
9. 'ಗುಜರಾತ್ ಫೈಲ್ಸ್' – ರಾಣಾ ಅಯ್ಯೂಬ್
10. 'ಬಿಯಾಂಡ್ ಡೌಟ್' (ಕಿಂಚಿತ್ತೂ ಸಂಶಯ ಇಲ್ಲದಂತೆ) – ತೀಸ್ತಾ ಸೆಟ್ಲ್‌ವಾಡ್

(ಮೋದಿ ಓದುತ್ತಾರೋ ಬಿಡುತ್ತಾರೋ ನೀವಂತೂ ಓದಿ. ಈ ಪುಸ್ತಕ ಬೇಕಿದ್ದವರು ಈ ಕೆಳಗಿನ ವಿಳಾಸಗಳಿಗೆ ಭೇಟಿ ಕೊಡಿ ಅಥವಾ ಪತ್ರ/ಇ-ಮೈಲ್ ಬರೆಯಿರಿ.!)

* ಈ ಎರಡು ಪುಸ್ತಕಗಳು ಕನ್ನಡದಲ್ಲಿ ಲಭ್ಯ ಇವೆ

ಪುಸ್ತಕಪ್ರೀತಿ ಡಿಸ್ಟ್ರಿಬ್ಯೂಟರ್ಸ್
4 ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ
ಬೆಂಗಳೂರು – 560 079
Email: pustakapreethi@gmail.com
Phone : 90360 82005,
080– 2349 4488 ಅಥವಾ
Leftword Mayday Bookstore
http://mayday.leftword.com/





ಒಳ್ಳೆಯ ದಿನಗಳೆಂದರೆ ಬಡವರಿಗೆ 5ಶೇ. ಪಾಯಿಂಟುಗಳಷ್ಟು ಹೆಚ್ಚು ಹಣದುಬ್ಬರ !

ಹಣದುಬ್ಬರ ಒಂದೊಮ್ಮೆ 8ಶೇ. ಇತ್ತು. ಈಗ 5.1ಶೇ.ಕ್ಕೆ ಇಳಿದಿದೆ. ಆದ್ದರಿಂದ ಬಡ್ಡಿದರ ಇಳಿಯಬೇಕು ಎಂದು ಕಾರ್ಪೊರೇಟ್ ಕುಳಗಳು ನಿರೀಕ್ಷಿಸುತ್ತಿದ್ದರೆ, ಇನ್ನೊಂದೆಡೆಯಲ್ಲಿ ಕೇಂದ್ರ ಕಾರ್ಮಿಕ ಸಂಘಗಳು ಬೆಲೆಯೇರಿಕೆ ತಡೆಯಿರಿ ಎಂದೇ ಮುಷ್ಕರ ಮಾಡುತ್ತವೆ. ಇದು ಸರಿಯೇ ಎಂಬುದು ಕಾರ್ಪೊರೇಟ್ ಮಾಧ್ಯಮಗಳಲ್ಲಿ ಕೇಳುತ್ತಿರುವ ಪ್ರಶ್ನೆ. ಅದೇ-ಕೋ ಈ ಮಾಧ್ಯಮದಲ್ಲಿಯೇ ಒಂದು ಪತ್ರಿಕೆಗೆ ಬಹುಶಃ ಮುಷ್ಕರದ ಕರೆಗೆ 18 ಕೋಟಿ ಕಾರ್ಮಿಕರು ಸ್ಪಂದಿಸಿದ ಮೇಲೆ ಕಾರ್ಮಿಕ ಸಂಘಗಳ ಬೇಡಿಕೆಯಲ್ಲಿ ದಮ್ ಇರಬೇಕು ಎಂದನಿಸಿರಬೇಕು. 'ಮಿಂಟ್' ಪತ್ರಿಕೆಯ ಪತ್ರಕರ್ತರೊಬ್ಬರು ಲಭ್ಯವಿರುವ ವಿವಿಧ ಸ್ವರೂಪಗಳ ಮಾಹಿತಿಗಳ ಆಧಾರದಲ್ಲಿ ಮಾಡಿರುವ ವಿಶ್ಲೇಷಣೆ ಅವರಿಗೆ ಬಹಳ ಕುತೂಹಲಕಾರಿಯಾದ ಫಲಿತಾಂಶ ನೀಡಿದೆ.

ಹಣದುಬ್ಬರ ದರದಲ್ಲೂ ವರ್ಗ ವ್ಯತ್ಯಾಸವಿದೆ, ಬಡವರಿಗೆ ಮತ್ತು ಶ್ರೀಮಂತರಿಗೆ ಅದು ಭಿನ್ನವಾಗಿದೆ ಎಂಬ ಸತ್ಯವನ್ನು ಅವರು ಈ ವಿಶ್ಲೇಷಣೆಯ ಮೂಲಕ ಕಂಡುಕೊಂಡಿದ್ದಾರೆ.

ಇದಕ್ಕೆ ಕಾರಣ ಸ್ಪಷ್ಟ. ಬಡವರು ತಮ್ಮ ಆದಾಯದ ಬಹುಭಾಗವನ್ನು ಆಹಾರದ ಮೇಲೆ ವ್ಯಯಿಸಬೇಕಾಗುತ್ತದೆ. ಶ್ರೀಮಂತರ ಬೃಹತ್ ಆದಾಯದಲ್ಲಿ ಆಹಾರಕ್ಕೆ ಖರ್ಚು ಮಾಡುವ ಶೇಕಡಾವಾರು ಸಹಜವಾಗಿಯೇ ಬಡವರಿಗಿಂತ ಬಹಳ ಕಡಿಮೆ. ಆದರೆ ನವ-ಉದಾರವಾದಿ ಆಳ್ವಿಕೆಯಲ್ಲಿ ಆಹಾರದ ಬೆಲೆಯೇರಿಕೆ, ಶ್ರೀಮಂತರು ಬಳಸುವ ಸಾಮಗ್ರಿಗಳ ಬೆಲೆಗಳ ಏರಿಕೆಗಿಂತ ಬಹಳ ಹೆಚ್ಚಿದೆ. ಬೇಳೆ ಕಾಳುಗಳ, ಆಹಾರಧಾನ್ಯಗಳ ತರಕಾರಿಗಳ ಬೆಲೆಯೇರಿಕೆ ಬಡವರನ್ನು ಹೆಚ್ಚಾಗಿ ತಟ್ಟುತ್ತದೆ, ಸ್ಮಾರ್ಟ್ ಫೋನ್‌ಗಳ ಅಥವ ವಿಮಾನ ಪ್ರಯಾಣದ ದರ ಇತ್ಯಾದಿಗಳ ಇಳಿಕೆಯಿಂದ ಸರಕಾರದ ಲೆಕ್ಕಾಚಾರದ ಪ್ರಕಾರ ಹಣದುಬ್ಬರ ದರ ಇಳಿದರೂ ಬಡವರಿಗೆ ಅದರಿಂದೇನೂ ಪ್ರಯೋಜನವಿಲ್ಲ.

ಮೋದಿ ಸರಕಾರ ಮೇ 2014ರಲ್ಲಿ ಅಧಿಕಾರಕ್ಕೆ ಏರಿದ ನಂತರ ಬೆಲೆಯೇರಿಕೆ ಪ್ರಮಾಣ ಗ್ರಾಮೀಣ ಬಡವರಿಗೆ ನಗರದ ಶ್ರೀಮಂತರಿಗಿಂತ ಐದು ಶೇಕಡಾ ಪಾಯಿಂಟುಗಳಷ್ಟು ಹೆಚ್ಚು ಇದೆ, ಜುಲೈ 2016ರ ವೇಳೆಗೆ ಈ ಅಂತರ ಇದುವರೆಗಿನ ಗರಿಷ್ಟ ಮಟ್ಟಕ್ಕೆ ತಲುಪಿದೆ ಎಂದು ಅವರ ವಿಶ್ಲೇಷಣೆ 'ಹೇಳುತ್ತದೆಯಂತೆ.

ಅಂದರೆ 'ಒಳ್ಳೆಯ ದಿನಗಳು' ಖಂಡಿತಾ ಬಂದಿವೆ, ಆದರೆ ಅದು ಬಂದಿರುವುದು ಶ್ರೀಮಂತ ವಿಭಾಗಗಳಿಗೆ ಮಾತ್ರ ಎಂದು ಕಾರ್ಮಿಕ ಸಂಘಗಳು, ಎಡಪಕ್ಷಗಳು ಹೇಳುತ್ತಿರುವುದು ನಿಜ ಎಂಬುದನ್ನು ಇದೂ ತೋರಿಸುತ್ತದೆ.

ಈ ನಡುವೆ ಒಂದು 'ಸಂಶೋಧನಾ ಕೇಂದ್ರ'ದ ಹೊಚ್ಚಹೊಸ ಸರ್ವೆಯ ಪ್ರಕಾರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂದು ಭಾವಿಸುವವರ ಸಂಖ್ಯೆ ಮೇ 2014ರಲ್ಲಿ 64 ಶೇ. ಇದ್ದದ್ದು ಈಗ 80ಶೇ.ಕ್ಕೆ ಏರಿದೆ! ಪ್ರಧಾನ ಮಂತ್ರಿಗಳ ಅಭಿಮಾನಿಗಳ ಪ್ರಮಾಣವೂ 78ಶೇ.ದಿಂದ 81ಶೇ.ಕ್ಕೆ ಏರಿದೆ. ಈ ಸಂಶೋಧನಾ ಕೇಂದ್ರ ಈ ಸರ್ವೆಯನ್ನು ಯಾರ ನಡುವೆ ಮಾಡಿರಬಹುದು ಎಂಬುದರ ಬಗ್ಗೆ ಈ ಮೇಲಿನ ಹಣದುಬ್ಬರದ ವಿಶ್ಲೇಷಣೆಯ ನಂತರ ಯಾವುದೇ ಸಂದೇಹ ಉಳಿಯಲಾರದು.

ಈ ಮಧ್ಯೆ ತರಕಾರಿಗಳ ಬೆಲೆಗಳಲ್ಲಿ ತುಸು ಇಳಿಕೆಯಾಗಿರುವುದರಿಂದ ಹಣದುಬ್ಬರ ದರ ಇಳಿದಿದೆ, 'ಬಡ್ಡಿದರವೂ ಇಳಿಯಬಹುದು ಎಂದು ಕಾರ್ಪೊರೇಟ್ ಮಂದಿ ನಿರೀಕ್ಷಿಸುತ್ತಿರುವಾಗಲೇ **ಆಗಸ್ಟ್ ತಿಂಗಳಲ್ಲಿ ಸಗಟು ಬೆಲೆ ಆಧಾರಿತ ಹಣದುಬ್ಬರ 3.74ಶೇ.ಕ್ಕೆ ಏರಿದೆ ಎಂದು ವರದಿ ಬಂದಿದೆ. ಇದು ಆಗಸ್ಟ್ 2015ರಲ್ಲಿ –2.43ಶೇ. ಇತ್ತು. ಅಂದರೆ ಸಗಟು ಬೆಲೆ ಸೂಚ್ಯಂಕದ ಆಧಾರದಲ್ಲಿ ಹಣದುಬ್ಬರ ದರ ಕಳೆದ ವರ್ಷಕ್ಕೆ ಹೋಲಿಸಿದರೆ 6ಶೇ. ಹೆಚ್ಚಿದೆ.**

ಸಂಬಳ ಹೆಚ್ಚಳದಲ್ಲಂತೂ ಭಾರೀ ತಾರತಮ್ಯ

ಇದು ಸಂಬಳ ಹೆಚ್ಚಳದ ವಿಷಯದಲ್ಲೂ ಕಂಡು ಬಂದಿದೆ. ಕಾರ್ನ್ ಫೆರಿ ಎಂಬ ಸಂಸ್ಥೆಯ ಹೇ ಗ್ರೂಪ್ ವಿಭಾಗದ ವಿಶ್ಲೇಷಣೆಯ ಪ್ರಕಾರ 2008ರಿಂದ ಆರಂಭವಾದ ಆರ್ಥಿಕ ಹಿಂಜರಿತದ ಅವಧಿಯಲ್ಲಿ ಚೀನಾ ಅತಿ ಹೆಚ್ಚು , ಅಂದರೆ 10.6ಶೇ. ನಿಜವೇತನ ಹೆಚ್ಚಳ ದಾಖಲಿಸಿದರೆ ಭಾರತದಲ್ಲಿ ಅದು ಕೇವಲ 0.2ಶೇ. ಅದೂ ಇದೆ ಅವಧಿಯಲ್ಲಿ ಅದರ ಜಿಡಿಪಿಯಲ್ಲಿ 63.8ಶೇ. ವೃದ್ಧಿಯಾಗಿರುವಾಗ! ಅಂದರೆ ಈ ಹೆಚ್ಚಳದಲ್ಲೂ ಹಣದುಬ್ಬರದಲ್ಲಿರುವ, ಬಹುಶಃ ಅದಕ್ಕಿಂತಲೂ ಹೆಚ್ಚಿನ ತಾರತಮ್ಯ ಕಂಡು ಬಂದಿದೆ. **ಹೇಗ್ರೂಪ್ ವರದಿಯ ಪ್ರಕಾರ ಭಾರತದಲ್ಲಿನ ವೇತನ ಹೆಚ್ಚಳ ಅತ್ಯಂತ ಅಸಮಾನವಾಗಿದೆ. ಆರ್ಥಿಕ ಹಿಂಜರಿತ ಆರಂಭವಾದ ಮೇಲಿನ ಈ ಎಂಟು ವರ್ಷಗಳಲ್ಲಿ ಅತ್ಯಂತ ಮೇಲಿನ 30ಶೇ. ಮಂದಿಯ ಸಂಬಳಗಳಲ್ಲಿ ಏರಿಕೆಯಾಗಿದ್ದರೆ,ಅತ್ಯಂತ ಕೆಳಗಿನ 30ಶೇ. ಮಂದಿಯ ನಿಜ ಸಂಬಳಗಳು ಏರುವ ಬದಲು ಇಳಿದಿವೆ!**

ದೊಡ್ಡ ಹುದ್ದೆಗಳಲ್ಲಿರುವವರ ಸಂಬಳಗಳು ಅಂತರ್ರಾಷ್ಟ್ರೀಯ ಮಟ್ಟವನ್ನು ತಲುಪುತ್ತಿವೆ, ಆದರೆ ಸಾಮಾನ್ಯ ಕಾರ್ಮಿಕರ ಸಂಬಳಗಳು ದೇಶೀ ಮಟ್ಟದಲ್ಲೂ ಉಳಿದಿಲ್ಲ.

ನಿಜ ಇದಕ್ಕೆ ಕೇವಲ ಅಚ್ಛೇದಿನ್ ಧೋರಣೆಗಳು ಕಾರಣವಲ್ಲ, ಕಳೆದ 25 ವರ್ಷಗಳಿಂದ ಅನುಸರಿಕೊಂಡು ಬಂದಿರುವ ಎಲ್‌ಪಿಜಿ ಧೋರಣೆಗಳೇ ಕಾರಣ. ಆದರೆ ಈ 'ಅಚ್ಛೇದಿನ್'ಗಳು ಆ ಧೋರಣೆಯನ್ನೇನೂ ಬದಲಿಸಿಲ್ಲ, ಬದಲಿಗೆ ಇನ್ನಷ್ಟು ರಭಸದಿಂದ ಮುಂದುವರೆಸಿರುವುದು ಖಂಡಿತಾ ಕಾರಣವಾಗಿದೆ.

ಕನಿಷ್ಟ ಕೂಲಿ ನಿರ್ಧಾರವನ್ನೂ ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡಿಸಲು ಸರಕಾರ ಮುಂದಾಗಿರುವುದು ಬೇರೇನನ್ನು ಸೂಚಿಸುತ್ತದೆ?

ಸಾಮೂಹಿಕ ಅತ್ಯಾಚಾರ, ಗೋರಕ್ಷಣೆಯ ಹೆಸರಲ್ಲಿ ಗೂಂಡಾಗಿರಿ ಈಗ ಕ್ಷುಲ್ಲಕ ವಿಷಯಗಳು!

ಹೀಗೆಂದು ಹೇಳಿರುವವರು ಹರಿಯಾಣದಲ್ಲಿ 'ಒಳ್ಳೆಯ ದಿನ'ಗಳನ್ನು ತರಲು ಸಂಘ ಪರಿವಾರದವರು ನೇಮಿಸಿದ ಅಲ್ಲಿಯ ಮಾನ್ಯ ಮುಖ್ಯಮಂತ್ರಿಗಳು! ರಾಜ್ಯದ ಮೇವತ್ ಪ್ರದೇಶದ ಹಳ್ಳಿಯೊಂದರಲ್ಲಿ ಬಡ ಮುಸ್ಲಿಂ ಕುಟುಂಬದ ಇಬ್ಬರನ್ನು ಕೊಂದು ಒಬ್ಬ ಮಹಿಳೆ ಮತ್ತು ಒಬ್ಬ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಮತ್ತು ಅದರಿಂದ ಆಕ್ರೋಶಗೊಂಡ ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು ಇದೇ ಪ್ರದೇಶದಲ್ಲಿ ಈದ್ ಸಂದರ್ಭದಲ್ಲಿ ಬಿರಿಯಾನಿಯಲ್ಲಿ ಗೋಮಾಂಸ ಇದೆ ಎಂಬ ಸ್ವಯಂನೇಮಿತ ಗೋರಕ್ಷಕರ ಶಂಕೆಯಿಂದ ಪೋಲೀಸರ ರೇಡ್‌ಗಳನ್ನು ಮಾಡಿಸಿ ಬಡ ವ್ಯಾಪಾರಿಗಳಿಗೆ ಭಾರೀ ನಷ್ಟ ಉಂಟು ಮಾಡಿದ ಘಟನೆಗಳು ಕ್ಷುಲ್ಲಕ ಘಟನೆಗಳು ಎಂದು ಹೇಳಿರುವುದಾಗಿ ವರದಿಯಾಗಿದೆ.

ಮೇವತ್ ಸಾಮೂಹಿಕ ಅತ್ಯಾಚಾರದ ಘಟನೆಯ ಬಗ್ಗೆ ರಾಜ್ಯದ ಪ್ರತಿಷ್ಠಿತರ ಒಂದು ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿಯಾದಾಗ ಸಿಬಿಐ ತನಿಖೆಗೆ ಒಪ್ಪಿದ್ದ ಸುದ್ದಿಯ ಹಿನ್ನೆಲೆಯಲ್ಲಿ ಪತ್ರಕರ್ತರು ಹರಿಯಾಣ ರಾಜ್ಯ ರಚನೆಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಅವರನ್ನು ಕೇಳಿದಾಗ ಈ ಬಗ್ಗೆ ತಲೆ ತಾನು ಕೆಡಿಸಿಕೊಳ್ಳುವುದಿಲ್ಲ ಎಂದು ಉಡಾಫೆಯ ಮಾತುಗಳನ್ನಾಡಿರುವುದು ಪ್ರಜಾಪ್ರಭುತ್ವವಾದಿಗಳಲ್ಲಿ ಆಕ್ರೋಶ ಉಂಟು ಮಾಡಿದೆ.

ರಾಜ್ಯದಲ್ಲಿ ಅತ್ಯುನ್ನತ ಸಂವಿಧಾನಿಕ ಹುದ್ದೆಯಲ್ಲಿರುವ ಒಬ್ಬ ವ್ಯಕ್ತಿಯ ಇಂತಹ ಉಡಾಫೆಯ ಮಾತುಗಳು ಅತ್ಯಂತ ಕಳವಳಕಾರಿ ಎಂದು ಸಿಪಿಐ(ಎಂ) ಹರಿಯಾಣ ರಾಜ್ಯ ಸಮಿತಿ ಹೇಳಿದೆ. ಇದು ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಬಗ್ಗೆ ಆರೆಸ್ಸೆಸ್/ಬಿಜೆಪಿಯ ಮಾನಸಿಕತೆಗೆ ಅನುಗುಣವಾಗಿದೆ ಎಂದು ಅದು ಹೇಳಿದೆ. ಸಂವಿಧಾನಿಕ ನೀತಿಯನ್ನು ಮತ್ತು ಆಡಳಿತದ ಹೊಣೆಗಾರಿಕೆಯನ್ನು ಉಲ್ಲಂಘಿಸಿರುವ ಈ ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ರಾಜ್ಯಸಮಿತಿ ಆಗ್ರಹಿಸಿದೆ.

ಇನ್ನೊಂದು ಗುಜರಾತ್ ಮಾದರಿ! ತಲಾಟಿ ಕೆಲಸಕ್ಕೆ ಎಂಬಿಎಗಳು, ಟೆಕ್ಕಿಗಳು ನೇಮಕ

ಗುಜರಾತ್ ಸರಕಾರ ಇತ್ತೀಚೆಗೆ ನೇಮಕಾತಿ ಮಾಡಿರುವ ತಲಾಟಿ(ಗ್ರಾಮೀಣ ಕಚೇರಿಗಳಲ್ಲಿ ಮೂರನೇ ದರ್ಜೆ ನೌಕರರು) ಹುದ್ದೆಗೆ ವಿದ್ಯಾರ್ಹತೆ 12 ನೇ ತರಗತಿ ಪಾಸ್. ಆದರೆ ಈ ಹುದ್ದೆಗೆ ಆರಿಸಿದ 2343 ಮಂದಿಯಲ್ಲಿ ಸುಮಾರಾಗಿ ಎಲ್ಲರೂ ಪದವೀಧರರೇ. 950 ಮಂದಿ ಇಂಜಿನಿಯರುಗಳು, 200 ಮಂದಿ ಎಂಬಿಎ, ಎಂಸಿಎ, ಬಿ.ಫಾರ್ಮ ಪದವೀಧರರು, 12 ಮಂದಿ ಆಯುರ್ವೇದ ಮತ್ತು ಹೋಮಿಯೋಪತಿ ಡಾಕ್ಟರುಗಳು ಎಂದು ಟೈಮ್ಸ್ ಆಫ್ ಇಂಡಿಯಾ (ಸಪ್ಟಂಬರ್11) ವರದಿ ಮಾಡಿದೆ.

ಇವರೆಲ್ಲ ಕಷ್ಟಪಟ್ಟು ಅಧ್ಯಯನ ಮಾಡಿದವರೇ. ಆದರೂ ಇವರಲ್ಲಿ 15 ಮಂದಿಗೆ ಸಾಂಕೇತಿಕವಾಗಿ ಕೆಲಸದ ನೇಮಕಾತಿ ಪತ್ರಗಳನ್ನು ವಿತರಿಸುವ ಸಮಾರಂಭದಲ್ಲಿ ಹೊಸ ಮುಖ್ಯಮಂತ್ರಿಗಳು 'ಕಷ್ಟಪಟ್ಟು ದುಡಿಯಿರಿ' ಎಂದು ಉಪದೇಶ ನೀಡಿದ್ದು ಹಾಸ್ಯಾಸ್ಪದವಾಗಿತ್ತು ಎಂದು ವರದಿಗಾರ ಕಪಿಲ್ ದವೆ ಬರೆದಿದ್ದಾರೆ. ಈ ಹುದ್ದೆಗೆ 10ಲಕ್ಷ ಅರ್ಜಿಗಳು ಬಂದಿದ್ದವು ಎಂದು ಅವರು ಹೇಳಿದ್ದಾರೆ.

ನೇಮಕಾತಿ ಪಡೆದವರಲ್ಲಿ ಹೆಚ್ಚಿನವರು ತಮಗೆ ಉತ್ತಮ ಅವಕಾಶ ದೊರೆತರೆ ಈ ಕೆಲಸ ಬಿಡುತ್ತೇವೆ, ಸರಕಾರೀ ವಲಯದಲ್ಲಾಗಲೀ, ಖಾಸಗೀ ವಲಯದಲ್ಲಾಗಲೀ ಬೇರೆ ಕೆಲಸ ದೊರೆಯದ್ದರಿಂದ ಇದ-ಕ್ಕೆ ಅರ್ಜಿ ಹಾಕಿದ್ದೇವೆ ಎಂದು ಹೇಳಿರುವುದಾಗಿ ಈ ವರದಿಗಾರ ಬರೆದಿದ್ದಾರೆ.

ಇನ್ನು 12 ನೇ ತರಗತಿ ಪಾಸಾಗಿ ಉದ್ಯೋಗವನ್ನು ಅರಸುತ್ತಿರುವವರು ಮುಖ್ಯಮಂತ್ರಿಗಳ ಉಪದೇಶದಂತೆ 'ಕಷ್ಟಪಟ್ಟು ಕೆಲಸ ಮಾಡ'ಬೇಕಾದ ದಿನಗಳು ಎಂದು ಬರುತ್ತವೆ ಎಂದು ಕಾಯುತ್ತಿರಬೇಕು!

ಬಂಡ್ವಾಳವಿಲ್ಲದ ಬಡಾಯಿಗಳ ದಿನಗಳು 'ಜುಮ್ಲಾ' ನಂತರ ಈಗ 'ಕುತ್ತಿಗೆಗೆ ಕಟ್ಟಿದ ಬೀಸುಕಲ್ಲು'!

ಪ್ರಧಾನಮಂತ್ರಿಗಳಾಗುವ ಮೊದಲು ನಮ್ಮ ಪ್ರಧಾನ ಮಂತ್ರಿಗಳು ಪ್ರತಿಯೊಬ್ಬ ಭಾರತೀಯನ ಖಾತೆಗೆ 15ಲಕ್ಷ ರೂ. ಜಮಾ ಮಾಡುವ ಮಾತು ಆಡಿದ್ದು ಕೇವಲ 'ಚುನಾವೀ ಜುಮ್ಲಾ' ಅಂದರೆ 'ಚುನಾವಣಾ ಬಡಾಯಿ' ಅಷ್ಟೇ ಎಂದು ಆಳುವ ಪಕ್ಷದ ಅಧ್ಯಕ್ಷರು ಸ್ಪಷ್ಟೀಕರಣ ನೀಡಿದರು. ಈಗ 'ಅಚ್ಛೇ ದಿನ್'ಗಳು ಕೂಡ ಅಂತಹುದೇ ಒಂದು 'ಚುನಾವೀ ಜುಮ್ಲಾ' ಎಂದು ಮೋದಿ ಸರಕಾರದ ರಸ್ತೆ ಸಾರಿಗೆ, ಹೆದ್ದಾರಿ ಮತ್ತು ಹಡಗು ಮಂತ್ರಿಗಳ ಸ್ಪಷ್ಟೀಕರಣದಿಂದ ಸ್ಪಷ್ಟವಾಗುತ್ತಿದೆ.

2014 ರ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಹೋದೆಡೆಗಳೆಲ್ಲ ಆಗಿನ ಪ್ರಧಾನಿ ಪಟ್ಟಾಕಾಂಕ್ಷಿ 'ಒಳ್ಳೆಯ ದಿನಗಳು ಬರಲಿವೆ' ಎಂದು ತಪ್ಪದೇ ಹೇಳುತ್ತಿದ್ದರೂ ಅ ಪದ ಮೊದಲು ಬಳಸಿದವರು ಅವರಲ್ಲ, ವಾಸ್ತವವಾಗಿ ಹಿಂದಿನ ಯುಪಿಎ ಸರಕಾರದ ಪ್ರಧಾನ ಮಂತ್ರಿಗಳು .ಆದರೆ ಅದೀಗ ನಮ್ಮ ಕುತ್ತಿಗೆಯ ಒರಳಾಗಿ ಬಿಟ್ಟಿದೆ, ಏನು ಮಾಡುವುದು ಎಂದು ಈ ಮಂತ್ರಿಗಳು ಅಸಹಾಯಕತೆಯಿಂದ ಕಾರ್ಪೊರೇಟ್‌ಗಳ ಸಭೆಯೊಂದರಲ್ಲಿ ಹೇಳಿದ್ದಾರೆಂದು ವರದಿಯಾಗಿದೆ.

ವಾಸ್ತವವಾಗಿ ಈ ಪದ ಸಮುಚ್ಚಯ ದೇಶಕ್ಕೆ ಸ್ವಾತಂತ್ರ್ಯ ಬಂದ ಐದು ವರ್ಷಗಳಲ್ಲೇ ಹುಟ್ಟಿತು ಎಂದು ಈ ಮಂತ್ರಿಗಳ ಸ್ಪಷ್ಟೀಕರಣದ ನಂತರ ಈ ಬಗ್ಗೆ ಕುತೂಹಲದಿಂದ ಸಂಶೋಧನೆಗೆ ಇಳಿದ ಒಬ್ಬರು ಕಂಡುಕೊಂಡಿದ್ದಾರೆ(ಸ್ಕ್ರೋಲ್.ಇನ್, ಸಪ್ಟಂಬರ್ 15) 1952ರಲ್ಲಿ ಬಂದ ಆರ್.ಕೆ.ನಾರಾಯಣ್ ಅವರ ಒಂದು ಕತೆಯನ್ನು ಆಧರಿಸಿದ ಹಿಂದಿ ಚಿತ್ರ 'ಮಿ.ಸಂಪತ್'ನಲ್ಲಿ 'ಅಚ್ಛೇ ದಿನ್ ಆಯೇಂಗೆ ಹುರ್‍ರಾ'ಎಂಬ ಹಾಡು ಇತ್ತಂತೆ. ಪಂಡಿತ್ ಇಂದ್ರಚಂದ್ರ ಎಂಬವರು ಬರೆದದ್ದು, ಶಂಶಾದ್ ಬೇಗಂ ಮತ್ತು ಎಂಎಲ್.ವಸಂತಕುಮಾರಿ ಹಾಡಿದ್ದು. ಇದು ಮೋದಿ ಸರಕಾರದ ಮಂತ್ರಿವರ್ಯರಿಗೆ ಗೊತ್ತಿಲ್ಲದಿರಬಹದು. ಗೊತ್ತಿದ್ದರೂ ಅದನ್ನು ಹೇಳುವಂತಿಲ್ಲ ಏಕೆಂದರೆ ಅದೂ 'ಒಳ್ಳೆಯ ದಿನಗಳು ಬರುತ್ತವೆ' ಎಂಬ ಆಶ್ವಾಸನೆಯನ್ನು, ಮಾತು ಮತ್ತು ಕೃತಿಯ ನಡುವಿನ ಕಂದರವನ್ನು ಗೇಲಿ ಮಾಡಿದ್ದ ಹಾಡೇ ಆಗಿತ್ತು.


ಅಂತೂ ಈ ಇಬ್ಬರು ಆಳುವ ಪಕ್ಷದ ಧುರೀಣರ ಮಾತುಗಳ ಆಧಾರದಲ್ಲಿ ನಮ್ಮ ಪ್ರಧಾನಿಗಳನ್ನು ಜನಪ್ರಿಯಗೊಳಿಸಿದ ಅಬ್ಬರದ ಮಾತುಗಳೆಲ್ಲ 'ಲೊಳಲೊಟ್ಟೆ' ಎಂಬ ತೀರ್ಮಾನಕ್ಕೆ ಬರಬಹುದೇನೋ? ಬಹುಶ: ಅದು ಈಗಿನ ಮತ್ತು ಮುಂದಿನ 'ಇವೆಂಟ್'ಗಳಿಗೂ ಅನ್ವಯವಾಗುತ್ತದೆ!

"ಹೊಣೆಗಾರರಾದವರನ್ನು ಶಿಕ್ಷಿಸಲಾಗುವುದು" ಎಂದು ಉರಿ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯಿಸುತ್ತ ಪ್ರಧಾನಿಗಳು ಹೇಳಿದ್ದಾರೆ. –ಸುದ್ದಿ 1


ಉರಿಯಲ್ಲಿ ಭದ್ರತಾ ಲೋಪದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ, ಎನ್‌ಐಎ ತನಿಖೆ ಆರಂಭಿಸಿದೆ. –ಸುದ್ದಿ 2

" ಎಲ್ಲೋ ಏನೋ ತಪ್ಪಾಗಿದೆ. ವಿವರಗಳಿಗೆ ಹೋಗಬಯಸುವುದಿಲ್ಲ. ಅದೊಂದು ಸೂಕ್ಷ್ಮ ವಿಷಯ ತಾನೇ. ಆದರೂ ಪ್ರಧಾನ ಮಂತ್ರಿಗಳ ಆರಂಭದ ಮಾತು ಕೇವಲ ಹೇಳಿಕೆಯಲ್ಲ" ಎಂದು ರಕ್ಷಣಾ ಮಂತ್ರಿಗಳು ಹೇಳಿದ್ದಾರೆ – ಸುದ್ದಿ 3

ಪರಿಸ್ಥಿತಿ ಕಾಂಗ್ರೆಸ್ ಆಳ್ವಿಕೆಗಿಂತಲೂ ಕೆಟ್ಟದಾಗಿದೆ. ತಮ್ಮ ಜಾಗತಿಕ ಇಮೇಜ್ ಕಟ್ಟಿಕೊಳ್ಳುವ ಪ್ರಧಾನಿಗಳ ಕಸರತ್ತು ವ್ಯರ್ಥವಾಗಿ ಕಾಣುತ್ತಿದೆ ಎಂದು ಮಿತ್ರಪಕ್ಷ ಶಿವಸೇನೆ ಮುಖ್ಯಸ್ಥರು ಟೀಕಿಸಿದ್ದಾರೆ –ಸುದ್ದಿ 4



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ



ಕೆ.ಎಂ.ನಾಗರಾಜ್

ಕನಿಷ್ಠ ವೇತನ ಮತ್ತು ಬಡತನರೇಖೆಯ ಲೆಕ್ಕಾಚಾರ

ಕೆಲವು ಅಂಗೀಕೃತ ವಿಧಾನಗಳ ಮೂಲಕವೇ ಕನಿಷ್ಠ ವೇತನದ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಹಾಗಾಗಿ, ಅದಕ್ಕೆ ಸರ್ಕಾರದ ಅಧಿಕೃತ ಮನ್ನಣೆ ಇದೆ ಎಂದೇ ಅರ್ಥ. ಏಳನೇ ವೇತನ ಆಯೋಗವು ಮಾಡಿರುವ 18,000 ರೂಪಾಯಿಗಳ ಕನಿಷ್ಠ ವೇತನದ ಶಿಫಾರಸನ್ನು ಒಪ್ಪಿಕೊಂಡಿರುವ ಕೇಂದ್ರ ಸರ್ಕಾರ 'ಸಮಾನ ಕೆಲಕ್ಕೆ ಸಮಾನ ವೇತನ' ಎಂಬ ತತ್ವದ ಆಧಾರದ ಮೇಲೆ, ಒಬ್ಬ ಅಕೌಶಲ ಕಾರ್ಮಿಕನಿಗೆ 18,000 ರೂಪಾಯಿಗಳ ಕನಿಷ್ಠ ವೇತನ ನಿಗದಿಪಡಿಸಬೇಕೆಂಬ ಕಾರ್ಮಿಕ ಸಂಘಗಳ ಬೇಡಿಕೆಯನ್ನು ತಿರಸ್ಕರಿಸಿದೆ.

ಕನಿಷ್ಠ ವೇತನ ಲೆಕ್ಕ ಹಾಕುವ ಸಂದರ್ಭದಲ್ಲಿ ಆಹಾರ ಮತ್ತು ಆಹಾರೇತರ ಖರ್ಚುಗಳನ್ನು ಪರಿಗಣಿಸಿರುವ ರೀತಿಯಲ್ಲಿಯೇ ಬಡತನರೇಖೆಯ ಲೆಕ್ಕ ಹಾಕಿದರೆ, ಅದು ಕನಿಷ್ಠ ವೇತನದ ಮೊತ್ತಕ್ಕಿಂತಲೂ ಹೆಚ್ಚಾಗುತ್ತದೆ. ಅಂದರೆ, ಮಾಸಿಕ 18,000 ರೂಗಳಗಿಂತಲೂ ಅಧಿಕವಾಗುತ್ತದೆ. ಅದನ್ನು ಒಪ್ಪಿಕೊಳ್ಳುವ ಬದಲು ಸರಕಾರ ಒಂದರ ಮೇಲೆ ಇನ್ನೊಂದು ಎನ್ನುವಂತೆ ಸಮಿತಿಗಳನ್ನು ನೇಮಕ ಮಾಡಿ ಕಾಲಹರಣ ಮಾಡುತ್ತಿದೆ

ಎನ್ನುತ್ತಾರೆ ಪ್ರಖ್ಯಾತ ಆರ್ಥಿಕ ತಜ್ಞ **ಪ್ರೊ. ಪ್ರಭಾತ್ ಪಟ್ನಾಯಕ್**

ಕನಿಷ್ಠ ವೇತನಎಷ್ಟಿರಬೇಕು ಎಂಬುದನ್ನು ನಿರ್ಧರಿಸಲು ಬೇಕಾಗುವ ಮಾನದಂಡಗಳನ್ನು ರೂಪಿಸಲು ಬಹಳ ಸಮಯ ಹಿಡಿದಿದೆ. ಈ ಸಂಬಂಧವಾಗಿ, ಭಾರತೀಯ ಕಾರ್ಮಿಕ ಸಮ್ಮೇಳನವು (Indian Labour Conference) ರೂಪಿಸಿದ್ದ ಮೂಲ ಮಾರ್ಗದರ್ಶಕ ಸೂತ್ರಗಳಲ್ಲಿದ್ದ ಲೋಪ ದೋಷಗಳನ್ನು ಸರಿಪಡಿಸುವಂತೆ ಸುಪ್ರೀಂ ಕೋರ್ಟ್ ಅಭಿಪ್ರಾಯದ ಮೇರೆಗೆ, ಅವುಗಳನ್ನು 1990ರ ದಶಕದ ಆದಿ ಭಾಗದಲ್ಲಿ ಮಾರ್ಪಡಿಸಲಾಗಿತ್ತು. ಹಲವು ಬದಲಾವಣೆಗಳ ಬಳಿಕ, ಕನಿಷ್ಠ ವೇತನವನ್ನು ನಿರ್ಧರಿಸುವ ಹಾಲಿ ಮಾರ್ಗದರ್ಶಕ ಸೂತ್ರಗಳು ಹೀಗಿವೆ:

ಒಂದು ಕುಟುಂಬದಲ್ಲಿ, ಗಂಡ, ಹೆಂಡತಿ ಮತ್ತು ಇಬ್ಬರು ಮಕ್ಕಳು ನಾಲ್ಕು ಮಂದಿ ಇರುವರೆಂದು ಭಾವಿಸಲಾಗಿದೆ. ಆ ಇಬ್ಬರು ಮಕ್ಕಳನ್ನು ಒಂದೇ ಯೂನಿಟ್ಎಂದು ಪರಿಗಣಿಸಿರುವುದರಿಂದ, ಕುಟುಂಬದಲ್ಲಿರುವ ಒಟ್ಟು ಯೂನಿಟ್‌ಗಳು ಮೂರು ಎಂದಾಗುತ್ತದೆ. ಒಂದು ಯೂನಿಟ್ ಪ್ರತಿದಿನ 2700 ಕ್ಯಲೊರಿಗೆ ಸಮನಾದ ಆಹಾರ ಸೇವಿಸುತ್ತದೆ ಮತ್ತು ಕುಟುಂಬವು ಒಂದು ವರ್ಷಕ್ಕೆ 72 ಗಜ ಬಟ್ಟೆ ಬಳಸುತ್ತದೆ. ಆದ್ದರಿಂದ, ಆಹಾರ ಮತ್ತು ಬಟ್ಟೆಗೆ ಒಂದು ವರ್ಷದಲ್ಲಿ ತಗುಲುವ ವೆಚ್ಚವು 100ರೂ(ಅಥವಾ X) ಎಂದು ಭಾವಿಸಲಾಗಿದೆ. ಈ ಮೊತ್ತಕ್ಕೆ 10% ಮನೆ ಬಾಡಿಗೆ ಮತ್ತು 15% ಇತರ ಖರ್ಚುಗಳನ್ನು ಸೇರಿಸಿದ ನಂತರ ಕುಟುಂಬದ ವಾರ್ಷಿಕ ಒಟ್ಟು ವೆಚ್ಚ 125 ರೂ ಆಗುತ್ತದೆ (ಅಥವಾ X+10+15). ಈ ಮೊತ್ತಕ್ಕೆ ಅಧಿಕವಾಗಿ 30% ಸೇರಿಸುವಂತೆ ಸುಪ್ರೀಂ ಕೋರ್ಟ್ 1990ರ ದಶಕದ ಆದಿ ಭಾಗದಲ್ಲಿ ಹೇಳಿದ್ದರಿಂದ ಕುಟುಂಬದ ವಾರ್ಷಿಕ ಒಟ್ಟು ವೆಚ್ಚ 155 ರೂ ಆಗುತ್ತದೆ(ಅಥವಾ X+10+15+30).ಈ ಮೊತ್ತವನ್ನು ಕನಿಷ್ಠ ವೇತನ ಎಂದು ಪರಿಗಣಿಸಲಾಗಿದೆ. ಇದು ಉದಾಹರಣೆ, ಅಷ್ಟೇ. ವಾಸ್ತವಿಕವಾಗಿ, ಕನಿಷ್ಠ ವೇತನದ ಮೊತ್ತವು, ಆಯಾ ವರ್ಷದ ಬೆಲೆಗಳ ಮಟ್ಟ ಅನುಸರಿಸಿ, ವರ್ಷದಿಂದ ವರ್ಷಕ್ಕೆ ಬೇರೆ ಬೇರೆಯಾಗಿರುತ್ತದೆ. ಅದೇನಿದ್ದರೂ, ಇಲ್ಲಿ ಮುಖ್ಯವಾಗಿ ಗಮನಿಸಬೇಕಿರುವ ಅಂಶವೆಂದರೆ, ಕನಿಷ್ಠ ವೇತನವು ಒಂದು ರೀತಿ–ನೀತಿ ಮತ್ತು ಲೆಕ್ಕಾಚಾರಕ್ಕೆ ಒಳಪಟ್ಟಿದೆ. ಅದು ಮನಸೋ ಇಚ್ಛೆ ನಿರ್ಧರಿಸಿದ್ದಲ್ಲ.

ಏಕ ವ್ಯಕ್ತಿಯ ದುಡಿಮೆ

ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿ ಮಾತ್ರವೇ ದುಡಿಯುತ್ತಾನೆ ಎಂದು ಏಕೆ ಭಾವಿಸಬೇಕು? ಕುಟುಂಬದಲ್ಲಿರುವ ಇಬ್ಬರು ಪ್ರೌಢರೂ ದುಡಿಯುತ್ತಾರೆ ಎಂದು ಏಕೆ ಭಾವಿಸಬಾರದು? ಇದು ಕೆಲವರ ಪ್ರಶ್ನೆ.ಇವರು ಒಂದು ಅಂಶವನ್ನು ಮರೆಯುತ್ತಾರೆ. ಕುಟುಂಬದಲ್ಲಿರುವ ಇನ್ನೊಬ್ಬ ವ್ಯಕ್ತಿಯು ಹಣ ಸಂಪಾದಿಸುತ್ತಿಲ್ಲ ಎಂದರೆ ಆ ವ್ಯಕ್ತಿಯು ಸೋಮಾರಿ ಅಥವಾ ಕೆಲಸವಿರದ ವ್ಯಕ್ತಿ ಎಂದಲ್ಲ. ಆ ವ್ಯಕ್ತಿಯು ಅಡಿಗೆ ಮಾಡುವುದು, ಮಕ್ಕಳ ಪಾಲನೆ ಮತ್ತಿತರ ಮನೆಗೆಲಸಗಳನ್ನು ನಿರ್ವಹಿಸಬೇಕಿರುತ್ತದೆ. ಕುಟುಂಬದ ಇಬ್ಬರು ಪ್ರೌಢರೂ ದುಡಿಮೆಯಲ್ಲಿ ತೊಡಗಿದರೆ, ಮನೆಗೆಲಸಗಳನ್ನು ನೋಡಿಕೊಳ್ಳಲು ಮತ್ತೊಬ್ಬರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಅದು, ಕನಿಷ್ಠ ವೇತನದ ಮಟ್ಟ ಏರುವಂತೆ ಮಾಡುತ್ತದೆ. ಆದ್ದರಿಂದ, ಈಗಿರುವ ಪರಿಸ್ಥಿತಿಯಲ್ಲಿ, ಒಬ್ಬ ವ್ಯಕ್ತಿಯು ದುಡಿಮೆಯಲ್ಲಿ ತೊಡಗಿ, ಕುಟುಂಬದ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಷ್ಟು ಮಟ್ಟದ ಕನಿಷ್ಠ ವೇತನ ಪಡೆಯಬೇಕೆಂಬ ಗ್ರಹಿಕೆ ಸರಿಯಾಗಿದೆ. ಏಕೆಂದರೆ, ಇನ್ನೊಬ್ಬ ವ್ಯಕ್ತಿಯು ನಿರ್ವಹಿಸುವ ಮನೆಗೆಲಸಗಳನ್ನು ಸರ್ಕಾರವು ಪುಕ್ಕಟೆಯಾಗಿ ಒದಗಿಸುತ್ತಿಲ್ಲ. ಇದೇ ಅಂಶಗಳನ್ನು ಆಧರಿಸಿ, ಭಾರತೀಯ ಕಾರ್ಮಿಕ ಸಮ್ಮೇಳನವು, ನಾಲ್ಕು ಮಂದಿ ಇರುವ ಒಂದು ಕುಟುಂಬದ ನಿರ್ವಹಣೆಗೆ ಬೇಕಾಗುವ ಕನಿಷ್ಠ ವೇತನವನ್ನು ನಿರ್ಧರಿಸುವ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸಿದೆ. ಇದೇ ಮಾರ್ಗದರ್ಶಕ ಸೂತ್ರಗಳನ್ನು ಆಧರಿಸಿಯೇ, ಏಳನೇ ವೇತನ ಆಯೋಗವು, ಕೇಂದ್ರ ಸರ್ಕಾರದ ನೌಕರರ ಕನಿಷ್ಠ ವೇತನವನ್ನು 18,000 ರೂಪಾಯಿಗಳಿಗೆ ನಿಗದಿಪಡಿಸಿದೆ.

ಸಮಾನ ವೇತನದ ನಿರಾಕರಣೆ

ಸಂಪೂರ್ಣವಾಗಿ ನ್ಯಾಯಬದ್ಧವಾದ 'ಸಮಾನ ಕೆಲಕ್ಕೆ ಸಮಾನ ವೇತನ' ತತ್ವದ ಆಧಾರದ ಮೇಲೆ, ಒಬ್ಬ ಅಕೌಶಲ ಕಾರ್ಮಿಕನಿಗೆ 18,000 ರೂಪಾಯಿಗಳ ಕನಿಷ್ಠ ವೇತನ ನಿಗದಿಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಕಾರ್ಮಿಕ ಸಂಘಟನೆಗಳು ಸೆಪ್ಟಂಬರ್ 2ರಂದು ಮುಷ್ಕರ ಹೂಡಿದ್ದವು. ಏಳನೇ ವೇತನ ಆಯೋಗವು ಮಾಡಿರುವ 18,000 ರೂಪಾಯಿಗಳ ಕನಿಷ್ಠ ವೇತನದ ಶಿಫಾರಸನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಅಷ್ಟಾಗಿಯೂ, ಮೋದಿ ಸರ್ಕಾರವು ಟ್ರೇಡ್ ಯೂನಿಗಳ ಹಕ್ಕೊತ್ತಾಯವನ್ನು ತಿರಸ್ಕರಿಸಿದೆ. ತಾನುಕೊಡಲು ನಿರ್ಧರಿಸಿರುವ ಒಂದು ಜುಜುಬಿ ಮೊತ್ತವೇ ಬಹು ದೊಡ್ಡ ರಿಯಾಯ್ತಿ ಎಂಬುದಾಗಿ ಕೊಚ್ಚಿಕೊಂಡಿರುವ ಮೋದಿ ಸರ್ಕಾರವು ಟ್ರೇಡ್ ಯೂನಿಗಳನ್ನು ಹಠಮಾರಿಗಳೆಂದು ಜರಿದಿದೆ. ಆದರೆ ಕಾರ್ಮಿಕ ಸಂಘಟನೆಗಳು ಹೂಡಿದ್ದ ಸೆಪ್ಟಂಬರ್ 2ರ ಮುಷ್ಕರವು ಅಭೂತಪೂರ್ವ ಯಶಸ್ಸು ಕಂಡಿದೆ.

ಲೆಕ್ಕ ಹಾಕುವ ಪದ್ಧತಿಯಲ್ಲಿ ಮೋಸ

ಕೆಲವು ಅಂಗೀಕೃತ ವಿಧಾನಗಳ ಮೂಲಕವೇ ಕನಿಷ್ಠ ವೇತನದ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಹಾಗಾಗಿ, ಅದಕ್ಕೆ ಸರ್ಕಾರದ ಅಧಿಕೃತ ಮನ್ನಣೆ ಇದೆ ಎಂದೇ ಅರ್ಥ. ಹಾಗಿದ್ದರೂ, ಕನಿಷ್ಠ ವೇತನ ಜಾರಿ ಮಾಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣದ ನೀತಿಯನ್ನು ಅನುಸರಿಸುತ್ತದೆ. ಕಾರ್ಮಿಕರು ಕನಿಷ್ಠ ವೇತನದ ಹಕ್ಕೊತ್ತಾಯ ಮಂಡಿಸಿದ ಸಂದರ್ಭದಲ್ಲಿ ಸರ್ಕಾರವು ಅದನ್ನು ನ್ಯಾಯ ಸಮ್ಮತವಲ್ಲದ ರೀತಿಯಲ್ಲಿ ತಿರಸ್ಕರಿಸುತ್ತದೆ ಮತ್ತು ತನ್ನ ಕೇಡಿಗ ಬುದ್ಧಿಯನ್ನು ಪ್ರದರ್ಶಿಸುತ್ತದೆ. ಅದೇನೇ ಇರಲಿ, ಕೆಲವು ಅಂಗೀಕೃತ ವಿಧಾನಗಳ ಮೂಲಕ ಲೆಕ್ಕ ಹಾಕಿ ಕನಿಷ್ಠ ವೇತನವನ್ನು ನಿರ್ಧರಿಸಲಾಗುವುದರಿಂದ ಮತ್ತು ಈ ಕ್ರಮಕ್ಕೆ ಸರ್ಕಾರದ ಸಮ್ಮತಿ ಇರುವುದರಿಂದ, ಬಡತನರೇಖೆಯ ಅಂದಾಜಿಗೂ ಈ ಲೆಕ್ಕಾಚಾರವು ಪ್ರಸ್ತುತವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಒಬ್ಬ ವ್ಯಕ್ತಿಯು ದಿನವೂ ಉಣ್ಣುವ 2200 ಕ್ಯಲೊರಿ ಮೌಲ್ಯದ ಆಹಾರಕ್ಕೆ ತಗುಲುವ ಖರ್ಚು ಮತ್ತು ನಗರ ಪ್ರದೇಶಗಳಲ್ಲಿ ಒಬ್ಬ ವ್ಯಕ್ತಿಯು ದಿನವೂ ಉಣ್ಣುವ 2100 ಕ್ಯಲೊರಿ ಮೌಲ್ಯದ ಆಹಾರಕ್ಕೆ ತಗುಲುವ ಖರ್ಚುಗಳ ಮಟ್ಟವನ್ನು ಬಡತನ ರೇಖೆ ಎಂಬುದಾಗಿ ಸ್ಪಷ್ಟಪಡಿಸಲಾಗಿದೆ. ಮೂಲ ವರ್ಷ 1973–74ಕ್ಕೆ ಸಂಬಂಧಿಸಿದಂತೆ ಬಡತನದ ಈ ರೇಖೆಗಳನ್ನು ಲೆಕ್ಕ ಹಾಕಲಾಗಿತ್ತು. ನಂತರದ ವರ್ಷಗಳಲ್ಲಿ, ಬಳಕೆದಾರ ಬೆಲೆ ಸೂಚ್ಯಂಕವನ್ನು ಆಧರಿಸಿ ಬಡತನರೇಖೆಯ ಅಂಕಿ ಅಂಶಗಳನ್ನು ಪರಿಷ್ಕರಿಸಲಾಗುತ್ತಿದೆ. ಈ ವಿಧಾನ ಅನುಸರಿಸುತ್ತಿರುವುದರಿಂದ ಬಡವರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ, ಈ ವಿಧಾನವನ್ನು ಬದಲಿಸಿ, ಪ್ರತಿಐದು ವರ್ಷಗಳಿಗೊಮ್ಮೆ ಬಡತನ ರೇಖೆಯನ್ನು ಹೊಸದಾಗಿ ಲೆಕ್ಕ ಹಾಕಿದ್ದರೆ ಒಳ್ಳೆಯದಿತ್ತು ಮತ್ತು ನ್ಯಾಯ ಸಮ್ಮತವೂ ಆಗಿರುತ್ತಿತ್ತು. ಏಕೆಂದರೆ, ಹೊಸ ಸರ್ವೆಗಳ ಮೂಲಕ ಎಷ್ಟು ಕ್ಯಲೊರಿ ಮೌಲ್ಯದ ಆಹಾರ ಸೇವನೆಯಾಗುತ್ತಿದೆ ಎಂಬ ವಿವರಗಳು ಲಭ್ಯವಾಗುತ್ತವೆ. ಅಲ್ಲದೆ, ಬಳಕೆದಾರ ಬೆಲೆ ಸೂಚ್ಯಂಕದಲ್ಲಿರುವ ಕೆಲವು ನ್ಯೂನತೆಗಳಿಂದಾಗಿ ಹಳೆಯ ವಿಧಾನದ ಮೂಲಕ ಪರಿಷ್ಕರಣೆ ಮಾಡುವ ಬಡತನರೇಖೆಯ ಅಂಕಿ ಅಂಶಗಳು ಕೆಳ ಮಟ್ಟದಲ್ಲಿವೆ. ಆದಾಗ್ಯೂ, ಸರ್ಕಾರವು ಮೋಸದ ವಿಧಾನದಿಂದ ಲೆಕ್ಕ ಹಾಕಿದ ಈ ಅಂಕಿ ಅಂಶಗಳನ್ನೇ ಬಹಳ ಉಲ್ಲಾಸಭರಿತವಾಗಿ ಅಪ್ಪಿಕೊಂಡಿದೆ. ಹೊಸದಾಗಿ ಲೆಕ್ಕ ಹಾಕಿದ್ದರೆ, ಬಡತನರೇಖೆಯ ಸರಿಯಾದ ಅಂಕಿ ಅಂಶಗಳು ದೊರೆಯುತ್ತಿದ್ದವು. ಹಾಗಾಗಿ, ಬಡತನರೇಖೆಯ ಅಂಕಿ ಅಂಶಗಳಲ್ಲಿ ವ್ಯತ್ಯಾಸಗಳು ವರ್ಷಗಳು ಉರುಳಿದಂತೆ ಇನ್ನೂ ಹೆಚಾಗುತ್ತಿವೆ. ಬಡತನರೇಖೆಯ ಕೆಳ ಮಟ್ಟದ ಅಂಕಿ ಅಂಶಗಳನ್ನು ಉದ್ಧರಿಸಿ, ದೇಶದಲ್ಲಿ ಬಡತನ ಇಳಿಯುತ್ತಿದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದೆ ಸರ್ಕಾರ. ವಾಸ್ತವ ಪರಿಸ್ಥಿತಿ ಅದಕ್ಕೆ ವಿರುದ್ಧವಾಗಿದೆ. ಬಡತನ ರೇಖೆಗೆ ಸಂಬಂಧಿಸಿದಂತೆ ಸರ್ಕಾರದ 'ಅಧಿಕೃತ ಅಂಕಿ ಅಂಶಗಳು ಎಷ್ಟು ಅಸಂಬದ್ಧವಾಗಿವೆ ಎಂದರೆ, ಅವುಗಳಿಗೆ ಸ್ವಲ್ಪವಾದರೂ ವಿಶ್ವಾಸಾರ್ಹತೆ ಮೂಡಿಸುವ ಸಲುವಾಗಿ ಸರ್ಕಾರವು ಒಂದರ ಮೇಲೆ ಇನ್ನೊಂದು ಎನ್ನುವಂತೆ ಸಮಿತಿಗಳನ್ನು ನೇಮಕ ಮಾಡಿ ಅಂಕಿ ಅಂಶಗಳನ್ನು ಪರಿಷ್ಕರಣೆ ಮಾಡಿಸಿತು. ಮತ್ತು ತಲೆಎಣಿಕೆಯ ಪ್ರಕಾರ ಬಡತನದ ಪ್ರಮಾಣ ಇಳಿಕೆಯಾಗಿದೆ ಎಂಬ ಭ್ರಮೆಗೂ ಸ್ಥಾನ ಕಲ್ಪಿಸಿತು.

ಎರಡೂ ಕೆಳ ಮಟ್ಟದಲ್ಲಿವೆ

ಎಲ್ಲಕ್ಕಿಂತ ಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶವೆಂದರೆ, ಕನಿಷ್ಠ ವೇತನವನ್ನು ಲೆಕ್ಕ ಹಾಕುವಾಗ ಪರಿಗಣಿಸಿರುವ ಕಾರ್ಮಿಕ ಕುಟುಂಬವು ಉಣ್ಣುವ ಆಹಾರದ ಕ್ಯಲೊರಿ ಮೌಲ್ಯವು ಬಡತನ ರೇಖೆಯನ್ನು ಲೆಕ್ಕ ಹಾಕುವಾಗ ಪರಿಗಣಿಸಿರುವ ಒಬ್ಬ ಬಡ ವ್ಯಕ್ತಿಯು ಉಣ್ಣುವ ಆಹಾರದ ಕ್ಯಲೊರಿ ಮೌಲ್ಯಕ್ಕಿಂತಲೂ ಕಡಿಮೆ ಇದೆ. ಕಾರ್ಮಿಕ ಕುಟುಂಬದ ಮೂರು ಯೂನಿಟ್‌ಗಳು (ಗಂಡ, ಹೆಂಡತಿ ಮತ್ತುಇಬ್ಬರು ಮಕ್ಕಳು ಸೇರಿ ಒಂದೇ ಯೂನಿಟ್)ಪ್ರತಿ ದಿನ ಒಟ್ಟು 8100 ಕ್ಯಲೊರಿ ಮೌಲ್ಯದ ಆಹಾರ ಸೇವಿಸುತ್ತವೆ ಎಂದು ಭಾವಿಸಿಕೊಳ್ಳಲಾಗಿದೆ (ಒಂದು ಯೂನಿಟ್‌ಗೆ 2700 ಕ್ಯಲೊರಿಗಳ ಲೆಕ್ಕದಲ್ಲಿ ಮೂರು ಯೂನಿಟ್‌ಗಳಿಗ '8100 ಕ್ಯಲೊರಿಗಳು). ಅಂದರೆ, ನಾಲ್ಕು ಮಂದಿಯ ಕುಟುಂಬದ ತಲಾ ಬಳಕೆ 2025 ಕ್ಯಲೊರಿಗಳು ಎಂದಾಗುತ್ತದೆ. ಇದು, ಬಡತನರೇಖೆಗೆ ಪರಿಗಣಿಸಿರುವ–ಗ್ರಾಮೀಣದಲ್ಲಿ 2200 ಮತ್ತು ಪಟ್ಟಣಗಳಲ್ಲಿ 2100 ಕ್ಯಲೊರಿಗಳಿಗಿಂತಲೂ ಕಡಿಮೆ ಇದೆ ಮತ್ತು ವ್ಯಕ್ತಿಗಳು ಸಂಖ್ಯೆಯ ರೂಪದಲ್ಲಿವೆ, ಯೂನಿಟ್ ಲೆಕ್ಕದಲ್ಲಿ ಅಲ್ಲ.

ಕನಿಷ್ಠ ವೇತನ ಲೆಕ್ಕ ಹಾಕುವ ಸಂದರ್ಭದಲ್ಲಿ ಆಹಾರ ಮತ್ತು ಆಹಾರೇತರ ಖರ್ಚುಗಳನ್ನು ಪರಿಗಣಿಸಿರುವ ರೀತಿಯಲ್ಲಿಯೇ ಬಡತನರೇಖೆಯ ಲೆಕ್ಕ ಹಾಕಿದರೆ, ಅದು ಕನಿಷ್ಠ ವೇತನದ ಮೊತ್ತಕ್ಕಿಂತಲೂ ಹೆಚ್ಚಾಗುತ್ತದೆ. ಅಂದರೆ, ಮಾಸಿಕ 18,000 ರೂಗಳಿಗಿಂತಲೂ ಅಧಿಕವಾಗುತ್ತದೆ. ಈ ರೀತಿ ಭಾವಿಸಿಕೊಳ್ಳುವುದನ್ನು ಕೆಲವರು ಆಕ್ಷೇಪಿಸಬಹುದು. ಎರಡು ಗುಂಪುಗಳ ಆಹಾರ ಮತ್ತು ಆಹಾರೇತರ ಖರ್ಚುಗಳು ಒಂದೇ ರೀತಿಯಲ್ಲಿ ಏಕಿರಬೇಕು ಎಂದು ಕೇಳಬಹುದು. ಏಕೆಂದರೆ, ಕನಿಷ್ಠ ವೇತನ ಲೆಕ್ಕ ಹಾಕುವ ರೀತಿಯಲ್ಲಿಯೇ, ಬಡತನರೇಖೆಯನ್ನು ನಿರ್ಧರಿಸುವಾಗ, ಗ್ರಾಮೀಣದಲ್ಲಿ 2200 ಮತ್ತು ಪಟ್ಟಣಗಳಲ್ಲಿ 2100 ಕ್ಯಲೊರಿ ಮೌಲ್ಯದ ಆಹಾರದ ಅವಶ್ಯಕತೆಯನ್ನು ವಸ್ತುನಿಷ್ಠವಾಗಿ ಪರಿಗಣಿಸಲಾಗಿದೆ. ಬಡತನರೇಖೆಯನ್ನು ನಿರ್ಧರಿಸಲು ಈ ಕ್ರಮವನ್ನು ಅನುಸರಿಸುವುದು, ಮೂಲ ವರ್ಷದಲ್ಲಿ(1973–74) ಅನುಸರಿಸಿದ ವಿಧಾನಕ್ಕಿಂತಲೂ ಉತ್ತಮವಾಗುತ್ತದೆ. ಹೀಗೆ ಮಾಡಿದಲ್ಲಿ, ಬಡತನರೇಖೆಯು ಕನಿಷ್ಠ ವೇತನದ ಮೊತ್ತಕ್ಕಿಂತಲೂ ಅಧಿಕವಾಗಿರುತ್ತದೆ. ಸಂಪ್ರದಾಯದತ್ತ ವಾಲಿರುವ ತಪ್ಪೆಂದರೂ ಅಡ್ಡಿಯಿಲ್ಲ, ಬಡತನರೇಖೆಯೂ ಮತ್ತು ಕನಿಷ್ಠ ವೇತನವೂ ಒಂದೇ ಮಟ್ಟದಲ್ಲಿವೆ ಎಂದುಕೊಳ್ಳೋಣ. ಅಂದರೆ, ನಾಲ್ಕು ಮಂದಿಯ ಕುಟುಂಬದಲ್ಲಿ, ಮಾಸಿಕ 18,000 ರೂಗಳ ಕನಿಷ್ಠ ವೇತನದ ಅರ್ಥ ದಿನಕ್ಕೆ 600ರೂ ಅಥವಾ ದಿನಕ್ಕೆ ತಲಾ 150ರೂ ಎಂದಾಗುತ್ತದೆ. ಈ ಮೊತ್ತವು, ಬಡತನ ರೇಖೆಯ ಗೊತ್ತುಪಡಿಸಿದ(adjusted) ಅಧಿಕೃತ ಮೊತ್ತದ ಎರಡರಷ್ಟಾಗುತ್ತದೆ(ರಂಗರಾಜನ್ ಸಮಿತಿ ಶಿಫಾರಸು ಮಾಡಿರುವಂತೆ).

ಬಡತನರೇಖೆ – ಎರಡು ಪಟ್ಟು ಎತ್ತರಿಕೆ

ಚೈನಾದ ಸರ್ಕಾರವು ಬಡಜನರ ಏಳಿಗೆಗಾಗಿ ರೂಪಿಸಿರುವ ಯೋಜನೆಗಳ ಪ್ರಯೋಜನವನ್ನು ಇನ್ನೂ ಹೆಚ್ಚಿನ ಮಂದಿ ಪಡೆಯಲೆಂಬ ಉದ್ದೇಶದಿಂದ, 2012ರಲ್ಲಿ, ಆ ದೇಶದ ಬಡತನ ರೇಖೆಯನ್ನು ಸುಮಾರು ಎರಡು ಪಟ್ಟು ಎತ್ತರಿಸಿತು. ಭಾರತದಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ, ಬಡತನ ರೇಖೆಯನ್ನು ಎರಡು ಪಟ್ಟು ಎತ್ತರಿಸುವ ಅವಶ್ಯಕತೆ ಅಗಾಧವಾಗಿದೆ. ಮತ್ತು, ಬಡತನ ಇಳಿಯುತ್ತಿದೆ ಎನ್ನುವ ಸರ್ಕಾರದ ವಾದವನ್ನು ಅದು ಸುಳ್ಳು ಮಾಡುವುದಲ್ಲದೆ, ಬಡವರಿಗಾಗಿಯೇ ರೂಪಿಸಿರುವ ಸರ್ಕಾರದ ಯೋಜನೆಗಳಿಂದ ಹೊರಗುಳಿದಿರುವ ಅಸಂಖ್ಯಾತ ದುಡಿಯುವ ನಿರ್ಗತಿಕ ಜನರಿಗೆ ಪ್ರಯೋಜನವಾಗುತ್ತದೆ.

(ಇದು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ.ಪ್ರಭಾತ್ ಪಟ್ನಾಯಕ್ ಅವರ Minimum Wage and the Poverty Lineಲೇಖನದ ಭಾವಾನುವಾದ.)

ಚೈನಾದ ಸರ್ಕಾರವು ಬಡಜನರ ಏಳಿಗೆಗಾಗಿ ರೂಪಿಸಿರುವ ಯೋಜನೆಗಳ ಪ್ರಯೋಜನವನ್ನು ಇನ್ನೂ ಹೆಚ್ಚಿನ ಮಂದಿ ಪಡೆಯಲೆಂಬ ಉದ್ದೇಶದಿಂದ, 2012ರಲ್ಲಿ, ಆ ದೇಶದ ಬಡತನ ರೇಖೆಯನ್ನು ಸುಮಾರು ಎರಡು ಪಟ್ಟು ಎತ್ತರಿಸಿತು. ಭಾರತದಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ, ಬಡತನ ರೇಖೆಯನ್ನು ಎರಡು ಪಟ್ಟು ಎತ್ತರಿಸುವ ಅವಶ್ಯಕತೆ ಅಗಾಧವಾಗಿದೆ. ಇದರಿಂದ ಬಡವರಿಗಾಗಿಯೇ ರೂಪಿಸಿರುವ ಸರ್ಕಾರದ ಯೋಜನೆಗಳಿಂದ ಹೊರಗುಳಿದಿರುವ ಅಸಂಖ್ಯಾತ ದುಡಿಯುವ ನಿರ್ಗತಿಕ ಜನರಿಗೆ ಪ್ರಯೋಜನವಾಗುತ್ತದೆ.

ಲಿಂಗರಾಜು



ರಾಜಕಾಲುವೆ ಮೇಲಿರುವ ದರ್ಶನ್ ಮನೆ ಒಡೆಯೊದಿಲ್ವಂತೆ!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಷ್ಟೇ ಪ್ರಭಾವಿಗಳಾಗಿದ್ದರೂ ರಾಜಕಾಲುವೆ ತೆರವು ಕಾರ್ಯಾಚರಣೆ ನಿಲ್ಲುವುದಿಲ್ಲ'ವೆಂದು ಈಗಲೂ ಹೇಳುತ್ತಿದ್ದಾರೆ. ಆದರೆ ಚಿತ್ರನಟ ದರ್ಶನ್ ಮತ್ತು ಶ್ಯಾಮನೂರು ಶಿವಶಂಕರಪ್ಪ ಅವರ ಒಡೆತನದ ಎಸ್.ಎಸ್.ಆಸ್ಪತ್ರೆ 7 ಎಕರೆ 31 ಗುಂಟೆ ವಿಸ್ತೀರ್ಣದ ರಾಜಕಾಲುವೆಯನ್ನು ಒತ್ತುವರಿ ಮಾಡಿರುವ ವರದಿಯನ್ನು ಭೂ ದಾಖಲೆಗಳ ಇಲಾಖೆಯ ಜಂಟಿ ನಿರ್ದೇಶಕರು ಬಿಬಿಎಂಪಿ ಆಯುಕ್ತರಿಗೆ ಸಲ್ಲಿಸಿದ್ದಾರೆ. ಅದರಂತೆ ಈ ಎರಡೂ ಕಟ್ಟಡಗಳ ತೆರವು ಕಾರ್ಯಾಚರಣೆ ನಡೆಸಬೇಕಾಗಿದ್ದ ಬಿಬಿಎಂಪಿ ಅಳೆದು ತೂಗಿ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದನ್ನು ಜಿಲ್ಲಾಧಿಕಾರಿಯವರ ವಿವೇಚನೆಗೆ ಬಿಟ್ಟಿದೆ ಎಂದು ಆಯುಕ್ತ ಮಂಜುನಾಥ್ ಪ್ರಸಾದ್ ಹೇಳಿದ್ದಾರೆ! ಇಬ್ಬರು ಪ್ರಭಾವಿಗಳ ಆಸ್ತಿಯನ್ನು ಉಳಿಸಲು ಸಾಕಷ್ಟು ಹೆಣಗಾಡಿತ್ತು. ಈ ಕಟ್ಟಡಗಳು ರಾಜಕಾಲುವೆಯ ಮೇಲಿಲ್ಲ ಎಂತಲೂ, ಇನ್ನೊಂದು ಬಾರಿ



ರಾಜಕಾಲುವೆಯ ಮೇಲಿರುವುದು ಹೌದು ಆದರೆ ಅದು ನಿರ್ಜೀವ ರಾಜಕಾಲುವೆ ಎಂದು ಜನರ ಕಿವಿಗೆ ಹೂ ಮುಡಿಸುವ ಕೆಲಸವನ್ನು ಮಾಡಿತ್ತು. ನಂತರ ನಕ್ಷೆಯನ್ನೇ ತಿದ್ದಿ ಇಲ್ಲಿ ರಾಜಕಾಲುವೆಯೇ ಇಲ್ಲ ಎಂದು ವಾದಿಸಿತ್ತು. ಅಂತಿಮವಾಗಿ ಭೂ ದಾಖಲೆ ಇಲಾಖೆ ಜಂಟಿ ಆಯುಕ್ತಕೆ.ಜಯಪ್ರಕಾಶ್ ನೀಡಿದ ವರದಿ ನುಂಗಲಾರದ ತುತ್ತಾಗಿ ದಿಕ್ಕು ತೋಚದಂತಾದ ಪಾಲಿಕೆ ಸದ್ಯ ಚೆಂಡನ್ನು ಡಿಸಿಯವರ ಅಂಗಳಕ್ಕೆ ಹಾಕಿ ನುಣಿಚಿಕೊಳ್ಳಲು ಪ್ರಯತ್ನಿಸಿದೆ. ಸಿದ್ದರಾಮಯ್ಯನವರು ಎಷ್ಟೇ ಏರುದ್ದನಿಯಲ್ಲಿ ಹೇಳಿದರೂ ಸರ್ಕಾರ ಪ್ರಭಾವಿಗಳ ಮುಂದೆ ಮಂಡಿಯೂರಿರುವುದಂತು ಸತ್ಯ. ಬಡವರಿಗೊಂದು ನ್ಯಾಯ, ಶ್ರೀಮಂತರಿಗೊಂದು ನ್ಯಾಯ ಎನ್ನುವ ಲೋಕಸತ್ಯ ಎಂದಿಗೂ ಸುಳ್ಳಾಗದು ಅಲ್ಲವೇ?

ಡೆಂಗ್ಯೂ, ಚಿಕನ್‌ಗೂನ್ಯದಲ್ಲಿ ರಾಜ್ಯ ನಂಬರ್ 2!

ಹೀಗೂ ಒಂದು ದಾಖಲೆ ರಾಜ್ಯದ ಹೆಸರಿನಲ್ಲಿರುವುದು ನೀವು ನಂಬುತ್ತೀರಾ? ಹೌದು, ನಂಬಲೇಬೇಕು. ಕೇಂದ್ರಆರೋಗ್ಯ ಸಚಿವ ಜೆ.ಪಿ. ನಡ್ಡಾ ಇದನ್ನು ಹೊರಹಾಕಿದ್ದಾರೆ. ರಾಷ್ಟ್ರದ ರಾಜಧಾನಿ ದೆಹಲಿ ಡೆಂಗ್ಯೂ ಮತ್ತುಚಿಕನ್‌ಗೂನ್ಯ ಕಾಯಿಲೆಗಳು ಅತಿ ಹೆಚ್ಚಿರುವ ರಾಜ್ಯವೆಂದು ಮೊದಲ ಸ್ಥಾನ ಅಲಂಕರಿಸಿದೆ. ದೆಹಲಿಯಲ್ಲಿ ಮಾರಣಾಂತಿಕ ಡೆಂಗ್ಯೂ ಕಾಯಿಲೆಯಿಂದಾಗಿ 12ಕ್ಕೂ ಹೆಚ್ಚು ಜನ ಬಲಿಯಾಗಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ಶೇಕಡ 90ರಷ್ಟು ಪ್ರಕರಣಗಳು ಹೆಚ್ಚಾಗಿವೆ ಎಂದು ಏಮ್ಸ್ ಮುಖ್ಯಸ್ಥ ಅಮಿತ್ ಗುಪ್ತ ಆತಂಕಕಾರಿ ವಿಷಯವನ್ನು ತಿಳಿಸಿದ್ದಾರೆ. ಇತ್ತರಾಜ್ಯವೂ ದೆಹಲಿಗಿಂತ ತಾವೇನೂ ಕಮ್ಮಿ ಇಲ್ಲ ಎನ್ನುವಂತೆ ದೇಶದಲ್ಲಿಒಟ್ಟು 12,255 ಚಿಕನ್‌ಗೂನ್ಯ ಪ್ರಕರಣದಾಖಲಾಗಿದ್ದರೆ ಅದರಲ್ಲಿಕರ್ನಾಟಕದ ಪಾಲು 8,941 ಪ್ರಕರಣಗಳು! 27,679 ಡೆಂಗ್ಯೂ ಪ್ರಕರಣಗಳಲ್ಲಿ ರಾಜ್ಯದ್ದು ಸಿಂಹಪಾಲಿದೆ ಎನ್ನುವುದು ನಿಜಕ್ಕೂ ಕಳವಳಕಾರಿಯಾದುದು. ಬಯಲು ಶೌಚಾಲಯ, ಅಶುದ್ಧಕುಡಿಯುವ ನೀರು, ನೈರ್ಮಲ್ಯ ಇಲ್ಲದಿರುವುದುಇಂಥರೋಗಗಳು ಉಲ್ಬಣಿಸಲುಕಾರಣ ಎಂದು ಹೇಳಲಾಗಿದ್ದರೂ, ಇಂಥ ಸಮಸ್ಯೆಗಳಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಆರೋಗ್ಯಕರ ವಾತಾವರಣವಿದ್ದಲ್ಲಿ ಕಾಯಿಲೆ ಬರುವುದನ್ನು ತಡೆದು ನಿಲ್ಲಿಸಲು ಸಾಧ್ಯವಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆ ಹೆಚ್ಚಿನ ಹಣಕಾಸು ಒದಗಿಸುವುದು, ಆ ಹಣ ಸಮರ್ಪಕವಾಗಿ ವಿನಿಯೋಗ ಮಾಡಿದ್ದಲ್ಲಿಇದನ್ನು ಸಂಪೂರ್ಣವಾಗಿ ಹತೋಟಿಗೆತರಲು ಸಾಧ್ಯವಿದೆಯಾದರೂ ಸರ್ಕಾರ ಆದ್ಯತೆ ಸಾಲುತ್ತಿಲ್ಲ. ಹಾಗೆಯೇ ಇಲಾಖೆಗಳಲ್ಲಿರುವ ಭ್ರಷ್ಟಾಚಾರವೂ ಇದಕ್ಕೆ ಕೊಡುಗೆ ನೀಡುತ್ತಿದೆ. ಇವೆಲ್ಲದರ ಪರಿಣಾಮವೆಂದರೆ ದೇಶದಲ್ಲೇ ಕರ್ನಾಟಕ ಡೆಂಗ್ಯೂ ಮತ್ತು ಚಿಕನ್‌ಗೂನ್ಯದಲ್ಲಿ ನಂಬರ್ 2ನೇ ಅಲಂಕರಿಸಿರುವುದು. ನಾವು ಹೆಮ್ಮೆ ಪಡಬೇಕಲ್ಲವೇ?!

ಕಾರ್ಮಿಕ ಚಳವಳಿ ಕಟ್ಟುವ ಪಣ....................

ಪುಟ 8 ರಿಂದ

ಬೊಬ್ಬೆಹಾಕುವ ಇವರ ಈ ನಡೆ ದೇಶ ವಿರೋಧಿ ಅಲ್ಲವೆ ಎಂದು ಪ್ರಶ್ನಿಸಿದ ತಪನ್ ಸೇನ್ ಇದರಲ್ಲಿ ಜನತೆ ಹಾಗೂ ಕಾರ್ಮಿಕರನ್ನು ವಿಭಜಿಸುವ ಹುನ್ನಾರವಿದೆ ಎಂದು ಆರೋಪಿಸಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡಿ ರಾಜ್ಯ ಬರಪರಿಸ್ಥಿತಿಯನ್ನು ಎದುರಿಸುತ್ತಿದೆ. ಜನಪ್ರತಿನಿಧಿಗಳಾದವರು ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಅತ್ತ ಕೇಂದ್ರ ಸರ್ಕಾರ ನೀರು ಹಂಚಿಕೆ ವಿಚಾರದಲ್ಲಿ ಮಧ್ಯಸ್ತಿಕೆ ವಹಿಸದೇ ತನ್ನ ಜವಾಬ್ದಾರಿಯಿಂದ ನುಣಿಚಿಕೊಳ್ಳುವ ಯತ್ನ ಮಾಡುತ್ತಿದೆ ಎಂದು ದೂರಿದರು. ಮಾತೆತ್ತಿದರೆ ದೇಶಪ್ರೇಮದ ಬಗ್ಗೆ ಮಾತನಾಡುವ ಸಂಘಪರಿವಾರ ಸಾಮಾನ್ಯ ಜನ ಬರದಿಂದ ನಲುಗಿದ್ದಾರೆ. ಆದರೆ ಈ ಬಗ್ಗೆ ಚಕಾರ ಎತ್ತುತ್ತಿಲ್ಲ. ರಾಜ್ಯದಲ್ಲಿ ಕನಿಷ್ಠ ಕೂಲಿ ಜಾರಿಯಾಗುತ್ತಿಲ್ಲ. 108 ಅಂಬುಲೆನ್ಸ್ ಕಾರ್ಮಿಕರು, ಬಿಎಂಟಿಸಿ ಮತ್ತು ಏರ್‌ಪೋರ್ಟ್ ಕಾರ್ಮಿಕರು ಸಂಘ ರಚಿಸಿಕೊಂಡ ಕಾರಣಕ್ಕಾಗಿ ಅವರನ್ನು ಕೆಲಸದಿಂದ ವಜಾ ಮಾಡಲಾಗುತ್ತಿದೆ. ಈ ಮೂಲಕ ರಾಜ್ಯ ಸರ್ಕಾರ ಕೇಂದ್ರದ ಮಾದರಿಯಲ್ಲಿಯೇ ನಡೆಯುತ್ತಿದೆ ಎಂದು ರಾಜ್ಯ ಸರ್ಕಾರ ಕಾರ್ಮಿಕ ವಿರೋಧಿ ನಿಲುವನ್ನು ತರಾಟೆಗೆ ತೆಗೆದುಕೊಂಡರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹಾಗೂ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ರಾಜ್ಯಾಧ್ಯಕ್ಷ ವಿಜೆಕೆ ನಾಯರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ರಾಜ್ಯ ಪದಾಧಿಕಾರಿಗಳು ಹಾಗೂ ಸ್ವಾಗತ ಸಮಿತಿ ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭೆ ಆರಂಭಕ್ಕೂ ಮುನ್ನ ಕಳೆದ ಡಿಸೆಂಬರ್ 23 ರಂದು ಹಠಾತ್ತನೆ ಅಗಲಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯು ಆಗಿದ್ದ ಸಂಗಾತಿ ಎಸ್. ಪ್ರಸನ್ನಕುಮಾರ್ ಅವರಿಗೆ ವಿಶೇಷ ಶ್ರದ್ಧಾಂಜಲಿಯನ್ನು ಹಾಗೂ ಇತರೆ ಅಗಲಿದ ಗಣ್ಯರಿಗೆ ಸಂತಾಪವನ್ನು ಸಭೆ ಒಂದು ನಿಮಿಷ ಮೌನ ಆಚರಿಸುವ ಮೂಲಕ ಸಲ್ಲಿಸಿತು.

ಕೂಡಲ ಸಂಗಮದಲ್ಲಿ ಪ್ರತಿನಿಧಿ ಅಧಿವೇಶನ

ಬಹಿರಂಗ ಅಧಿವೇಶನದ ತರುವಾಯ ಐತಿಹಾಸಿಕ ಕೂಡಲಸಂಗಮದಲ್ಲಿ ಸಮ್ಮೇಳನ ಪ್ರತಿನಿಧಿಗಳ ಅಧಿವೇಶನ ಸಮ್ಮೇಳನದ ಎಸ್.ಪ್ರಸನ್ನಕುಮಾರ್ ವೇದಿಕೆಯಲ್ಲಿ ಸಮಾವೇಶಗೊಂಡಿತು. ಬಾಗಲಕೋಟೆಯ ಹಿರಿಯ ನಾಯಕರಾಗಿದ್ದ ಡಿ.ಎಂ. ಕಲಾಸಿ ಮತ್ತು ತುಮಕೂರಿನ ಹಿರಿಯ ನಾಯಕ ಮಹಮ್ಮದ್ ದಸ್ತಗೀರ್ ಅವರ ಹೆಸರನ್ನು ಕ್ರಮವಾಗಿ ಸಭಾಂಗಣ ಮತ್ತು ನಗರಕ್ಕೆ ಇಡಲಾಗಿತ್ತು.

ರಾಜ್ಯದ ಕಾರ್ಮಿಕರ ಪರಿಸ್ಥಿತಿ, ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳು, ಹಾಗು ಸಂಘಟನಾ ವಿಚಾರಗಳನ್ನೊಳಗೊಂಡ ಕರಡು ವರದಿಯನ್ನು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಅಧಿವೇಶನದಲ್ಲಿ ಮಂಡಿಸಿದರು. ದೆಹಲಿಯಿಂದ ಆಗಮಿಸಿದ್ದ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಹೇಮಲತಾವರು ಸಮ್ಮೇಳನದಲ್ಲಿ ಹಾಜರಿದ್ದು ಪ್ರಧಾನ ಕಾರ್ಯದರ್ಶಿ ವರದಿ ಯಾವ ಅಂಶಗಳ ಆಧಾರದಲ್ಲಿ ಚರ್ಚೆ ನಡೆಸಬೇಕು ಎಂಬ ಕುರಿತು ಮಾರ್ಗದರ್ಶನ ಮಾಡಿದರು. ಅತ್ಯಂತ ಶಿಸ್ತಿನಿಂದ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಒಟ್ಟು 357 ಪ್ರತಿನಿಧಿಗಳಲ್ಲಿ, 120 ಮಹಿಳಾ ಪ್ರತಿನಿಧಿಗಳಿದ್ದರು. 21 ವರ್ಷದ ಮಹಮ್ಮದ್ ತಶ್ರೀಫ್ ಮತ್ತು 82 ವರ್ಷ ಕೋದಂಡರಾಮ್ ಅವರು ಕ್ರಮವಾಗಿ ಸಮ್ಮೇಳನದ ಕಿರಿಯ ಮತ್ತು ಹಿರಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇವರಲ್ಲಿ 60 ಜನ ಪ್ರತಿನಿಧಿಗಳು ವಿವಿಧ ಜಿಲ್ಲೆ ಹಾಗು ಸಂಘಗಳನ್ನು ಪ್ರತಿನಿಧಿಸಿ 400 ನಿಮಿಷಕ್ಕೂ ಹೆಚ್ಚು ಕಾಲ ಮಾತನಾಡಿದರು. ಪ್ರತಿನಿಧಿಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕರಡು ವರದಿಯನ್ನು ಸಮ್ಮೇಳನ ಅಂಗೀಕರಿಸಿತು.

ಹೃದಯಸ್ಪರ್ಶಿ ಸನ್ಮಾನ

ಇದೇ ಸಂದರ್ಭದಲ್ಲಿ ಬೆಂಗಳೂರಿನ ಬಿಪಿಎಲ್ ಕಾರ್ಖಾನೆ ಹೋರಾಟದಲ್ಲಿ ಮಾಲೀಕರ ಕುತಂತ್ರದಿಂದಾಗಿ ಜೀವಾವಧಿ ಶಿಕ್ಷೆ ಗುರಿಯಾಗಿ 16 ವರ್ಷಗಳ ದೀರ್ಘ ಸೆರೆವಾಸ ಅನುಭವಿಸಿ, ಸನ್ನಡತೆ ಆಧಾರದಲ್ಲಿ ಇತ್ತೀಚಿಗೆ ಬಿಡುಗಡೆಗೊಂಡ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಆರ್.ಶ್ರೀನಿವಾಸ್ ಮತ್ತು ಕಾರ್ಮಿಕ ಮುಖಂಡ ಟಿ.ಕೆ.ಎಸ್.ಕುಟ್ಟಿ ಇವರಿಗೆ ಹೃದಯಸ್ಪರ್ಶಿಯಾಗಿ ಸನ್ಮಾನಿಸಲಾಯಿತು. ಇಬ್ಬರು ನಾಯಕರ ತ್ಯಾಗವನ್ನು ಸ್ಮರಿಸಿದ ಸಮ್ಮೇಳನವು, ದೀರ್ಘ ಸೆರೆವಾಸ ಅನುಭವಿಸಿಯೂ ಚಳುವಳಿಯಲ್ಲಿ ಮುಂದುವರಿಯುತ್ತಿರುವ ಅವರ ಬದ್ಧತೆಯನ್ನು ಸಮ್ಮೇಳನವು ಕೊಂಡಾಡಿತು. ಸಮ್ಮೇಳನದ ಭಾಗವಹಿಸಿದ ಪ್ರತಿನಿಧಿಗಳು ಎದ್ದುನಿಂತು ಭಾರಿ ಕರಡಾತನದ ಮೂಲಕ ಗೌರವ ಅರ್ಪಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಇಬ್ಬರು ನಾಯಕರು ಸೆರೆವಾಸ ಎನ್ನುವುದು ಚಳುವಳಿಯ ಒಂದು ಭಾಗ, ಅದಕ್ಕಾಗಿ ಎದೆಗುಂದಬಾರದು, ಕಾರ್ಮಿಕ ವರ್ಗದ ವಿಮೋಚನೆಗಾಗಿನ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎನ್ನುವ ಅವರ ಮಾತು ನೆರೆದಿದ್ದವರ ಕಣ್ಣಾಲಿಗಳನ್ನು ತೇವವಾಗಿಸಿತು.

ಶುಭಾಶಯಗಳ ಮಹಾಪೂರ

ಸಿಐಟಿಯು 13ನೇ ರಾಜ್ಯ ಸಮ್ಮೇಳನಕ್ಕೆ ಶುಭಾಶಯ ಕೋರಿ ಇತರೆ ಸಂಘಟನೆಗಳ ಮುಖಂಡರು ಭಾಗವಹಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಮಾರುತಿ ಮಾನ್ಪಡೆ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ, ಎಐಯುಟಿಯುಸಿ ಸಂಘಟನೆಯ ರಾಜ್ಯ ಮುಖಂಡ ಕೆ.ವಿ. ಭಟ್, ಬಿಇಎಫ್‌ಐ ನಿಂದ ರತ್ನಾಕರ್ ಶಣೈ, ಬಿಎಸ್‌ಎನ್‌ಎಲ್‌ಇಯು ಪರವಾಗಿ ಸಿ.ಕೆ. ಗುಂಡಣ್ಣ, ಎಐಐಇಎ ಯಿಂದ ಪ್ರೇಮಕುಮಾರ್, ಜನವಾದಿ ಮಹಿಳಾ ಸಂಘಟನೆ ರಾಜ್ಯ ಕಾರ್ಯದರ್ಶಿ ಗೌರಮ್ಮ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರ ಮೂರ್ತಿ, ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ ಮತ್ತಿತರರು ಸಮ್ಮೇಳನಕ್ಕೆ ಶುಭಾಶಯ ಕೋರಿ ಮಾತನಾಡಿದರು. ಸಮುದಾಯ ರಾಜ್ಯ ಸಮಿತಿ ಪರವಾಗಿ ಶುಭಾಶಯ ಸಂದೇಶ ಕಳಿಸಲಾಗಿತ್ತು.

ಸಮರಶೀಲ ಹೋರಾಟಕ್ಕೆ ಕರೆ

ಸುದೀರ್ಘವಾಗಿ ಚರ್ಚೆ ನಡೆಸಿದ 3 ದಿನಗಳ ಸಮ್ಮೇಳನವು ಮುಂಬರುವ ದಿನಗಳಲ್ಲಿ ಸರ್ಕಾರಗಳ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಸಮರಶೀಲ ಹೋರಾಟಕ್ಕೆ ಮುಂದಾಗಬೇಕೆಂದು ತೀರ್ಮಾನಿಸಿದೆ. ಹಾಗೆಯೇ ಕಾರ್ಮಿಕ ವರ್ಗ ಐಕ್ಯತೆಯನ್ನು ಕಾಪಾಡಿಕೊಳ್ಳಲು ಐಕ್ಯ ಹೋರಾಟಗಳನ್ನು ಮುಂದುರೆಸಬೇಕೆಂದು ತೀರ್ಮಾನಿಸಿದೆ. ಇದರ ಜತೆಯಲ್ಲಿ ಕನಿಷ್ಠ ಕೂಲಿಯ ಪ್ರಶ್ನೆಯನ್ನು ಪ್ರಮುಖ ಬೇಡಿಕೆಯಾಗಿ ಹೋರಾಟ ರೂಪಿಸಲು ನಿರ್ಧರಿಸಲಾಗಿದೆ. ಹಾಗೆಯೇ ರೈತರು, ವಿದ್ಯಾರ್ಥಿ-ಯುವಜನ-ಮಹಿಳಾ ಸಂಘಟನೆಗಳ ಜತೆಗೂಡಿ ಸಮಾನ ಪ್ರಶ್ನೆಗಳಿಗಾಗಿ ಹೋರಾಟ ರೂಪಿಸಲು ಸಮ್ಮೇಳನ ಕರೆ ನೀಡಿದೆ.

ಸಮ್ಮೇಳನದ ಯಶಸ್ಸಿಗಾಗಿ ದುಡಿದವರಿಗೆ ಅಭಿನಂದನೆ

ಸಮ್ಮೇಳನದ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡರವರು ಮಾತನಾಡಿ "ಜಿಲ್ಲೆಯಲ್ಲಿ ಸಿಐಟಿಯು ಸಂಘಟನೆ ಬಲಿಷ್ಠವಾಗಿ ಏನೂ ಇಲ್ಲ. ಆದರೂ ಸಹ ರಾಜ್ಯ ಸಮ್ಮೇಳನದ ತಯಾರಿಯಾಗಿ ಕಳೆದ ಮೂರು ತಿಂಗಳಿಂದ ಸತತವಾಗಿ ಪ್ರಚಾರ, ನಿಧಿ ಸಂಗ್ರಹ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಕಾರ್ಮಿಕರು, ವಿಶೇಷವಾಗಿ ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತಿ, ಹಮಾಲಿ ಮತ್ತಿತರ ಸಂಘಟನೆಗಳ ಕಾರ್ಮಿಕರು ಸತತವಾಗಿ ದುಡಿದಿದ್ದಾರೆ. ಬಾಗಲಕೋಟೆ ಜಿಲ್ಲೆ ಸಂಘ ಪರಿವಾರದ ಭದ್ರಕೋಟೆ. ಇಲ್ಲಿ ನಾವು ಸಾವಿರಾರು ಕಾರ್ಮಿಕರು ಕೆಂಪು ಬಾವುಟ ಹಿಡಿಯುವ ಮೂಲಕ ಕಾರ್ಮಿಕರ ಯಶಸ್ವಿ ರಾಜ್ಯ ಸಮ್ಮೇಳನವನ್ನು ನಡೆಸಲಾಗಿದೆ. ಸಮ್ಮೇಳನದ ಯಶಸ್ಸಿಗೆ ಸಹಕರಿಸಿದ ಎಲ್ಲಾ ಕಾರ್ಮಿಕರು, ಕಾರ್ಯಕರ್ತರು, ಮುಖಂಡರಿಗೆ ಅಭಿನಂದನೆಗಳು" ಎಂದು ತಿಳಿಸಿದರು.

ಯುರೋಪಿನಲ್ಲಿ ಉಗ್ರ ಬಲಪಂಥಿಯರ ಮುನ್ನಡೆ



ಶರತ್‌ಚಂದ್ರ

ಜರ್ಮನಿಯಲ್ಲಿ ಎರಡನೇ ಮಹಾಯುದ್ಧದ ನಂತರ ಮೊದಲ ಬಾರಿಗೆ ಉಗ್ರ ಬಲಪಂಥಿಯ ಪಕ್ಷವೊಂದು ಪ್ರಮುಖ ರಾಜಕೀಯ ಪಕ್ಷವಾಗಿ ಹೊಮ್ಮಿದೆ. "ಜರ್ಮನಿಗೆ ಬದಲಿ" (Alternative for Germany – AfD– ಎ.ಎಫ್.ಡಿ.) ಎಂಬ ಉಗ್ರ ಬಲಪಂಥೀಯ ಪಕ್ಷ ಇತ್ತೀಚೆಗೆ ನಡೆದ ಹಲವು ಪ್ರಾಂತೀಯ ಚುನಾವಣೆಗಳಲ್ಲಿ ಶೇ. 10–15 ಮತ ಪಡೆದಿದೆ. ಕೆಲವು ಕಡೆ ಅಧಿಕಾರದಲ್ಲಿದ್ದ ಛಾನ್ಸಲರ್ ಮೆರ್ಕೆಲ್ ಅವರ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಯೂನಿಯನ್ (ಸಿ.ಡಿ.ಯು.) ಪಕ್ಷವನ್ನೂ ಹಿಂದಕ್ಕೆ ಹಾಕಿದೆ. 2013ರಲ್ಲಿ ಗ್ರೀಸ್ ಬಿಕ್ಕಟ್ಟಿನಿಂದ ಬೈಲೌಟ್‌ಗೆ ಜರ್ಮನ್ ಹಣವನ್ನು ಬಳಸುವುದರ ವಿರುದ್ಧ ಚಳುವಳಿಯಾಗಿ ಹುಟ್ಟಿದ ಈ ಪಕ್ಷಕ್ಕೆ ಆ ವರ್ಷದ ಪ್ರಾಂತೀಯ ಚುನಾವಣೆಗಳಲ್ಲಿ ಸೀಟು ಗಳಿಸಲು ಬೇಕಾದ ಕನಿಷ್ಟ ಶೇ. 5 ಮತಗಳಿಕೆ ಸಾಧಿಸಲಾಗಿರಲಿಲ್ಲ. ಆದರೆ ಈ ಬಾರಿ 16 ಪ್ರಾಂತೀಯ ವಿಧಾನಸಭೆಗಳಿಗೆ ನಡೆದ ಚುನಾವಣೆಗಳಲ್ಲಿ 9 ರಲ್ಲಿ ಮೊದಲ ಬಾರಿಗೆ ಸೀಟುಗಳನ್ನು ಗೆದ್ದುಕೊಳ್ಳಲು ಸಾಧ್ಯವಾಗಿದೆ. ಈಗಿನ ಟ್ರೆಂಡ್ ನೋಡಿದರೆ 2017ರಲ್ಲಿ ನಡೆಯಲಿರುವ ಜರ್ಮನಿಯ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಅದು ಸ್ಥಾನ ಗೆದ್ದುಕೊಳ್ಳಲಿದೆ.

ಇದೇ ಟ್ರೆಂಡ್ ಫ್ರಾನ್ಸ್, ಬ್ರಿಟನ್ ಮುಂತಾದ ಯುರೋಪಿನ ಹಲವು ದೇಶಗಳಲ್ಲಿ ಕಂಡುಬಂದಿದೆ. ಈಗಾಗಲೇ ಇರುವ ಅಥವಾ ಹುಟ್ಟಿಕೊಳ್ಳುತ್ತಿರುವ ಉಗ್ರ ಬಲಪಂಥೀಯ ಪಕ್ಷಗಳು ರಾಜಕೀಯದಲ್ಲಿ ಹಿಂದೆಂದೂ ಇಲ್ಲದ ಪ್ರಾಮುಖ್ಯತೆ ಸ್ಥಾನಮಾನ ಪಡೆಯುತ್ತಿವೆ. ಜರ್ಮನಿಯಲ್ಲಿ ಎ.ಎಫ್.ಡಿ. ಪಕ್ಷದ ಈ ಭಾರಿ ಮುನ್ನಡೆಗೆ ಏನು ಕಾರಣ ಎಂದು ತಿಳಿದುಕೊಂಡರೆ ಇಡೀ ಯುರೋಪಿನಲ್ಲಿ ಹಿಂದೆ ಇಲ್ಲದ ಅಥವಾ ಅಂಚಿನಲ್ಲಿದ್ದ ಉಗ್ರ ಬಲಪಂಥಿಯ ಪಕ್ಷಗಳು ಏಕೆ 'ಮುಖ್ಯ ವಾಹಿನಿ'ಗೆ ಬರುತ್ತಿವೆ ಎಂಬುದನ್ನೂ ತಿಳಿಯಲು ಸಾಧ್ಯವಾಗಬಹುದು.

ಜರ್ಮನಿಯಲ್ಲಿ ಎ.ಎಫ್.ಡಿ. ಪಕ್ಷದ ಮತ್ತು ಇತರ ಯುರೋಪಿಯನ್ ಉಗ್ರ ಬಲಪಂಥೀಯ ಪಕ್ಷಗಳ ಮುನ್ನಡೆಗೆ ಮೂರು ಕಾರಣಗಳನ್ನು ಕೊಡಲಾಗುತ್ತಿದೆ. ಸಾಮಾಜಿಕ ಕಲ್ಯಾಣ ಯೋಜನೆಗಳಲ್ಲಿ ತೀವ್ರ ಕಡಿತದಿಂದ ನಿರುದ್ಯೋಗ, ಬಡತನ ಮತ್ತು ಹಸಿವುಗಳು ಹೆಚ್ಚಿ, ಜನತೆಯ ಅದರಲ್ಲೂ ಕೆಳ ವರ್ಗದ ಆರ್ಥಿಕ ಸ್ಥಿತಿ ತೀರಾ ಕೆಟ್ಟಿರುವುದು ಮೊದಲ ಕಾರಣ. ಯುರೋಪಿನೊಳಗೆ ಮತ್ತು ಹೊರಗಿಂದ ಬರುತ್ತಿರುವ ನಿರಾಶ್ರಿತರ ಸಮಸ್ಯೆ ಉಲ್ಬಣವಾಗುತ್ತಿರುವುದು ಎರಡನೇ ಕಾರಣ. ಮೂರನೆಯದಾಗಿ ಈವರೆಗೆ 'ಮುಖ್ಯ ವಾಹಿನಿ'ಯಲ್ಲಿದ್ದ ಪ್ರಮುಖ ನಡುಪಂಥೀಯ ಪಕ್ಷಗಳ ಬಗ್ಗೆ ವಿಶ್ವಾಸ ಕುಸಿಯುತ್ತಿರುವುದು.

ಜರ್ಮನಿಯ ಬಡ ಪ್ರಾಂತ್ಯ/ಪ್ರದೇಶಗಳ ಹಾಗೂ ಬಡ ಜನರ ಆರ್ಥಿಕ ಸಮಸ್ಯೆಗಳಿಗೆ ನಿರಾಶ್ರಿತರೇ ಕಾರಣ ಎಂದು ಬಡ ಜನರನ್ನು ನಂಬಿಸಲು ಎ.ಎಫ್.ಡಿ.ಗೆ ಸಾಧ್ಯವಾಗಿದೆ. ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಇಂತಹ 'ಸರಳ ಅಪಪ್ರಚಾರ' ಜನತೆಗೆ ಆಕರ್ಷಕವಾಗಿರುತ್ತದೆ. ನಿರಾಶ್ರಿತ ಸಮಸ್ಯೆ ತೀವ್ರವಾಗುತ್ತಿರುವಂತೆ ಎ.ಎಫ್.ಡಿ. ನಾಯಕ 'ನಿರಾಶ್ರಿತರನ್ನು ಗಡಿ ದಾಟಿದಲ್ಲೇ ಗುಂಡು ಹಾಕಬೇಕು', 'ಎಲ್ಲಾ ಮಸೀದಿಗಳನ್ನು ಮುಚ್ಚಬೇಕು' ಎಂಬ 'ಸರಳ ದಿಢೀರ್ ಪರಿಹಾರ'ಗಳೂ ಆಕರ್ಷಕವಾಗಿ ಕಂಡಿರಬೇಕು.

ಜರ್ಮನಿಯ ಅತ್ಯಂತ ಬಡ ರಾಜ್ಯದಲ್ಲಿ ಎ.ಎಫ್.ಡಿ.ಗೆ ಮತ ನೀಡಿದವರ ಒಂದು ಸಮೀಕ್ಷೆಯ ಫಲಿತಾಂಶಗಳು ಅದರ ಮುನ್ನಡೆಗೆ ಕಾರಣಗಳನ್ನು ಸೂಚಿಸುತ್ತವೆ. ಎ.ಎಫ್.ಡಿ.ಗೆ ಮತ ನೀಡಿದವರಲ್ಲಿ ಶೇ. 25 ಮಾತ್ರ ಅವರ ಕಾರ್ಯಕ್ರಮಕ್ಕಾಗಿ ಮತ ನೀಡಿದೆವು ಎಂದು ಹೇಳಿದ್ದಾರೆ. ಶೇ. 52 ಮತದಾರರು ನಿರಾಶ್ರಿತರ ಬಗೆಗಿನ ಆತಂಕದಿಂದಾಗಿಯೇ ಎ.ಎಫ್.ಡಿ.ಗೆ ಮತ ನೀಡಿದೆವು ಎಂದಿದ್ದಾರೆ. ಮುಖ್ಯವಾಹಿನಿಯ ಪಕ್ಷಗಳನ್ನು ಸೋಲಿಸಲಿಕ್ಕಾಗಿ ಎಂದು ಶೇ. 66 ರಷ್ಟು ಮತದಾರರು ಹೇಳಿದ್ದಾರೆ. ಇಲ್ಲಿ ಮುಖ್ಯವಾಹಿನಿಯ ಪಕ್ಷಗಳು ನಿಜವಾಗಿಯೂ ನಡು–ಬಲ ಪಂಥೀಯ ಸಿ.ಡಿ.ಯು., ಎಫ್.ಡಿ.ಆರ್, ನಡು–ಎಡಪಂಥೀಯ ಸೋಶಲಿಸ್ಟ್ (ಎಸ್.ಪಿ.ಡಿ.) ಎಂಬ ಮೂರು ಪಕ್ಷಗಳು. ಎರಡನೇ ಮಹಾಯುದ್ಧದ ನಂತರ ಕೇಂದ್ರದಲ್ಲೂ ಪ್ರಾಂತ್ಯಗಳಲ್ಲೂ ಸತತವಾಗಿ ಅಧಿಕಾರದಲ್ಲಿ ಇದ್ದ ಪಕ್ಷಗಳು. ಕಳೆದ ಎರಡು ದಶಕಗಳಲ್ಲಿ ಸಿ.ಡಿ.ಯು., ಎಸ್.ಪಿ.ಡಿ. ಎರಡೂ ಮಿತವ್ಯಯದ ನವ–ಉದಾರವಾದಿ' ನೀತಿಗಳನ್ನು ಆಕ್ರಾಮಕವಾಗಿ ಜಾರಿ ಮಾಡುತ್ತಿದ್ದು ಅವೆರಡರ ನಡುವೆ ಯಾವುದೇ ವ್ಯತ್ಯಾಸ ಇಲ್ಲ ಎಂದು ಜನತೆಗೆ ಅರಿವಾಗಿದೆ.

ಆದರೆ ಈ ಪಟ್ಟಿಗೆ ಈಗ ಪರಿಸರವಾದಿ ಗ್ರೀನ್ ಮತ್ತು ಎಡ ಪಕ್ಷಗಳೂ ಸೇರಿಕೊಂಡಿವೆ. ಗ್ರೀನ್ ಮತ್ತು ಎಡ ಪಕ್ಷಗಳು ಎಸ್.ಪಿ.ಡಿ. ಜತೆ ಸೇರಿ ಸರಕಾರದಲ್ಲಿ ಇರುವುದು ಹಾಗೂ ಇಂತಹ ಸರಕಾರಗಳು 'ಮಿತವ್ಯಯ'ದ ನೀತಿಗಳಿಗೆ ನಿರ್ಣಾಯಕವಾಗಿ ಬದಲಿಯಾದ ನೀತಿಗಳನ್ನು ಬೆಳೆಸಿ ಜಾರಿ ಮಾಡಲು ಆಗದಿರಬಹುದು ಇದಕ್ಕೆ ಕಾರಣವಾಗಿರಬಹುದು. ಆದರೆ ಇತ್ತೀಚಿನ ಪ್ರಾಂತೀಯ ಚುನಾವಣೆಗಳಲ್ಲಿ ಮುಖ್ಯವಾಹಿನಿಯ ಮೂರು ಪಕ್ಷಗಳ ಜತೆ ಗ್ರೀನ್ ಮತ್ತು ಎಡ ಪಕ್ಷಗಳಿಗೂ ಹಿನ್ನಡೆ ಆಗಿದೆ.

ಸಾಮಾನ್ಯವಾಗಿ ಮಿತವ್ಯಯದ ನವ–ಉದಾರವಾದಿ' ನೀತಿಗಳ ವಿರುದ್ಧ ಪ್ರಚಾರ ಮಾಡುತ್ತಿರುವ ಮತ್ತು ಈಗ ಯುರೋ ಕೂಟದಿಂದ ಹೊರ ಬರಬೇಕು ಎಂದು ವಾದಿಸುತ್ತಿರುವ ಎಡ ಪಕ್ಷಗಳ ಅಜೆಂಡಾ ಜನತೆಗೆ ಇನ್ನೂ ಆಕರ್ಷಕವಾಗಿ ಕಾಣುತ್ತಿಲ್ಲ. ಸ್ಪಷ್ಟ ಎಡ ಬದಲಿ ತೋರಿಸಿದಾಗ ಮುಖ್ಯವಾಹಿನಿಯಲ್ಲದ ಪಕ್ಷಗಳಿಗೆ ವ್ಯಾಪಕವಾಗಿ ಜನ ಬೆಂಬಲಿಸಿದ್ದಾರೆ. ಇದಕ್ಕೆ ಗ್ರೀಸಿನ ಸಿರಿಝಾ ಉತ್ತಮ ಉದಾಹರಣೆ. ಆದರೆ ಸಿರಿಝಾ ಹೇಳಿದ ಬದಲಿಯನ್ನು ಜಾರಿಗೆ ತರದೆ ಹೋದಾಗ ಅದನ್ನು ಆ ಪಕ್ಷದ ಸೈದ್ಧಾಂತಿಕ–ಸಂಘಟನಾ ಮಿತಿ ಎಂದು ಗ್ರಹಿಸುವ ಬದಲು ಇಂತಹ ನೀತಿಗಳೇ ಸಾಧ್ಯವಿಲ್ಲವೇನೋ ಎಂಬ ಹತಾಶೆ ಗ್ರೀಸಿನಲ್ಲೂ ಯುರೋಪಿನ ಇತರ ದೇಶಗಳಲ್ಲೂ ಮೂಡಿದಂತೆ ಕಂಡು ಬರುತ್ತದೆ.

ಎ.ಎಫ್.ಡಿ. ಮತ್ತು ಯುರೋಪಿನ ಇತರ ದೇಶಗಳಲ್ಲೂ ಉಗ್ರ ಬಲಪಂಥೀಯ ಪಕ್ಷಗಳ ಮುನ್ನಡೆ ಎಡಪಕ್ಷಗಳನ್ನು ತೀವ್ರ ಆಂತರಿಕ ಚರ್ಚೆಗೆ ಹಚ್ಚಿದೆ. ಮುಖ್ಯವಾಹಿನಿಯಿಂದ ಸ್ಪಷ್ಟವಾಗಿ ದೂರ ಕಾಯ್ದುಕೊಂಡ ಪಕ್ಷಕ್ಕೂ (ಉದಾ. ಗ್ರೀಕ್ ಕಮ್ಯುನಿಸ್ಟ್ ಪಕ್ಷ) ಬಿಕ್ಕಟ್ಟು ತೀವ್ರವಾದಾಗಲೂ ಜನಬೆಂಬಲ ಏಕೆ ಹೆಚ್ಚುವುದಿಲ್ಲ ? ಯುರೋಕೂಟದ ಅತಿ ಕೇಂದ್ರೀಕೃತ ಅಪ್ರಜಾಸತ್ತಾತ್ಮಕ ನವ–ಉದಾರವಾದಿ ವ್ಯವಸ್ಥೆ ಬಿಕ್ಕಟ್ಟಿಗೆ ಕಾರಣ, ನಿರಾಶ್ರಿತರಲ್ಲ ಎಂದು ಜನರನ್ನು ನಂಬಿಸುವುದು ಹೇಗೆ? ಇನ್ನೂ ಪ್ರಬಲವಾಗಿರುವ ಯುರೋ ಕೂಟದ ಸಂದರ್ಭದಲ್ಲಿ ಒಂದು ದೇಶ ಹೊರ ಬಂದು ಸೆಡ್ಡು ಹೊಡೆದು ನಿಲ್ಲುವುದು ಸಾಧ್ಯವೇ? ಯುರೋಕೂಟದಿಂದ ಹೊರ ಬಂದು ಬದಲಿ ನೀತಿಗಳಿಂದ ಬಂಡವಾಳಶಾಹಿ ವ್ಯವಸ್ಥೆ ಮೀರಿ ನಿಂತಾಗ ಮಾತ್ರ ಈ ಬಿಕ್ಕಟ್ಟಿನಿಂದ ಹೊರ ಬರಲು ಸಾಧ್ಯ ಎಂದು ಜನರಲ್ಲಿ ವಿಶ್ವಾಸ ಮೂಡಿಸುವುದು ಹೇಗೆ? ನವ–ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಶ್ನೆ ಮಾಡದ ಬಲಪಂಥೀಯ ಪಕ್ಷಗಳಿಗೆ ಆಳುವ ವರ್ಗಗಳ ಮಾಧ್ಯಮಗಳ ಬೆಂಬಲ, ಹುಸಿ ವೈರಿಗಳನ್ನು ತೋರಿಸಿ ಮೋಸ ಮಾಡುವ 'ಸವಲತ್ತು'ಗಳು ಇವೆ ನಿಜ. ಆದರೆ ಮುಖ್ಯವಾಹಿನಿಯ ರಾಜಕೀಯದಿಂದ ರೋಸಿ ಹೋದ ಜನರನ್ನು ಎಡ ಕಾರ್ಯಕ್ರಮದತ್ತ ಸೆಳೆಯುವುದು ಹೇಗೆ? ಮುಖ್ಯವಾಹಿನಿ ಪಕ್ಷಗಳ (ಅದರಲ್ಲೂ ಸೋಶಲಿಸ್ಟ್ ಪಕ್ಷಗಳ) ಪ್ರಭಾವದಲ್ಲಿರುವ ದುಡಿಯುವ ಜನತೆಯನ್ನು ಎಡ ಕಾರ್ಯಕ್ರಮಕ್ಕೆ ಗೆದ್ದುಕೊಳ್ಳುವುದು ಹೇಗೆ? ಈ ಎಲ್ಲಾ ಪ್ರಶ್ನೆಗಳು ಕಮ್ಯುನಿಸ್ಟ್ ಮತ್ತು ಎಡ ಪಕ್ಷಗಳನ್ನು ಕಾಡುತ್ತಿವೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಉಗ್ರ ಬಲಪಂಥೀಯ ಪಕ್ಷಗಳ ಮುನ್ನಡೆಯ ಹಿನ್ನೆಲೆಯಲ್ಲಿ ಹಿಂದೆಂದಿಗಿಂತಲೂ ತುರ್ತಿನದಾಗಿದೆ.

ಮೋದಿ ಚಕ್ಕರ್ ಹೊಡೆದ ಅಲಿಪ್ತ ಶೃಂಗಸಭೆ



ಇತ್ತೀಚೆಗೆ ವೆನೆಜುವೇಲಾದ (ಕೆರಿಬಿಯನ್ ದ್ವೀಪ) ಮಾರ್ಗರಿಟಾದಲ್ಲಿ ಸೆಪ್ಟೆಂಬರ್ 13ರಿಂದ 18ರ ವರೆಗೆ ನಡೆದ 17ನೇ ಅಲಿಪ್ತ ರಾಷ್ಟ್ರಗಳ ಸಮ್ಮೇಳನ ಎರಡು ಕಾರಣಗಳಿಗೆ ವಿಶಿಷ್ಟವಾಗಿತ್ತು. 120 ಅಲಿಪ್ತ ದೇಶಗಳ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ವೆನೆಜುವೇಲಾ ಈಗ ಅಲಿಪ್ತ ದೇಶಗಳ ಸಂಘಟನೆಯ ನಾಯಕನಾಗಿದ್ದು ಅದಕ್ಕೆ ಅಂತರ್ರಾಷ್ಟ್ರೀಯ ರಾಜಕೀಯದಲ್ಲಿ ಅದರ ಹಿಂದಿನ ಖ್ಯಾತಿ ಪ್ರಾಮುಖ್ಯತೆ, ಚೈತನ್ಯ ತಂದು ಕೊಡಲು ಹೆಣಗುತ್ತಿದೆ. 1961ರಲ್ಲಿ ಅಲಿಪ್ತ ದೇಶಗಳ ಚಳುವಳಿ/ಸಂಘಟನೆ ಸ್ಥಾಪಿಸಿದ ನಂತರ ಇದು ಕೇವಲ ಎರಡನೇ ಬಾರಿ ಭಾರತದ ಪ್ರಧಾನಿ ಅಲಿಪ್ತ ಶೃಂಗಸಭೆಯಲ್ಲಿ ಭಾಗವಹಿಸುತ್ತಿಲ್ಲ. 1979ರಲ್ಲಿ ಹಂಗಾಮಿ ಪ್ರಧಾನಿಯಾಗಿದ್ದ ಚರಣ್ ಸಿಂಗ್ ಮಾತ್ರ ಈ ವರೆಗೆ ಅಲಿಪ್ತ ಶೃಂಗಸಭೆಯಲ್ಲಿ ಭಾಗವಹಿಸಿರಲಿಲ್ಲ. ಪ್ರಧಾನಿಯಾದ ಮೇಲೆ ಯಾವುದೇ ವಿದೇಶ ಪ್ರವಾಸದ ಅವಕಾಶ ತಪ್ಪಿಸಿಕೊಳ್ಳದ ಮೋದಿ ಅಲಿಪ್ತ ಶೃಂಗಸಭೆಗೆ ಚಕ್ಕರ್ ಹೊಡೆದಿದ್ದು ಏಕೆ? ಮೋದಿ ಅವರನ್ನು ಭಾಗವಹಿಸಲು ಒತ್ತಾಯಿಸಲು ವೆನೆಜುವೇಲಾದ ವಿದೇಶ ಸಚಿವರು ಸ್ವತಃ ಬಂದಿದ್ದರೂ ಅವರು ತಮ್ಮ ನಿರ್ಧಾರ ಬದಲಾಯಿಸಲಿಲ್ಲ? 'ದೊಡ್ಡಣ್ಣ' ಒಬಾಮಾ ಮೋದಿಗೆ ಅಲಿಪ್ತ ಶೃಂಗಸಭೆಗೆ (ಅದರಲ್ಲೂ ಅವರ ವೈರಿ ದೇಶ ವೆನೆಜುವೇಲಾದಲ್ಲಿ ನಡೆಯುತ್ತಿರುವ) ಹೋಗಬಾರದು ಎಂದು ಎಚ್ಚರಿಸಿದ್ದರೇ? ಅಥವಾ ಸಾಮ್ರಾಜ್ಯಶಾಹಿಗೆ ವಿರೋ ಧದ, ಸಾರ್ವಭೌಮ ನೀತಿಗಳನ್ನು ಅನುಸರಿಸುವ, ಇತರ ಮೂರನೇ ಜಗತ್ತಿನ ಬಡ ದೇಶಗಳ ಜತೆ ಸೌಹಾರ್ದದ ನೀತಿಗಳಿಗೆ ಮೋದಿ ಸರಕಾರ ಪೂರ್ಣವಾಗಿ ಎಳ್ಳು ನೀರು ಬಿಟ್ಟಿದೆ ಎಂದು ಮೋದಿ ಜಗತ್ತಿಗೆ (ಅಮೆರಿಕದ ಮತ್ತು ಇತರ ಧಣಿಗಳಿಗೆ ಸೇರಿ) ಹೇಳುತ್ತಿದ್ದಾರಾ?

ಅಲಿಪ್ತ ಶೃಂಗಸಭೆಗೆ ಹೋಗಿದ್ದ ಉಪಾಧ್ಯಕ್ಷ ಅನ್ಸಾರಿ ಅವರ ಅಧಿಕೃತ ಭಾಷಣ ಅಲಿಪ್ತ ಚಳುವಳಿಯ ಮೂಲಭೂತ ಧೋರಣೆಗಳು ಈಗಲೂ ಪ್ರಸ್ತುತ ಎಂದು ಹೇಳಿದರೂ, ಒಟ್ಟು ಒತ್ತು 'ಭಯೋತ್ಪಾದನೆ'ಯ ವಿರುದ್ಧ ಹೋರಾಡುವುದರ ಮೇಲಿತ್ತು ಎಂಬುದನ್ನು ಗಮನಿಸಬೇಕು.

ವಿದೇಶದಲ್ಲಿರುವ 3 ಮಕ್ಕಳಲ್ಲಿ 1 ಮಗು ನಿರಾಶ್ರಿತ




ವಿದೇಶದಲ್ಲಿ ವಾಸಿಸುತ್ತಿರುವ 3 ಮಕ್ಕಳಲ್ಲಿ 1 ಮಗು ನಿರಾಶ್ರಿತ. ಎನ್ನುವ ಗಂಭೀರ ಮಾಹಿತಿ ಬಂದಿದೆ. ವಯಸ್ಕರಲ್ಲಿ ಈ ಸಂಖ್ಯೆ 20 ರಲ್ಲಿ 1 ಎನ್ನುವಾಗ ಇದು ಇನ್ನೂ ಬೆಚ್ಚಿಬೀಳುವ ಸಂಗತಿ. ಇದನ್ನು ಹೊರಗೆಡವಿದೆ 'ನಿರಾಶ್ರಿತ ಮತ್ತು ವಲಸೆ ಮಕ್ಕಳ ಬಿಗಡಾಯಿಸುತ್ತಿರುವ ಬಿಕ್ಕಟ್ಟು' ಎಂಬ ಯುನಿಸೆಫ್ ವರದಿ. ವಲಸೆ ಹೋದ ಅಥವಾ ನಿರಾಶ್ರಿತರಾದ 5 ಕೋಟಿ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಹಿಂಸಾಚಾರದಿಂದ ತಪ್ಪಿಸಿಕೊಳ್ಳಲು ಹೋದವರು. 2015ರಲ್ಲಿ ಮುಗಿದ ದಶಕದಲ್ಲಿ ನಿರಾಶ್ರಿತ ಮಕ್ಕಳ ಸಂಖ್ಯೆ ಅದರ ಹಿಂದಿನ ದಶಕಕ್ಕೆ ಹೋಲಿಸಿದರೆ ಇಮ್ಮಡಿ ಆಗಿದೆ. ಕಳೆದ ವರ್ಷದಲ್ಲಿ ಸಿರಿಯಾ ಮತ್ತು ಅಫ್ಘಾನಿಸ್ತಾನದ ನಿರಾಶ್ರಿತ ಮಕ್ಕಳು ಒಟ್ಟು ನಿರಾಶ್ರಿತ ಮಕ್ಕಳ ಅರ್ಧದಷ್ಟು ಇದ್ದರು. ಯುದ್ಧಗಳೇ ಈ ಸ್ಥಿತಿಗೆ ಕಾರಣ ಎಂದು ಇದು ಸ್ಪಷ್ಟ ಪಡಿಸುತ್ತದೆ. ಬಾಲ ಸೈನಿಕರನ್ನು ಬಳಸಿದ ಎರಡು ಪ್ರಮುಖ ಪ್ರಕರಣಗಳಲ್ಲಿ ಎರಡು ಮಹತ್ವದ ತೀರ್ಪುಗಳು ಬಂದವು. ಬಾಲಸೈನಿಕರನ್ನು ಬಳಸಿದ್ದರ ವಿರುದ್ಧ – ಸಿಯೆರಾ ಲಿಯೊನೆ ಸಶಸ್ತ್ರ ಬಂಡುಕೋರ ಗುಂಪು (2007) ಮೇಲೆ ವಿಶ್ವಸಂಸ್ಥೆ ಬೆಂಬಲಿತ ಟ್ರಿಬ್ಯುನಲ್ ಮತ್ತು ಕಾಂಗೊದ ಯುದ್ಧಕೋರ ಥಾಮಸ್ ಲುಬಾಂಗಾ (2010) ಮೇಲೆ ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟು– ಆಪಾದನೆ ರುಜುವಾತಾದ ತೀರ್ಪು ನೀಡಿವೆ.

ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಜಾಗತಿಕ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಅಭಿಯಾನವಾಗಲಿ, ಸಹಸ್ರಮಾನ ಬೆಳವಣಿಗೆ ಗುರಿಗಳಾಗಲಿ ಬರಿಯ ಗಗನಕುಸುಮ ಆಗಬಹುದಷ್ಟೇ. ಮಕ್ಕಳ, ಹದಿರೆಯದ ಹುಡುಗ–ಹುಡುಗಿಯರ ಕಳ್ಳ ಸಾಗಾಣಿಕೆ, ಲೈಂಗಿಕ ವ್ಯಾಪಾರದಲ್ಲಿ ದುರ್ಬಳಕೆ, ಸಂಘರ್ಷಮಯ ಪ್ರದೇಶಗಳಲ್ಲಿ ಮಿಲಿಟರಿ ಸಂಘರ್ಷದಲ್ಲಿ ಬಳಕೆ – ಇವೆಲ್ಲಾ ಮಕ್ಕಳ ಬೆಳವಣಿಗೆಯ ಯಾವುದೇ ತಕ್ಷಣದ ಹಾಗೂ ದೂರಗಾಮಿ ಯೋಜನೆಗಳನ್ನು ಅರ್ಥಹೀನಗೊಳಿಸಬಹುದು ಎಂದು ಯುನಿಸೆಫ್ ವರದಿ ತಿಳಿಸಿದೆ.

ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ಯುನಿಸೆಫ್ ಹಲವು ಕ್ರಮಗಳನ್ನು ಸೂಚಿಸಿದೆ. ಸಂಘರ್ಷಗಳು, ಹಿಂಸಾಚಾರ ಮತ್ತು ಕಡು ಬಡತನದ ಮೂಲ ಕಾರಣಗಳನ್ನು ಹುಡುಕಿ ಅವನ್ನು ಮೂಲೋತ್ಪಾಟನೆ ಮಾಡಬೇಕೆಂದಿದೆ. ಸಿರಿಯಾ, ಅಫ್ಘಾನಿಸ್ತಾನದ ಮುಂತಾದ ಹಲವು ಸಂಘರ್ಷಗಳ ಮತ್ತು ಈಗ ನಿರಾಶ್ರಿತರ ಬಿಕ್ಕಟ್ಟಿನ ಮೂಲಕಾರಣಗಳು ಅಮೆರಿಕ, ಯುರೋ ಕೂಟದ ಕ್ರಮಗಳೇ. ಇವು ಅಂತಹ ಕ್ರಮಗಳನ್ನು ತೆಗೆದುಕೊಳ್ಳುವಾಗ ಬೇರೆ ಕಡೆಗೆ ನೋಡುತ್ತಿತ್ತು ವಿಶ್ವಸಂಸ್ಥೆಯ ಇನ್ನೊಂದು ಅಂಗಸಂಸ್ಥೆ ಭದ್ರತಾ ಸಮಿತಿ. ಕೆಲವು (ಲಿಬ್ಯಾ, ಇರಾಕ್ ಇತ್ಯಾದಿ) ಸಂಘರ್ಷಗಳಲ್ಲಿ ಶಾಮೀಲಾಗಿಯೂ ಇತ್ತು. ಈ ವೈರುಧ್ಯಗಳನ್ನು ನಿವಾರಿಸುವುದು ಹೇಗೆ?

ಯುರೋಪಿನ ಮತ್ತು ಇತರೆಡೆ ಆಶ್ರಯ ಕೇಳುತ್ತಿರುವ ನಿರಾಶ್ರಿತ ಮಕ್ಕಳನ್ನು (ಅದರಲ್ಲೂ ಕುಟುಂಬದಿಂದ ಪ್ರತ್ಯೇಕವಾಗಿರುವ ಒಂಟಿ ಮಕ್ಕಳನ್ನು ಬಂಧಿಸಬಾರದು. ಅವರಿಗೆ ಆಶ್ರಯ ಕೊಡಬೇಕು ಎಂಬ ಸೂಚನೆ ಹೆಚ್ಚು ಪ್ರಾಯೋಗಿಕವಾದ್ದು. ಇದು ಸುಮಾರು 1.1 ಕೋಟಿ ನಿರಾಶ್ರಿತ ಮಕ್ಕಳಿಗೆ ತಕ್ಷಣವೇ ಉಪಯೋಗಿಯಾದ್ದು.

RNI No. KARKAN /2006/17926 Posted on every Satuarday
Licensed to Post without prepayment License No. WPP-283



"ಡಾ. ಅಂಬೇಡ್ಕರ್ ಅವರ 125ನೇ ವರ್ಷಾಚರಣೆ ಮಾಡುತ್ತಿರುವ ಇಂದು ದೇಶದ ಮುಂದೆ ಅಗಾಧ ಸಮಸ್ಯೆಗಳೂ ಸವಾಲುಗಳೂ ಇವೆ. ವರ್ತಮಾನದ ಹೆಚ್ಚಿನ ಸಮಸ್ಯೆಗಳ ಮೂಲಬೇರು ಶತಮಾನಗಳ ಜಾತಿ–ಅಸ್ಪೃಶ್ಯತೆ, ಲಿಂಗ, ವರ್ಗ ಆಧಾರಿತ ಬೇಧಭಾವ, ಅಸಮಾನತೆ ಮತ್ತು ದೌರ್ಜನ್ಯಗಳು. ಅವುಗಳನ್ನು ಹೆಚ್ಚಿಸುತ್ತಿರುವ ಹಾಗೂ ಅವುಗಳ ಆಧಾರದ ಮೇಲೆ ಆಳ್ವಿಕೆ ನಡೆಸುತ್ತಿರುವ ಮಾರುಕಟ್ಟೆ ಮತ್ತು ಧಾರ್ಮಿಕ ಮೂಲಭೂತವಾದಿಗಳ ದುಷ್ಟಕೂಟದ ಆಳ್ವಿಕೆಗೆ ಸವಾಲು ಹಾಕಬೇಕಾಗಿದೆ. ಇದಕ್ಕಾಗಿ ಜಾತಿ–ಅಸ್ಪೃಶ್ಯತೆ, ಲಿಂಗ ಮತ್ತು ವರ್ಗ ಆಧಾರಿತ ಅಸಮಾನತೆಗಳ ನಾಶಕ್ಕೆ ಪಣ ತೆ–ೂಟ್ಟ ಚಳುವಳಿಗಳನ್ನು ಒಟ್ಟಿಗೆ ಬೆಸೆಯಬೇಕಾಗಿದೆ. ವರ್ತಮಾನದ ಜತೆ ಮುಖಾಮುಖಿಯಾಗುವ ಡಾ. ಅಂಬೇಡ್ಕರ್ ಅವರ ಬದುಕು–ಬರಹ–ಭಾಷಣಗಳು ಪ್ರತಿನಿಧಿಸುವ ಅವರ ಚಿಂತನೆಗಳ ಮರು ಓದು ಇದಕ್ಕೆ ಹೊಸ ಹೊಳಹುಗಳನ್ನು ಕೊಡುವ ಮೂಲಕ ದೊಡ್ಡ ಕೊಡುಗೆ ಕೊಡಬಲ್ಲುದು" ಎಂದು ಸಮುದಾಯ ಈ ಉಪನ್ಯಾಸ ಮಾಲೆಯ ಆಶಯ ತಿಳಿಸುವ ಬ್ರೋಶರ್ ನಲ್ಲಿ ಹೇಳಿದೆ.

ಈ ನಿಟ್ಟಿನಲ್ಲಿ ಸಮುದಾಯ ಕರ್ನಾಟಕ ಡಾ. ಅಂಬೇಡ್ಕರ್ ಅವರ 125ನೇ ವರ್ಷಾಚರಣೆಯ ಭಾಗವಾಗಿ ತನ್ನ ಕಿರುಕಾಣಿಕೆ ಕೊಡಬಯಸಿದೆ. ವರ್ತಮಾನದ ಜತೆ ಮುಖಾಮುಖಿಯಾಗುವ ಡಾ. ಅಂಬೇಡ್ಕರ್ ಅವರ ಚಿಂತನೆಗಳ ಮರು ಓದನ್ನು ಮಾಡಬಲ್ಲ ರಾಜ್ಯದ ಪ್ರಮುಖ ಚಿಂತಕರಿಂದ ಹಲವು ವಿಷಯಗಳ ಬಗ್ಗೆ ವಿಶೇಷ ಉಪನ್ಯಾಸ ಮಾಲೆಯನ್ನು ಸಂಘಟಿಸಲು ನಿರ್ಧರಿಸಿದೆ. ಇಂತಹ 20 ವಿಶೇಷ ಉಪನ್ಯಾಸಗಳನ್ನು ಮುಂದಿನ ವರ್ಷದ ಡಾ. ಅಂಬೇಡ್ಕರ್ ಹುಟ್ಟು ಹಬ್ಬದವರೆಗೆ ರಾಜ್ಯದ 20 ಸ್ಥಳಗಳಲ್ಲಿ ಏರ್ಪಡಿಸಲಿದೆ. ಈ ಉಪನ್ಯಾಸ ಮಾಲೆಯ ಸಮಾರೋಪ ಬೆಂಗಳೂರಲ್ಲಿ ನಡೆಯಲಿದೆ. ವಿಶೇಷ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ತಂದು ಅಂದು ಬಿಡುಗಡೆ ಮಾಡಲಾಗುವುದು. ಇದರ ಮೊದಲ ಹಂತವಾಗಿ ನವೆಂಬರ್ ವರೆಗಿನ 10 ವಿಶೇಷ ಉಪನ್ಯಾಸಗಳ ಕಾರ್ಯಕ್ರಮವನ್ನು ಆಖೈರುಗೊಳಿಸಿದೆ.

ವರ್ತಮಾನದ ಜತೆ ಡಾ. ಅಂಬೇಡ್ಕರ್ ಮರು ಓದಿನಲ್ಲಿ ಪಾಲುಗೊಂಡು ಯಶಸ್ವಿಗೊಳಿಸಲು ಸಮುದಾಯ ಕರೆ ನೀಡಿದೆ.

ದಿನಾಂಕ	ಉಪನ್ಯಾಸದ ವಿಷಯ	ಉಪನ್ಯಾಸಕರು	ಸ್ಥಳ
24 ಸೆಪ್ಟೆಂಬರ್	ಸಮಕಾಲೀನ ಚರಿತ್ರೆ ರಚನೆಯಲ್ಲಿ ಅಂಬೇಡ್ಕರ್ ಮತ್ತು ದಲಿತ ಐಡೆಂಟಿಟಿಯ ಪ್ರಶ್ನೆಗಳು	ಡಾ. ಚಿನ್ನಸ್ವಾಮಿ ಸೋಸಲೆ	ಸಿಂಧನೂರು
25 ಸೆಪ್ಟೆಂಬರ್	ಡಾ.ಅಂಬೇಡ್ಕರ್ ಅವರ ಅಭಿವೃದ್ಧಿ ಚಿಂತನೆಗಳು ಮತ್ತು ಪ್ರಸ್ತುತ ಕರ್ನಾಟಕ	ಡಾ. ಟಿ. ಆರ್ ಚಂದ್ರಶೇಖರ	ಕುಷ್ಟಗಿ
2 ಅಕ್ಟೋಬರ್	ಗಾಂಧಿ – ಅಂಬೇಡ್ಕರ್ : ಚಾರಿತ್ರಿಕ ಮುಖಾಮುಖಿ	ಸದಾಶಿವ ಮರ್ಜಿ	ಕುಂದಾಪುರ
4 ಅಕ್ಟೋಬರ್	ಪ್ರಸ್ತುತ ಭಾರತದ ಪ್ರಜಾಸತ್ತೆ ಎದುರಿಸುತ್ತಿರುವ ಸವಾಲುಗಳು ಮತ್ತು ಅಂಬೇಡ್ಕರ್‌ಚಿಂತನೆಗಳ ಪ್ರಸ್ತುತತೆ	ಪ್ರೊ. ರಾಜೇಂದ್ರ ಚೆನ್ನಿ	ದಾವಣಗೆರೆ
8 ಅಕ್ಟೋಬರ್	ಡಾ. ಅಂಬೇಡ್ಕರ್ ಮತ್ತು ಮಹಿಳಾ ವಿಮೋಚನೆ	ಡಾ. ವಿನಯಾ ಒಕ್ಕುಂದ	ದಾಂಡೇಲಿ
15 ಅಕ್ಟೋಬರ್	ಜಾತಿ–ವರ್ಗ ನಾಶದ ಚಳುವಳಿಯಲ್ಲಿ ಅಂಬೇಡ್ಕರ್ ಮತ್ತು ಮಾರ್ಕ್ಸ್ ದಾರಿಗಳು	ಡಾ. ಬಿ.ಎಂ. ಪುಟ್ಟಯ್ಯ	ಹಾಸನ
16 ಅಕ್ಟೋಬರ್	ಡಾ.ಅಂಬೇಡ್ಕರ್ ಬಗ್ಗೆ ಸಂಘ ಪರಿವಾರದ ದ್ವಿಮುಖ ತಂತ್ರ ಎದುರಿಸುವುದು ಹೇಗೆ?	ದಿನೇಶ ಅಮಿನ್‌ಮಟ್ಟು	ರಾಯಚೂರು
21 ಅಕ್ಟೋಬರ್	ಸ್ವಾತಂತ್ರ್ಯ ಚಳುವಳಿ ಮತ್ತು ಡಾ. ಅಂಬೇಡ್ಕರ್	ಪ್ರೊ. ಮ ನ ಜವರಯ್ಯ	ಬೆಂಗಳೂರು
22 ಅಕ್ಟೋಬರ್	ಅಂಬೇಡ್ಕರ್ ಕನಸು ಕಂಡ ಸಮಾಜವಾದಿ ಪ್ರಜಾಪ್ರಭುತ್ವ	ಜಿ. ಎನ್. ನಾಗರಾಜ್	ಧಾರವಾಡ
5 ನವೆಂಬರ್	ಅಂಬೇಡ್ಕರ್ ಮತ್ತು ಸಂವಿಧಾನ ರಚನಾಕಾಲದ ಪ್ರಮುಖ ವಾಗ್ವಾದಗಳು	ಕೆ ಫಣಿರಾಜ	ಅಂಕೋಲಾ

'ಗ್ರಾಮ ಅಸ್ಪೃಶ್ಯ ಕೇಂದ್ರಿತ ಆದಾಗ ಗ್ರಾಮ ಕೇಂದ್ರಿತವಾದ ನಾಡನ್ನು ಕಟ್ಟಬಹುದು': ದೇವನೂರ


'ಅಸ್ಪೃಶ್ಯರನ್ನು ಊರಿನ ಹೊರಗೆ ಇಟ್ಟಿದ್ದೇವೆ. ಬದಲಿಗೆ ಅವರನ್ನು ಊರು, ಮನ್ಸಿನ ಒಳಗೆ ಬಿಟ್ಟುಕೊಂಡಾಗ ಆರೋಗ್ಯಯುತ ಗ್ರಾಮ ನಿರ್ಮಾಣವಾಗುತ್ತದೆ' ಎಂದು ಸಾಹಿತಿ ದೇವನೂರ ಮಹಾದೇವ ಅಭಿಪ್ರಾಯಪಟ್ಟರು.

ಸೆಪ್ಟಂಬರ್ 10ರಂದು ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಡಾ॥ಬಿ.ಆರ್.ಅಂಬೇಡ್ಕರ್ ಅವರ 125ನೇ ವರ್ಷಾಚರಣೆ ಪ್ರಯುಕ್ತ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ನಿವೃತ್ತ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ ದಾಸ್ ಅವರ "ಡಾ॥ಬಿ.ಆರ್. ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನು" ಎಂಬ ಕಿರುಹೊತ್ತಿಗೆ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಊರಿನಿಂದ ಆಚೆಗೆ ಅಸ್ಪೃಶ್ಯರನ್ನು ಎಸೆದಿದ್ದೇವೆ. ಅವರನ್ನೂ ಮನಸ್ಸಿನೊಳಗೆ ಇಟ್ಟುಕೊಂಡೇ ಅಸ್ಪೃಶ್ಯ ಕೇಂದ್ರಿತ ಗ್ರಾಮ ಕಟ್ಟಬಹುದು, ಆಗ ಗ್ರಾಮ ಆರೋಗ್ಯವಾಗಿರುತ್ತದೆ' ಎಂದರು. ಗಾಂಧಿ ಅವರು ಗ್ರಾಮ ಸ್ವರಾಜ್ ಬಗ್ಗೆ ಹೇಳುತ್ತಾರೆ, ಅಸ್ಪೃಶ್ಯ ಕೇಂದ್ರದ ಬಗ್ಗೆ ಹೇಳುವುದಿಲ್ಲ. ಅಸ್ಪೃಶ್ಯ ಕೇಂದ್ರಿತ ಗ್ರಾಮ ಆದಾಗ ಗ್ರಾಮ ಕೇಂದ್ರಿತವಾದ ನಾಡನ್ನು ಕಟ್ಟಬಹುದು' ಎಂದು ದೇವನೂರ ಸಲಹೆ ನೀಡಿದರು.


'1893ರಲ್ಲಿ ಗಾಂಧಿ ಅವರು ಆಫ್ರಿಕಾದಲ್ಲಿ ರೈಲಿನಿಂದ ಕರಿಯ ಎಂದು ದಬ್ಬಿಸಿಕೊಳ್ಳುತ್ತಾರೆ, 1917ರಲ್ಲಿ ಅಂಬೇಡ್ಕರ್ ಅವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಿಧ್ಯಾಭ್ಯಾಸ ಮಾಡಿ ಬರೋಡದಲ್ಲಿ ವಕೀಲಿ ವೃತ್ತಿ ಮಾಡಲು ಬಂದಾಗ ಬಾಡಿಗೆ ಮನೆ ಸಿಗದೆ ಜಾತಿ ಹೆಸರು ಹೇಳಿಕೊಳ್ಳದೆ ಹೋಟೇಲ್‌ನಲ್ಲಿ ಉಳಿದುಕೊಳ್ಳುತ್ತಾರೆ. ಜಾತಿ ಗೊತ್ತಾದಾಗ ಅಲ್ಲಿಯೂ ಇಟ್ಟುಕೊಳ್ಳದೆ ಬೀದಿಗೆ ತಳ್ಳುತ್ತಾರೆ, ಆಗ ಮನಸ್ಸು ಖಾಲಿಯಾಗಿತ್ತು ಎಂದು ಹೇಳುತ್ತಾರೆ ಅಂಬೇಡ್ಕರ್. ಗಾಂಧಿಯನ್ನು ರೈಲಿನಿಂದ ದಬ್ಬಿದ ಘಟನೆಯನ್ನು ನಮಗೇ ಆದ ಅವಮಾನ ಎಂದು ಭಾರತ ಭಾವಿಸಿದೆ. ಆದರೆ ಅಂಬೇಡ್ಕರ್ ಜಾತಿ ಕಾರಣಕ್ಕೆ ದಬ್ಬಿಸಿಕೊಂಡು ಬೀದಿಗೆ ಬಂದಿದ್ದಾರೆ, ಇದನ್ನು ತನ್ನದೇ ಅವಮಾನ ಎಂದು ದೇಶ ಭಾವಿಸಿಲ್ಲ. ಅದು ದೊಡ್ಡದು, ಇದು ಚಿಕ್ಕದು ಎಂದು ಹೇಳುವುದಿಲ್ಲ. ಭಾರತೀಯ ಮನಸ್ಥಿತಿ ಅರ್ಥಮಾಡಿಕೊಳ್ಳಲು ನೋಡುತ್ತಿದ್ದೇನೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ನ್ಯಾ.ಎಚ್.ಎನ್.ನಾಗಮೋಹನ್ ದಾಸ್ ಮಾತನಾಡಿ, 'ಜಾತ್ಯತೀತತೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವವನ್ನು ನಾನು ಅನೇಕ ವರ್ಷಗಳ ಕಾಲ ಅರ್ಥಮಾಡಿಕೊಂಡಿದ್ದೇ ಬೇರೆ ರೀತಿ, ಹೆಚ್ಚೆಚ್ಚು ಅಂಬೇಡ್ಕರ್ ಅವರನ್ನು ಓದಿಕೊಂಡಾಗ ಈ ಪದಗಳಿಗೆ ಸಿಕ್ಕ ಅರ್ಥವೇ ಬೇರೆ. ಅದನ್ನು ಈ ಪುಸ್ತಕದಲ್ಲಿ ತಿಳಿಸಿದ್ದೇನೆ' ಎಂದರು. 'ಈ ವಿಷಯಗಳ ಬಗ್ಗೆ ಅಂಬೇಡ್ಕರ್ ಅವರ ಚಿಂತನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಿತ್ತು' ಎಂದು ಸಲಹೆ ನೀಡಿದರು.



ವೇದಿಕೆಯಲ್ಲಿ ಹಿರಿಯ ವಕೀಲರಾದ ಕೆ.ಸುಬ್ಬರಾವ್, ಮಾಜಿ ಕಾರ್ಮಿಕ ಆಯುಕ್ತರಾದ ವಸಂತಕುಮಾರ್ ಹಿಟ್ಟಣಗಿ, ಸಿಐಟಿಯು ರಾಜ್ಯ ಅ ಧ್ಯಕ್ಷರಾದ ವಿಜೆಕೆ ನಾಯರ್, ಜಿಲ್ಲಾಧ್ಯಕ್ಷರಾದ ಕೆ.ಪ್ರಕಾಶ್, ಜಿಲ್ಲಾ ಖಜಾಂಚಿ ಜೋಮಿ ಜಾರ್ಜ್ ಉಪಸ್ಥಿತರಿದ್ದರು. ಬಿ.ರಾಜಶೇಖರಮೂರ್ತಿ ನಿರೂಪಣೆ ಮಾಡಿದರು. ಲಿಂಗರಾಜು, ಕೆ.ಎಸ್.ಲಕ್ಷ್ಮಿ ಮತ್ತು ಸಂಗಡಿಗರು ಹೋರಾಟದ ಹಾಡುಗಳನ್ನು ಹಾಡಿದರು.

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**